بِسۡمِ اللّٰہِ الرَّحۡمٰنِ الرَّحِیۡمِ    نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ    وَعَلٰی عَبۡدِہِ الۡمَسِیۡحِ الۡمَوۡعُوۡد


وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಪಾದಕರು:
ತಾರಿಖ್ ಅಹ್ಮದ್ ಇದ್ರೀಸ್.


## ಅಲ್ಲಾಹನ ಉಪದೇಶ — ನಫ್ಸ್ ಮೇಲಿನ ಜಿಹಾದ್ ಮಾಡಲು ಉಪದೇಶ

يٰۤاَيُّهَا الَّذِيۡنَ اٰمَنُوۡا هَلۡ اَدُلُّكُمۡ عَلٰى تِجَارَةٍ تُنۡجِيۡكُمۡ مِّنۡ عَذَابٍ اَلِيۡمٍ ۔ تُؤۡمِنُوۡنَ بِاللّٰهِ وَ رَسُوۡلِهٖ وَ تُجَاهِدُوۡنَ فِىۡ سَبِيۡلِ اللّٰهِ بِاَمۡوَالِكُمۡ وَ اَنۡفُسِكُمۡ ؕ ذٰلِكُمۡ خَيۡرٌ لَّكُمۡ اِنۡ كُنۡتُمۡ تَعۡلَمُوۡنَ

(ಅಸ್ಸಫ್ಫ್ : 11-12)

ಅಂದರೆ: ಎಲೈ ವಿಶ್ವಾಸಿಗಳೇ, ಯಾತನಾಮಯವಾದ ಶಿಕ್ಷೆಯಿಂದ ನಿಮ್ಮನ್ನು ಪಾರು ಮಾಡುವ ಒಂದು ವ್ಯಾಪಾರ ಕುರಿತು ನಾನು ನಿಮಗೆ ತಿಳಿಯಪಡಿಸಲೇ? (ಅದೇನೆಂದರೆ) ನೀವು ಅಲ್ಲಾಹನನ್ನೂ ಅವನ ಸಂದೇಶವಾಹಕನನ್ನೂ ನಂಬಿರಿ ಹಾಗೂ ನಿಮ್ಮ ಸಂಪತ್ತಿನಿಂದಲೂ ದೇಹದಿಂದಲೂ ಅಲ್ಲಾಹನ ಮಾರ್ಗದಲ್ಲಿ ತೀವ್ರವಾಗಿ ಪರಿಶ್ರಮಿಸಿರಿ. ನೀವು ಮನಗಂಡರೆ ಅದು ನಿಮಗೆ ಗುಣಕರವಾಗಿದೆ.


ಸಂಪುಟ: 07, ಸಂಚಿಕೆ: 36, 03 ಸೆಪ್ಟೆಂಬರ್ 2026, 03 ತಬೂಕ್ 1405 ಹಿಜರಿ ಶಮ್ಸಿ,
20 ರಬೀಉಲ್ ಅವ್ವಲ್ 1448 ಹಿಜರಿ ಖಮರಿ. (www.akhbarbadr.in)




## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ — ಸ್ವಂತ ನಫ್ಸ್ ವಿರುದ್ಧದ ಹೋರಾಟದ

فَضَالَةَ بۡنَ عُبَيۡدٍ يُحَدِّثُ، عَنۡ رَسُولِ اللّٰهِ صَلَّى اللّٰهُ عَلَيۡهِ وَسَلَّمَ أَنَّهُ قَالَ: " كُلُّ مَيِّتٍ يُخۡتَمُ عَلَى عَمَلِهِ إِلَّا الَّذِي مَاتَ مُرَابِطًا فِي سَبِيلِ اللّٰهِ، فَإِنَّهُ يُنۡمَى لَهُ عَمَلُهُ إِلَى يَوۡمِ الۡقِيَامَةِ، وَيَأۡمَنُ مِنۡ فِتۡنَةِ الۡقَبۡرِ "، وَسَمِعۡتُ رَسُولَ اللّٰهِ صَلَّى اللّٰهُ عَلَيۡهِ وَسَلَّمَ يَقُولُ: " الۡمُجَاهِدُ مَنۡ جَاهَدَ نَفۡسَهُ ۔ [سنن ترمذی/ کتاب فضائل الجہاد عن رسول اللہ صلی اللہ علیہ وسلم/حدیث: 1621]

ಹಝ್ರತ್ ಫಝಾಲಾ ಬಿನ್ ಉಬೈದ್ ರಝಿಯಲ್ಲಾಹು ಅನ್ಹು ಅವರು ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವ ಸಲ್ಲಂ ಅವರು ಹೀಗೆ ಹೇಳಿದರು: ಪ್ರತಿಯೊಬ್ಬ ಮರಣಹೊಂದಿದ ವ್ಯಕ್ತಿಯ ಸತ್ಕಾರ್ಯಗಳ ದಾಖಲೆಯು ಅವನ ಮರಣದೊಂದಿಗೆ ಮುಕ್ತಾಯಗೊಳ್ಳುತ್ತದೆ. ಆದರೆ ಅಲ್ಲಾಹನ ಮಾರ್ಗದಲ್ಲಿ ಗಡಿಕಾವಲು (ರಿಬಾತ್) ಮಾಡುತ್ತಾ ನಿಧನ ಹೊಂದಿದ ವ್ಯಕ್ತಿಯ ವಿಷಯ ಮಾತ್ರ ಭಿನ್ನವಾಗಿದೆ. ಅವನ ಸತ್ಕಾರ್ಯಗಳ ಪ್ರತಿಫಲವು ಖಿಯಾಮತ್ ದಿನದವರೆಗೆ ನಿರಂತರವಾಗಿ ಹೆಚ್ಚುತ್ತಿರುತ್ತದೆ. ಅಲ್ಲದೆ, ಅವನು ಸಮಾಧಿಯ ಪರೀಕ್ಷೆ (ಫಿತ್ನತುಲ್ ಕಬ್ರ್) ಯಿಂದಲೂ ಸುರಕ್ಷಿತನಾಗಿರುತ್ತಾನೆ. ಹಝ್ರತ್ ಫಝಾಲಾ(ರ) ಅವರು ಮುಂದುವರಿದು ಹೇಳುತ್ತಾರೆ: ನಾನು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ ಅವರನ್ನು ಹೀಗೆ ಹೇಳುವುದನ್ನೂ ಕೇಳಿದ್ದೇನೆ: ನಿಜವಾದ ಮುಜಾಹಿದ್ ಎಂದರೆ ತನ್ನ ಸ್ವಂತ ನಫ್ಸ್ ವಿರುದ್ಧ ಜಿಹಾದ್ ಮಾಡುವವನು.

**(ಸುನನ್ ತಿರ್ಮಿಧಿ, ಕಿತಾಬ್ ಫ಼ಝಾಇಲುಲ್ ಜಿಹಾದ್, ಹದೀಸ್-1621)**

عَنِ النَّبِیِّ صَلَّی اللّٰہُ عَلَیۡہِ وَسَلَّمَ أَنَّہٗ رَجَعَ مِنۡ بَعۡضِ غَزَوَاتِہٖ فَقَالَ رَجَعۡنَا مِنَ الۡجِہَادِ الۡأَصۡغَرِ إِلَی الۡجِہَادِ الۡاَکۡبَرِ قِیۡلَ یَا رَسُوۡلَ اللّٰہِ وَمَا الۡجِہَادُ الۡاَکۡبَرُ قَالَ وَہِیَ مُجَاہِدَۃُ النَّفۡسِ۔

ಒಂದು ಸಂದರ್ಭದಲ್ಲಿ ಸಯ್ಯಿದನಾ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವ ಸಲ್ಲಂ ಅವರು ಒಂದು ಯುದ್ಧದಿಂದ ಹಿಂದಿರುಗುತ್ತಿದ್ದಾಗ ಸಹಾಬಾಗಳಿಗೆ ಹೀಗೆ ಹೇಳಿದರು: ನಾವು ಈಗ ಸಣ್ಣ ಜಿಹಾದ್ (ಯುದ್ಧ)ದಿಂದ ಹಿಂದಿರುಗುತ್ತಿದ್ದೇವೆ; ಈಗ ನಾವು ಮಹಾ ಜಿಹಾದ್ (ಅಲ್-ಜಿಹಾದುಲ್ ಅಕ್ಬರ್) ಅಂದರೆ ಸ್ವಂತ ನಫ್ಸ್ (ಮನೋವಾಂಛೆಗಳು ಮತ್ತು ದುಷ್ಟ ಪ್ರವೃತ್ತಿಗಳು) ವಿರುದ್ಧದ ಹೋರಾಟದತ್ತ ಸಾಗುತ್ತಿದ್ದೇವೆ.

**(ದಾರುಲ್ ಮುಈಖ್ತಾರ್ ಅಲದ್ದುರ್ರೆ ಮುಖ್ತಾರ್, ಸಂಪುಟ-3, ಪುಟ-235)**



## ಹಝ್ರ್ರತ್ ಮಸೀಹ್ ಮೌಊದ್(ಅ)ರ ಅಧ್ಯಾಪನೆ — ಆತ್ಮಶುದ್ಧಿಗಾಗಿ ನಫ್ಸಿನ ಕಾಮನೆಗಳ ವಿರುದ್ಧ ಹೋರಾಡುವುದು ಅನಿವಾರ್ಯ

ಹಝ್ರ್ರತ್ ಅಕ್ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಈಮಾನ್‌ಗೆ ಖುಶೂ (ವಿನಯ, ದೀನತೆ ಮತ್ತು ಅಲ್ಲಾಹನ ಮುಂದೆ ಸಂಪೂರ್ಣ ನಮ್ರತೆ) ಬೀಜದಂತಿದೆ. ನಂತರ ವ್ಯರ್ಥ ಮತ್ತು ನಿರರ್ಥಕ ಮಾತುಗಳನ್ನು ತ್ಯಜಿಸುವುದರಿಂದ ಈಮಾನ್ ತನ್ನ ಕೋಮಲವಾದ ಹಸಿರು ಮೊಳಕೆಯನ್ನು ಹೊರಹಾಕುತ್ತದೆ. ಆ ಬಳಿಕ ತನ್ನ ಸಂಪತ್ತಿನಿಂದ ಝಕಾತ್ ನೀಡುವುದರಿಂದ ಈಮಾನಿನ ಮರಕ್ಕೆ ಕೊಂಬೆಗಳು ಬೆಳೆಯುತ್ತವೆ; ಅವು ಆ ಮರವನ್ನು ಇನ್ನಷ್ಟು ದೃಢಗೊಳಿಸುತ್ತವೆ. ನಂತರ ನಫ್ಸಿನ ಕಾಮನೆಗಳು ಮತ್ತು ಇಚ್ಛೆಗಳ ವಿರುದ್ಧ ಹೋರಾಡುವುದರಿಂದ ಆ ಕೊಂಬೆಗಳು ಬಲಿಷ್ಠವಾಗುತ್ತವೆ. ಬಳಿಕ ತನ್ನ ಎಲ್ಲಾ ವಾಗ್ದಾನಗಳು ಮತ್ತು ಅಮಾನತ್ತುಗಳನ್ನು ಸಂಪೂರ್ಣವಾಗಿ ಕಾಪಾಡುವುದರಿಂದ ಈಮಾನಿನ ಮರವು ತನ್ನ ಗಟ್ಟಿಯಾದ ಕಾಂಡದ ಮೇಲೆ ದೃಢವಾಗಿ ನಿಲ್ಲುತ್ತದೆ. ಅಂತಿಮವಾಗಿ ಫಲ ಕೊಡುವ ಸಮಯ ಬಂದಾಗ ಅಲ್ಲಾಹ್ ತಆಲಾದಿಂದ ಮತ್ತೊಂದು ವಿಶೇಷ ಶಕ್ತಿಯ ಅನುಗ್ರಹ ಅದರ ಮೇಲೆ ಸುರಿಯುತ್ತದೆ. ಏಕೆಂದರೆ ಆ ಶಕ್ತಿ ದೊರಕುವ ಮೊದಲು ಮರಕ್ಕೆ ಹೂವೂ ಬರುವುದಿಲ್ಲ, ಫಲವೂ ಉಂಟಾಗುವುದಿಲ್ಲ."

**(ಝಮೀಮಾ ಬರಾಹೀನ್-ಎ-ಅಹ್ಮದಿಯ್ಯಾ, ಭಾಗ 5, ರೂಹಾನೀ ಖಝ್ಝಾಈನ್, ಸಂಪುಟ 21, ಪುಟ 209, ಅಡಿಟಿಪ್ಪಣಿ)**

ಮತ್ತೊಂದು ಸಂದರ್ಭದಲ್ಲಿ ಹಝ್ರ್ರತ್ ಅಕ್ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಸರ್ವಶಕ್ತನಾದ ಅಲ್ಲಾಹನು ಈ ಜಮಾಅತ್ ಅನ್ನು ಸ್ಥಾಪಿಸಿರುವ ಉದ್ದೇಶವೇನೆಂದರೆ, ಲೋಕದಿಂದ ಕಣ್ಮರೆಯಾಗಿದ್ದ ನಿಜವಾದ ಮಅರಿಫತ್ (ದೈವಜ್ಞಾನ) ಮತ್ತು ಈ ಯುಗದಲ್ಲಿ ಅಪರೂಪವಾಗಿದ್ದ ನಿಜವಾದ ತಖ್ವಾ ಹಾಗೂ ತಹಾರತ್ (ಪವಿತ್ರತೆ)ಗಳನ್ನು ಪುನಃ ಸ್ಥಾಪಿಸುವುದಾಗಿದೆ."

**(ಮಲ್ಫೂಝಾತ್, ಸಂಪುಟ 4, ಹೊಸ ಆವೃತ್ತಿ, ಪುಟ 213-214)**

## ತಫ್ಸೀರ್ ಕಬೀರ್‌ನಿಂದ ಉಲ್ಲೇಖ — ತಜ್ಕಿಯತುನ್ನಫೂಸ್ (ಆತ್ಮಶುದ್ಧಿ) ಎಂಬ ಕಾರ್ಯವು ಯಾವುದೇ ಮಾನವನ ಸಾಮರ್ಥ್ಯದಲ್ಲಿಲ್ಲ

ಹಝ್ರ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್ಹು ಹೇಳುತ್ತಾರೆ:

ತಜ್ಕಿಯತುನ್ನಫೂಸ್ (ಆತ್ಮಶುದ್ಧಿ) ಎಂಬ ಕಾರ್ಯವು ಯಾವುದೇ ಮಾನವನ ಸಾಮರ್ಥ್ಯದಲ್ಲಿಲ್ಲ ಎಂಬುದನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳಬಹುದು. ತಂದೆ-ತಾಯಿಗಿಂತ ತಮ್ಮ ಮಕ್ಕಳನ್ನು ಹೆಚ್ಚು ಪ್ರೀತಿಸುವವರು ಮತ್ತಾರಿರಬಹುದು? ಆದರೂ ಅವರು ತಮ್ಮ ಮಕ್ಕಳ ಆತ್ಮಶುದ್ಧಿಯನ್ನು ಸಂಪೂರ್ಣವಾಗಿ ಸಾಧಿಸಲು ಸಾಧ್ಯವಾಗುವುದಿಲ್ಲ. ತಜ್ಕಿಯಾ (ಆತ್ಮಶುದ್ಧಿ)ಯಲ್ಲಿ ಎರಡು ಅಂಶಗಳು ಅತ್ಯಗತ್ಯವಾಗಿವೆ. ಮೊದಲನೆಯದು, ಪಾಪಗಳನ್ನು ತ್ಯಜಿಸುವುದು. ಎರಡನೆಯದು, ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸುವುದು. ಪಾಪತ್ಯಾಗದ ಕುರಿತು ಸರ್ವಶಕ್ತನಾದ ಅಲ್ಲಾಹನು ನಮಗೆ ಈ ಪಾಠವನ್ನು ಕಲಿಸುತ್ತಾನೆ: 'ಎಲ್ಲವೂ ಅಲ್ಲಾಹನದೇ. ಆಕಾಶಗಳು, ಭೂಮಿ


*(ಪುಟ ಸಂಖ್ಯೆ-09 ರಲ್ಲಿ ಮುಂದುವರಿಸಲಾಗಿದೆ)*


**ಅಹ್ಮದಿಯಾ ವಾರ್ತೆ**

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ನಮ್ಮ ಪ್ರಿಯ ಮಾತೃಭೂಮಿಗೆ ಇಂದು "ಪೈಘಾಮ್-ಎ-ಸುಲ್ಹ್" (ಮೈತ್ರಿ ಸಂದೇಶ) ಅತ್ಯಗತ್ಯ!

ಸ್ವಾತಂತ್ರ್ಯಾನಂತರ ನಮ್ಮ ದೇಶವು ಕಾಲಕ್ರಮೇಣ ಅನೇಕ ಹೊಸ ಸವಾಲುಗಳು ಮತ್ತು ಸಂಕೀರ್ಣ ಪರಿಸ್ಥಿತಿಗಳತ್ತ ಸಾಗುತ್ತಿದೆ. ಇಂದಿನ ಬೆಳವಣಿಗೆಗಳನ್ನು ಗಮನಿಸಿದಾಗ, ಹಿಂದಿನಿಗಿಂತಲೂ ಹೆಚ್ಚಾಗಿ ರಾಷ್ಟ್ರೀಯ ಐಕ್ಯತೆ ಮತ್ತು ಪರಸ್ಪರ ಸೌಹಾರ್ದದ ಅಗತ್ಯತೆ ಸ್ಪಷ್ಟವಾಗಿ ಗೋಚರಿಸುತ್ತದೆ. ಭಾರತವು ವಿವಿಧ ಧರ್ಮಗಳು, ಭಾಷೆಗಳು, ಜನಾಂಗಗಳು, ಸಂಸ್ಕೃತಿಗಳು ಹಾಗೂ ಜಾತಿಗಳಿಂದ ಕೂಡಿದ ಸುಂದರ ಪುಷ್ಪಗುಚ್ಛವಾಗಿದೆ. ಈ ವೈವಿಧ್ಯತೆಯನ್ನು ಪರಸ್ಪರ ಪ್ರೀತಿ, ಸಹೋದರತ್ವ ಮತ್ತು ಏಕತೆಯ ಹೂಗಳಿಂದ ಅಲಂಕರಿಸಿದರೆ ಅದರ ಪರಿಮಳವು ಇಡೀ ಸಮಾಜವನ್ನು ಸುಗಂಧಮಯಗೊಳಿಸುತ್ತದೆ. ಆದರೆ ಇದೇ ವೈವಿಧ್ಯತೆಯನ್ನು ದ್ವೇಷ, ವಿಭಜನೆ ಮತ್ತು ವೈಮನಸ್ಸಿನ ಸಾಧನವಾಗಿಸಿದರೆ, ಅದರ ದುರ್ವಾಸನೆ ಸಮಾಜದ ಎಲ್ಲೆಡೆ ಹರಡಿ, ಪ್ರತಿಯೊಬ್ಬರೂ ಅದರ ಕಹಿ ಪರಿಣಾಮವನ್ನು ಅನುಭವಿಸಬೇಕಾಗುತ್ತದೆ.

ದುರದೃಷ್ಟವಶಾತ್, ಸ್ವಾರ್ಥಕ್ಕಾಗಿ ಧರ್ಮವನ್ನು ದುರುಪಯೋಗಪಡಿಸಿಕೊಳ್ಳುವುದು, ಜಾತಿ ಮತ್ತು ಸಮುದಾಯಗಳ ನಡುವೆ ಭಿನ್ನಾಭಿಪ್ರಾಯಗಳನ್ನು ಹುಟ್ಟುಹಾಕುವುದು ಹಾಗೂ ಸಮಾಜವನ್ನು ವಿಭಜಿಸುವ ರಾಜಕೀಯ ಆಟಗಳು ನಮ್ಮ ದೇಶವನ್ನು ಅಪಾಯಕಾರಿ ದಿಕ್ಕಿನತ್ತ ಕೊಂಡೊಯ್ಯುತ್ತಿವೆ. ಸಾಮಾಜಿಕ ಜಾಲತಾಣಗಳನ್ನು ಗಮನಿಸಿದರೆ, ಜನರನ್ನು ಒಗ್ಗೂಡಿಸುವ ಧ್ವನಿಗಳು ದಿನದಿಂದ ದಿನಕ್ಕೆ ಕ್ಷೀಣಿಸುತ್ತಿರುವುದು ಗೋಚರಿಸುತ್ತದೆ. ಅದರ ಬದಲಿಗೆ ಪ್ರತಿಯೊಂದು ಧರ್ಮ ಮತ್ತು ಸಮುದಾಯದಲ್ಲಿಯೂ ದ್ವೇಷ, ಅಸಹಿಷ್ಣುತೆ ಹಾಗೂ ವಿಭಜನೆಯ ಭಾಷೆಯನ್ನು ಹರಡುವವರ ಸಂಖ್ಯೆ ಹೆಚ್ಚುತ್ತಿದೆ. ಆದರೆ ಒಂದು ವಿಷಯ ನಿರ್ವಿತವಾದ ದ್ವೇಷ ಮತ್ತು ಸಂಘರ್ಷದ ಪರಿಣಾಮ ಒಂದೇ ಸಮುದಾಯಕ್ಕೆ ಸೀಮಿತವಾಗುವುದಿಲ್ಲ. ಅದರ ನೋವನ್ನು ಕೊನೆಯಲ್ಲಿ ಎಲ್ಲ ಸಮುದಾಯಗಳೂ ಅನುಭವಿಸಬೇಕಾಗುತ್ತದೆ. ವಿಶೇಷವಾಗಿ ಬಡವರು, ದುರ್ಬಲರು ಮತ್ತು ಸಮಾಜದ ಅಂಚಿನಲ್ಲಿರುವವರು ಅದರ ಭಾರವನ್ನು ಹೆಚ್ಚಾಗಿ ಹೊರುತ್ತಾರೆ. ಈ ಅನ್ಯಾಯದ ವಲಯ ದಿನದಿಂದ ದಿನಕ್ಕೆ ವಿಸ್ತರಿಸುತ್ತಲೇ ಇದೆ.

ಇಂತಹ ಸಂದರ್ಭದಲ್ಲಿ, ಅಹ್ಮದಿಯಾ ಜಮಾಅತ್‌ನ ಇಮಾಮ್, ಹಝ್ರತ್ ಅಮೀರುಲ್ ಮೊಮಿನೀನ್ ಖಲೀಫತುಲ್ ಮಸೀಹ್ ಅಲ್-ಖಾಮಿಸ್, ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್(ಅತಬಿಅ) ಅವರು 9 ಮೇ 2025ರಂದು ನೀಡಿದ ಜುಮಾ ಖುತ್ಬಾದಲ್ಲಿ ಭಾರತದ ಅಹ್ಮದಿಗಳಿಗೆ ಮಹತ್ವದ ಮಾರ್ಗದರ್ಶನ ನೀಡಿದರು.

ಹಝೂರ್ ಅನ್ವರ್(ಅತಬಿಅ) ಅವರು, ಜಮಾಅತ್ ಅಹ್ಮದೀಯ್ಯದ ಸ್ಥಾಪಕರಾದ ಹಝ್ರತ್ ಅಕ್ದಸ್ ಮಸೀಹ್ ಮೌಊದ್ ವ ಮಹ್ದೀ ಮಅಹೂದ್, ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ ಅಲೈಹಿಸ್ಸಲಾಮ್ ಅವರು ಸುಮಾರು ಒಂದು ಶತಮಾನಕ್ಕೂ ಹೆಚ್ಚು ಹಿಂದೆ ನೀಡಿದ ಅವರ ಉಪನ್ಯಾಸ "ಪೈಘಾಮ್-ಎ-ಸುಲ್ಹ್" (ಮೈತ್ರಿ ಸಂದೇಶ)ವನ್ನು ದೇಶದ ಜನತೆಗೆ ವ್ಯಾಪಕವಾಗಿ ಪರಿಚಯಿಸುವಂತೆ ಸೂಚಿಸಿದರು. ಆ ಉಪನ್ಯಾಸದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಭಾರತದ ಜನರನ್ನು ರಾಷ್ಟ್ರೀಯ ಏಕತೆ, ಪರಸ್ಪರ ಗೌರವ ಮತ್ತು ಸಹೋದರತ್ವದತ್ತ ಆಹ್ವಾನಿಸಿ, ಅಪಾರ ಪ್ರೀತಿ ಮತ್ತು ಮಾನವೀಯತೆಯಿಂದ ತುಂಬಿದ ಅಮೂಲ್ಯ ಸಂದೇಶವನ್ನು ನೀಡಿದ್ದರು. ಆ ಸಂದೇಶ ಇಂದಿಗೂ ಪ್ರತಿಯೊಬ್ಬ ಭಾರತೀಯನನ್ನು ಚಿಂತನೆ ಮತ್ತು ಕಾರ್ಯದತ್ತ ಕರೆಯುತ್ತಿದೆ. ಅದರಲ್ಲಿನ ಕೆಲವು ಅಮೂಲ್ಯ ಭಾಗಗಳನ್ನು ಇಲ್ಲಿ ಪ್ರಸ್ತುತಪಡಿಸುತ್ತಿದ್ದೇವೆ. ಅಮೀರುಲ್ ಮೊಮಿನೀನ್ ಅವರ ನಿರ್ದೇಶನದಂತೆ, ಜಮಾಅತ್ ಅಹ್ಮದೀಯ್ಯದ ಸದಸ್ಯರು ಈ ಸಂದೇಶವನ್ನು ತಮ್ಮ ತಮ್ಮ ಭಾಷೆಗಳಲ್ಲಿ ಸಾಧ್ಯವಾದಷ್ಟು ವ್ಯಾಪಕವಾಗಿ ಹರಡಲಿ ಎಂಬುದು ನಮ್ಮ ಆಶಯ. ಇನ್ಶಾ ಅಲ್ಲಾಹ್.

ಹಝ್ರತ್ ಅಕ್ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

"ಓ ದೇಶಬಾಂಧವರೇ! ನಾವು ಮುಸ್ಲಿಮರಾಗಿರಲಿ ಅಥವಾ ಹಿಂದೂಗಳಾಗಿರಲಿ, ನಮ್ಮ ನಡುವಿನ ಅನೇಕ ಭಿನ್ನಾಭಿಪ್ರಾಯಗಳಿದ್ದರೂ, ಈ ವಿಶ್ವದ ಸೃಷ್ಟಿಕರ್ತನೂ ಪಾಲಕನೂ ಆದ ಒಬ್ಬನೇ ದೇವರಲ್ಲಿ ನಂಬಿಕೆ ಇಡುವ ವಿಷಯದಲ್ಲಿ ನಾವು ಒಂದಾಗಿದ್ದೇವೆ. ಅದೇ ರೀತಿ ನಾವು ಎಲ್ಲರೂ 'ಮಾನವರು' ಎಂಬ ಒಂದೇ ಹೆಸರಿನಿಂದ ಕರೆಯಲ್ಪಡುತ್ತೇವೆ. ಒಂದೇ ದೇಶದ ನಿವಾಸಿಗಳಾಗಿರುವ ಕಾರಣ ನಾವು ಪರಸ್ಪರ ನೆರೆಯವರೂ ಆಗಿದ್ದೇವೆ. ಆದ್ದರಿಂದ, ಪರಿಶುದ್ಧ ಹೃದಯ, ಸತ್ಯನಿಷ್ಠೆ ಮತ್ತು ಶುಭಾಶಯಗಳೊಂದಿಗೆ ಪರಸ್ಪರ ಸ್ನೇಹಿತರಾಗುವುದು ನಮ್ಮ ಕರ್ತವ್ಯವಾಗಿದೆ. ಧಾರ್ಮಿಕವಾಗಿಯೂ, ಲೌಕಿಕವಾಗಿಯೂ ಎದುರಾಗುವ ಕಷ್ಟಗಳಲ್ಲಿ ಒಬ್ಬರಿಗೊಬ್ಬರು ನೆರವಾಗಬೇಕು; ಅಷ್ಟೇ ಅಲ್ಲ, ಒಂದೇ ದೇಹದ ಅಂಗಗಳಂತೆ ಪರಸ್ಪರ ಸಂಬಂಧ ಬೆಳೆಸಿಕೊಳ್ಳಬೇಕು.

ಓ ನನ್ನ ದೇಶಬಾಂಧವರೇ! ಸಾಮಾನ್ಯ ಮಾನವೀಯ ಸಹಾನುಭೂತಿಯ ಪಾಠವನ್ನು ಬೋಧಿಸದ ಧರ್ಮವು ನಿಜವಾದ ಧರ್ಮವಾಗಲು ಸಾಧ್ಯವಿಲ್ಲ. ನಮ್ಮ ದೇವರು ಯಾವ ಜನಾಂಗದ ಮೇಲೂ ಭೇದಭಾವ ತೋರಿಲ್ಲ. ಆತನು ಆರ್ಯಾವರ್ತದ ಜನರಿಗೆ ನೀಡಿದ ಬುದ್ಧಿಶಕ್ತಿ ಮತ್ತು ಸಾಮರ್ಥ್ಯಗಳನ್ನೇ ಅರಬ್ಬರು, ಪರ್ಷಿಯನ್ನರು, ಶಾಮ್ ದೇಶದವರು, ಚೀನೀಯರು, ಜಪಾನಿಯರು, ಯುರೋಪಿನವರು ಹಾಗೂ ಅಮೆರಿಕದವರಿಗೂ ನೀಡಿದ್ದಾನೆ. ದೇವರ ಭೂಮಿ ಎಲ್ಲರಿಗೂ ಸಮಾನವಾಗಿ ಆಶ್ರಯವಾಗಿದೆ. ಆತನ ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು ಎಲ್ಲರಿಗೂ ಸಮಾನವಾಗಿ ಬೆಳಕು ನೀಡುತ್ತಿವೆ. ಗಾಳಿ, ನೀರು, ಅಗ್ನಿ, ಭೂಮಿ, ಧಾನ್ಯ, ಹಣ್ಣುಗಳು, ಔಷಧಿಗಳು, ಇವೆಲ್ಲವೂ ಎಲ್ಲ ಮಾನವರಿಗೂ ಸಮಾನವಾಗಿ ಲಭ್ಯವಾಗಿವೆ. ದೇವರ ಈ ಉದಾತ್ತ ಗುಣಗಳು ನಮಗೆ ಕಲಿಸುವ ಪಾಠವೇನೆಂದರೆ, ನಾವು ಸಹ ಎಲ್ಲ ಮಾನವರೊಂದಿಗೆ ಪ್ರೀತಿ, ಉದಾರತೆ ಮತ್ತು ಸಹಾನುಭೂತಿಯಿಂದ ವರ್ತಿಸಬೇಕು. ಸಂಕುಚಿತ ಮನೋಭಾವವನ್ನು ತ್ಯಜಿಸಬೇಕು."

"ಸ್ನೇಹಿತರೇ! ನೆನಪಿಡಿ, ದೇವರ ಉದಾತ್ತ ಗುಣಗಳನ್ನು ಗೌರವಿಸದ ಯಾವ ಜನಾಂಗವೂ, ಅವುಗಳಿಗೆ ವಿರುದ್ಧವಾಗಿ ನಡೆದುಕೊಂಡರೆ, ಅದು ಶೀಘ್ರದಲ್ಲೇ ಪತನದ ದಾರಿಯನ್ನು ಹಿಡಿಯುತ್ತದೆ. ತನ್ನಷ್ಟಕ್ಕೆ ಮಾತ್ರವಲ್ಲ, ತನ್ನ ಮುಂದಿನ ಪೀಳಿಗೆಗಳನ್ನೂ ವಿನಾಶದತ್ತ ತಳ್ಳುತ್ತದೆ."

"ಯಾವುದೇ ವಾದ-ವಿವಾದವಿಲ್ಲದೆ ಒಪ್ಪಿಕೊಳ್ಳಬೇಕಾದ ಒಂದು ಮಹತ್ವದ ಸತ್ಯವೆಂದರೆ, ಪ್ರತಿಯೊಬ್ಬ ಮಾನವನೂ ನಂಬಿಕೆ ಇಡಬೇಕಾದ ಸತ್ಯ ಮತ್ತು ಪರಿಪೂರ್ಣ ದೇವರು 'ರಬ್ಬುಲ್ ಆಲಮೀನ್' ಆಗಿದ್ದಾನೆ. ಆತನ ಪಾಲನೆ (ರುಬೂಬಿಯ್ಯತ್) ಯಾವುದೇ ಒಂದು ಜನಾಂಗಕ್ಕೆ, ಒಂದು ದೇಶಕ್ಕೆ, ಒಂದು ಕಾಲಕ್ಕೆ ಅಥವಾ ಒಂದು ಪ್ರದೇಶಕ್ಕೆ ಸೀಮಿತವಾಗಿಲ್ಲ. ಆತನು ಸಮಸ್ತ ಮಾನವಕುಲದ ರಬ್ಬ್, ಎಲ್ಲಾ ಕಾಲಗಳ ರಬ್ಬ್, ಎಲ್ಲಾ ಸ್ಥಳಗಳ ರಬ್ಬ್ ಹಾಗೂ ಎಲ್ಲಾ ರಾಷ್ಟ್ರಗಳ ರಬ್ಬ್ ಆಗಿದ್ದಾನೆ. ಎಲ್ಲಾ ಅನುಗ್ರಹಗಳ ಮೂಲವೂ ಆತನೇ. ಪ್ರತಿಯೊಂದು ದೈಹಿಕ ಮತ್ತು ಆತ್ಮಿಕ ಶಕ್ತಿಯೂ ಆತನಿಂದಲೇ ದೊರೆಯುತ್ತದೆ. ಎಲ್ಲಾ ಜೀವಿಗಳೂ ಆತನ ಕೃಪೆಯಿಂದಲೇ ಪೋಷಿಸಲ್ಪಡುತ್ತವೆ. ಪ್ರತಿಯೊಂದು ಅಸ್ತಿತ್ವವೂ ಆತನ ಆಶ್ರಯದಲ್ಲಿಯೇ ನೆಲೆಗೊಂಡಿದೆ.

ಅಲ್ಲಾಹನ ಕೃಪೆಯು ಸರ್ವವ್ಯಾಪಿಯಾಗಿದೆ. ಅದು ಎಲ್ಲಾ ಜನಾಂಗಗಳು, ದೇಶಗಳು ಮತ್ತು ಕಾಲಗಳ ಮೇಲೆ ಸಮಾನವಾಗಿ ವ್ಯಾಪಿಸಿದೆ. ಹೀಗೆ ಮಾಡಿದದ್ದು ಯಾರಿಗೂ, 'ದೇವರು ಒಂದು ಜನಾಂಗದ ಮೇಲೆ ಕೃಪೆ ತೋರಿದನು; ಆದರೆ ನಮ್ಮ ಮೇಲೆ ತೋರಲಿಲ್ಲ' ಎಂದು ದೂರು ಹೇಳುವ ಅವಕಾಶವೇ ಉಳಿಯದಂತೆ ಮಾಡುವುದಕ್ಕಾಗಿದೆ.

ಹೀಗಿರುವಾಗ ನಮ್ಮ ದೇವರ ಗುಣಗಳೇ ಇಂತಿರುವಾಗ, ನಾವೂ ಆ ದೈವೀ ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಸೂಕ್ತವಲ್ಲವೇ? ಆದ್ದರಿಂದ, ಓ ನನ್ನ ದೇಶಬಾಂಧವರೇ! 'ಪೈಘಾಮ್-ಎ-ಸುಲ್ಹ್' (ಮೃತ್ರಿ ಸಂದೇಶ) ಎಂಬ ಈ ಚಿಕ್ಕ ಕೃತಿಯನ್ನು ಅತ್ಯಂತ ಗೌರವಪೂರ್ವಕವಾಗಿ ನಿಮ್ಮ ಸೇವೆಗೆ ಅರ್ಪಿಸುತ್ತೇನೆ. ಸರ್ವಶಕ್ತನಾದ ಅಲ್ಲಾಹನು ನಿಮ್ಮ ಹೃದಯಗಳಿಗೆ ಸ್ವತಃ ಪ್ರೇರಣೆ ನೀಡಲಿ ಹಾಗೂ ನಮ್ಮ ಹೃದಯದಲ್ಲಿರುವ ನಿಜವಾದ ಸಹಾನುಭೂತಿ ಮತ್ತು ಪ್ರೀತಿಯ ಉದ್ದೇಶವನ್ನು ನಿಮಗೆ ಸ್ಪಷ್ಟಪಡಿಸಲಿ ಎಂದು ಪ್ರಾರ್ಥಿಸುತ್ತೇನೆ. ಆಗ ನೀವು ಈ ಸಂದೇಶವನ್ನು ಯಾವುದೇ ವೈಯಕ್ತಿಕ ಸ್ವಾರ್ಥ ಅಥವಾ ಗುಪ್ತ ಉದ್ದೇಶದಿಂದ ಬರೆಯಲ್ಪಟ್ಟದ್ದು ಎಂದು ಭಾವಿಸುವುದಿಲ್ಲ.

"ಪ್ರಿಯರೇ! ಪರಲೋಕದ ವಿಷಯಗಳು ಸಾಮಾನ್ಯ ಜನರಿಗೆ ಸಂಪೂರ್ಣವಾಗಿ ತಿಳಿಯುವುದಿಲ್ಲ. ಅದರ ನಿಜವಾದ ರಹಸ್ಯವು ಆತ್ಮಶುದ್ಧಿಯನ್ನು ಹೊಂದಿದವರಿಗೇ ಬಹಿರಂಗವಾಗುತ್ತದೆ. ಆದರೆ ಈ ಲೋಕದಲ್ಲಿ ಯಾವುದು ಒಳ್ಳೆಯದು ಮತ್ತು ಯಾವುದು ಕೆಟ್ಟದು ಎಂಬುದನ್ನು ವಿವೇಕವಂತನಾದ ಪ್ರತಿಯೊಬ್ಬರೂ ತಿಳಿದುಕೊಳ್ಳಬಹುದು.

ಒಂದು ವಿಷಯ ಎಲ್ಲರಿಗೂ ಸ್ಪಷ್ಟವಾಗಿದೆ, ಐಕ್ಯತೆ ಎಂಬುದು ಅನೇಕ ವಿಪತ್ತುಗಳನ್ನು ದೂರ ಮಾಡುವ, ಯಾವುದೇ ಉಪಾಯದಿಂದ ಪರಿಹರಿಸಲಾಗದ ಸಮಸ್ಯೆಗಳನ್ನೂ ಪರಿಹರಿಸುವ ಮಹಾಶಕ್ತಿಯಾಗಿದೆ.

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*



# ಖುತ್‌ಬ ಜುಮುಅ

## ಹಝ್ರತ್ ಮಸೀಹ್ ಮೌಊದ್(ಅ)ರ ದಾನಶೀಲತೆ ಮತ್ತು ಉಪಕಾರದ ಸುಂದರ ಪ್ರಸ್ತಾವನೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **10-07-2026** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರತ್ ಶೇಖ್ ಯಾಕೂಬ್ ಅಲಿ ಸಾಹಿಬ್ ಇರ್ಫಾನಿ(ರ) ಹಝ್ರತ್ ಮಸೀಹ್ ಮೌಊದ್(ಅ)ರ ಜೀವನ ಚರಿತ್ರೆಯನ್ನು ವಿವರಿಸುತ್ತಾ ಬರೆಯುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ)ರ ಜೀವನದಲ್ಲಿ ದಾನಶೀಲತೆ ಮತ್ತು ಔದಾರ್ಯದ ಮತ್ತೊಂದು ಭವ್ಯತೆಯು ಗೋಚರಿಸುತ್ತದೆ, ಅದು ಶಿಫಾರಸಿನ ರೂಪವನ್ನು ಹೊಂದಿದೆ. ಕೆಲವೊಮ್ಮೆ ಇತರರಿಂದ ಪೂರೈಸಲ್ಪಡಬೇಕಾದ ಬೇಡಿಕೆಗಳಿಗಾಗಿಯೂ ಕೆಲವರು ಹಝ್ರತ್ ಮಸೀಹ್ ಮೌಊದ್(ಅ)ರ ಬಳಿಗೆ ಬರುತ್ತಿದ್ದರು. ಅಂತಹ ಸ್ಥಿತಿಯಲ್ಲಿಯೂ ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಯಾವುದೇ ವೈಯಕ್ತಿಕ ಅಗತ್ಯಕ್ಕಾಗಿ ಎಂದಿಗೂ ಕೇಳಿರದಿದ್ದವರೊಡನೆಯೂ ಆತನ ಒಳಿತಿಗಾಗಿ ಶಿಫಾರಸು ಮಾಡುತ್ತಿದ್ದರು. ಅಂದರೆ, ಬೇರೆಯವರ ಕೆಲಸಕ್ಕಾಗಿ ಇನ್ನೊಬ್ಬರಿಗೆ ಶಿಫಾರಸು ಮಾಡುತ್ತಿದ್ದರು, ಆದರೆ ತಮ್ಮ ವೈಯಕ್ತಿಕ ಕೆಲಸಕ್ಕಾಗಿ ಅವರಿಂದ ಎಂದಿಗೂ ಸಹಾಯ ಪಡೆದಿರಲಿಲ್ಲ. ಅವರು ಬರೆಯುತ್ತಾರೆ: ಇದು ಅತ್ಯಂತ ಉದಾತ್ತ ಮತ್ತು ಪ್ರಾಮಾಣಿಕವಾದ ಶ್ರೇಷ್ಠತೆಯಾಗಿದ್ದು, ಪ್ರಪಂಚದಲ್ಲಿ ಬಹಳ ಅಪರೂಪವಾಗಿ ಕಂಡುಬರುತ್ತದೆ.

ಮಿರ್ಝಾ ಇಮಾಮುದ್ದೀನ್ ಸಾಹಿಬ್‌ರ ಕುರಿತು ಉಲ್ಲೇಖಿಸುತ್ತಾ ಅವರು ಬರೆಯುತ್ತಾರೆ: ಮಿರ್ಝಾ ಇಮಾಮುದ್ದೀನ್ ಸಾಹಿಬ್ ಜಮಾಅತಿನ ಕಡು ವಿರೋಧಿಯಾಗಿದ್ದರು ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರ ಕುಟುಂಬದೊಂದಿಗೆ ಆತನಿಗೆ ಶತ್ರುತ್ವವಿತ್ತು ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿಯಾಗಿದೆ. ಆದರೆ ಹಝ್ರತ್ ಮಸೀಹ್ ಮೌಊದ್(ಅ) ಲೌಕಿಕ ವಿಷಯಗಳಲ್ಲಿ ಆತನ ಶತ್ರುತ್ವವನ್ನು ಎಂದಿಗೂ ಪರಿಗಣಿಸುತ್ತಿರಲಿಲ್ಲ. ಧರ್ಮದ ಮಿತಿಯಲ್ಲಾದರೆ ಸರಿ, ಧರ್ಮದ ವಿಷಯದಲ್ಲಿನ ಶತ್ರುತ್ವವನ್ನು ಅವರು ಸಹಿಸುತ್ತಿರಲಿಲ್ಲ. ಆದರೆ ಪ್ರಾಪಂಚಿಕ ವಿಷಯಗಳಲ್ಲಿ ಎಂದಿಗೂ ಅದಕ್ಕೆ ಬೆಲೆ ಕೊಡಲಿಲ್ಲ. ಅಂದರೆ, ಅವನೊಂದಿಗಿನ ವರ್ತನೆಯಲ್ಲಿ ಅವರು ಎಂದಿಗೂ ವ್ಯತ್ಯಾಸ ಮಾಡಲಿಲ್ಲ. ಅವನು ಹಲವು ಬಾರಿ ಹಝ್ರತ್ ಮಸೀಹ್ ಮೌಊದ್(ಅ)ರಿಂದ ಆರ್ಥಿಕ ಸಹಾಯವನ್ನು ಪಡೆದುಕೊಳ್ಳುತ್ತಿದ್ದನು ಮತ್ತು ಈ ಉಪಕಾರಗಳ ಹೊರತಾಗಿಯೂ ವಿರೋಧದಲ್ಲಿ ತೊಡಗಿರುತ್ತಿದ್ದನು, ಮತ್ತು ಆ ರೀತಿಯ ಕಡು ಶತ್ರುವಾಗಿದ್ದನು.

ಒಮ್ಮೆ ಅವನು ಒಂದು ಕುದುರೆಯನ್ನು ಮಾರಬೇಕಾಗಿತ್ತು ಮತ್ತು ಅದಕ್ಕಾಗಿ ಆ ಕುದುರೆಯನ್ನು ಜಮ್ಮುವಿಗೆ ತೆಗೆದುಕೊಂಡು ಹೋಗಿ, ಹಝ್ರತ್ ಹಕೀಮುಲ್ ಉಮ್ಮತ್ ಮೌಲವಿ ನೂರುದ್ದೀನ್ ಸಾಹಿಬ್ ಖಲೀಫತುಲ್ ಮಸೀಹ್ ಅವ್ವಲ್(ರ)ರ ಮೂಲಕ ಪ್ರಸ್ತುತಪಡಿಸಿದರೆ ಅದಕ್ಕೆ ತಕ್ಕ ಬೆಲೆ ಸಿಗಬಹುದು ಎಂದು ಭಾವಿಸಿದನು. ಅಲ್ಲಿ ರಾಜ-ಮಹಾರಾಜರೊಂದಿಗೆ ಅವರಿಗೆ ಪರಿಚಯವಿತ್ತು, ಹಾಗಾಗಿ ಅವರು ಅದನ್ನು ಖರೀದಿಸಬಹುದು ಎಂದುಕೊಂಡನು. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಆತನೇ ಸ್ವತಃ (ಮಿರ್ಝಾ ನಿಝಾಮುದ್ದೀನ್) ಹಝ್ರತ್ ಮಸೀಹ್ ಮೌಊದ್(ಅ)ರೊಡನೆ, ಹಝ್ರತ್ ಹಕೀಮುಲ್ ಉಮ್ಮತ್‌ರ ಹೆಸರಿಗೆ ಒಂದು ಶಿಫಾರಸು ಪತ್ರವನ್ನು ಬರೆದುಕೊಡಲು ವಿನಂತಿಸಿದನು. ಹಝ್ರತ್ ಮಸೀಹ್ ಮೌಊದ್(ಅ) ಅವನ ವಿನಂತಿಯನ್ನು ನಿರಾಕರಿಸಲಿಲ್ಲ ಮತ್ತು ಯಾವುದೇ ಹಿಂಜರಿಕೆಯಿಲ್ಲದೆ ಹಝ್ರತ್ ಮೌಲವಿ ಸಾಹಿಬ್(ರ)ರಿಗೆ ಒಂದು ಶಿಫಾರಸು ಪತ್ರವನ್ನು ನೀಡಿದರು. ಆ ಪತ್ರವು ಹೇಗಿತ್ತು ಎಂಬುದನ್ನು ಅವರು ವಿವರಿಸುತ್ತಾರೆ: ಮಿರ್ಝಾ ಇಮಾಮುದ್ದೀನ್ ಸಾಹಿಬ್‌ರ ಶತ್ರುತ್ವ ಮತ್ತು ದ್ವೇಷವು ಎಲ್ಲರಿಗೂ ಗೊತ್ತಿತ್ತು ಎಂಬುದು ಸ್ಪಷ್ಟವಾದ ವಿಷಯವಾಗಿದೆ. ಆದರೆ ಉಪಕಾರ ಮತ್ತು ಸಹಾಯ ಮಾಡುವ ಸಂದರ್ಭ ಬಂದಾಗ, ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಆ ಶತ್ರುತ್ವದ ನೆನಪು ಕೂಡ ಬರಲಿಲ್ಲ ಮತ್ತು ಆತನಿಗೆ ಲಾಭ ಮಾಡಿಕೊಡಲು ಎಂದಿಗೂ ಹಿಂಜರಿಯಲಿಲ್ಲ. (ಸೀರತ್ ಹಝ್ರತ್ ಮಸೀಹ್ ಮೌಊದ್(ಅ), ಹಝ್ರತ್ ಶೇಖ್ ಯಾಖೂಬ್ ಅಲೀ ಸಾಹಿಬ್ ಇರ್ಫಾನಿ, ಭಾಗ-2, ಪುಟ-296-297)

ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಮೌಲವಿ ನೂರುದ್ದೀನ್(ರ)ರಿಗೆ ಬರೆದ ಪತ್ರ ಹೀಗಿತ್ತು: **ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್. ನಹಮದುಹು ವ ನುಸಲ್ಲೀ ಅಲಾ ರಸೂಲಿಹಿಲ್ ಕರೀಮ್**. ಸನ್ಮಾನ್ಯರೇ, ಪ್ರೀತಿಯ ಸಹೋದರರಾದ ಮೌಲವಿ ಹಕೀಮ್ ನೂರುದ್ದೀನ್ ಸಾಹಿಬ್, ಅಲ್ಲಾಹನು ನಿಮ್ಮನ್ನು ಸುರಕ್ಷಿತವಾಗಿರಿಸಲಿ.

**ಅಸ್ಸಲಾಮು ಅಲೈಕುಮ್ ವ ರಹಮತುಲ್ಲಾಹಿ ವ ಬರಾಕಾತುಹು**. ಈ ಪತ್ರದ ಉದ್ದೇಶ ನಿಮಗೆ ಸ್ವಲ್ಪ ತೊಂದರೆ ಕೊಡುವುದಾಗಿದೆ. ನೀವು ಗಮನ ಹರಿಸಲು ಮತ್ತು ಪ್ರಯತ್ನಿಸಲು ಹಿಂಜರಿಯುವುದಿಲ್ಲ ಎಂದು ನಂಬಿದ್ದೇನೆ (ಅಂದರೆ, ಬಹಳ ಒತ್ತಾಯಪೂರ್ವಕವಾಗಿ ಕೇಳಿಕೊಂಡಿದ್ದಾರೆ). ವಿಷಯವೇನೆಂದರೆ, ನನ್ನ ಚಿಕ್ಕಪ್ಪನ ಮಗನಾದ ಮಿರ್ಝಾ ಇಮಾಮುದ್ದೀನ್ ಸಾಹಿಬ್‌ರ ಬಳಿ ಒಂದು ಬೆಲೆಬಾಳುವ ಕುದುರೆಯಿದೆ, ಅದು ವೇಗವಾಗಿ ಓಡಬಲ್ಲದು ಮತ್ತು ರಾಜ-ಮಹಾರಾಜರ ಸವಾರಿಗಾಗಿ ಯೋಗ್ಯವಾಗಿದೆ. ಈಗ ಅವರು ಅದನ್ನು ಮಾರಲು ಬಯಸಿದ್ದಾರೆ. ಇಂತಹ ದುಬಾರಿ ಕುದುರೆಗಳನ್ನು ಸಾಮಾನ್ಯ ಜನರು ಖರೀದಿಸಲಾರರು ಮತ್ತು ಶ್ರೀಮಂತರು ಇಂತಹ ವಸ್ತುಗಳ ಹುಡುಕಾಟದಲ್ಲಿರುತ್ತಾರೆ, ಆದ್ದರಿಂದ ದಯವಿಟ್ಟು ನೀವು ಜಮ್ಮುವಿನ ರಾಜನ ಅಥವಾ ಅವನ ಯಾವುದೇ ಸಹೋದರನ ಬಳಿ ಪ್ರಸ್ತಾಪಿಸಿ, ಸೂಕ್ತ ಬೆಲೆಗೆ ಆ ಕುದುರೆಯನ್ನು ಖರೀದಿಸಲು ಪ್ರಯತ್ನಿಸಬೇಕೆಂದು ಕೋರುತ್ತೇನೆ. ಅವರ ಕಡೆಯಿಂದ ಖರೀದಿಸುವ ನಿರ್ಧಾರವು ಖಚಿತವಾದರೆ, ಕುದುರೆಯನ್ನು ನಿಮ್ಮ ಬಳಿಗೆ ಕಳುಹಿಸಲಾಗುವುದು. ದಯವಿಟ್ಟು ಪೂರ್ಣ ಪ್ರಯತ್ನದ ನಂತರ ತಿಳಿಸಿ. ಬಹಳ ಪ್ರಯತ್ನ ಮಾಡಿ. ವಸ್ಸಲಾಮ್. ವಿನೀತ ಮಿರ್ಝಾ ಗುಲಾಮ್ ಅಹ್ಮದ್. (ಸೀರತ್ ಹಝ್ರತ್ ಮಸೀಹ್ ಮೌಊದ್(ಅ), ಹಝ್ರತ್ ಶೇಖ್ ಯಾಖೂಬ್ ಅಲೀ ಸಾಹಿಬ್ ಇರ್ಫಾನಿ, ಭಾಗ-2, ಪುಟ-297-298)

ಇದು 1888ರ ಘಟನೆಯಾಗಿದೆ. ಆ ಸಮಯದಲ್ಲಿ ಮಿರ್ಝಾ ಇಮಾಮುದ್ದೀನ್‌ರ ಶತ್ರುತ್ವವಿತ್ತು, ಆದರೆ ಹಝ್ರತ್ ಮಸೀಹ್ ಮೌಊದ್(ಅ)ರ ಪ್ರವಾದಿತ್ವದ ಘೋಷಣೆಯಾಗಿರಲಿಲ್ಲ. ಆದರೂ ಅವರು ಈ ರೀತಿಯಲ್ಲಿ ಅವರ ಶತ್ರು ಸಹೋದರನಿಗೂ ಸಹಾಯ ಮಾಡಿದರು.

ಹಝ್ರತ್ ಶೇಖ್ ಮಹಮೂದ್ ನಸೀಬ್ ಸಾಹಿಬ್(ರ) ವಿವರಿಸುತ್ತಾರೆ: ಒಂದು ಕಾಲದಲ್ಲಿ ನಾನು ಸಿಖ್ ಬಡಗಿಗಳ ಮನೆಯೊಂದರಲ್ಲಿ ಬಾಡಿಗೆಗಿದ್ದೆ. ಅದು ಸರ್‌ಬರಾಹ್ ನಂಬರ್‌ದಾರ್ ಮಿರ್ಝಾ ನಿಝಾಮುದ್ದೀನ್ ಸಾಹಿಬ್‌ರ ಮನೆಯ ಹತ್ತಿರವೇ ಇತ್ತು. ಯಾವುದೋ ವಿಷಯಕ್ಕೆ ಮನೆಮಾಲೀಕಳು ನನ್ನೊಂದಿಗೆ ಅನಗತ್ಯವಾಗಿ ಜಗಳವಾಡಿ ಮನೆ ಖಾಲಿ ಮಾಡುವಂತೆ ಹೇಳಿದಳು. ನಾನು, ಒಪ್ಪಂದದ ಪತ್ರವಿದೆ, ಬಾಕಿ ಬಾಡಿಗೆಯನ್ನು ಪಾವತಿಸುತ್ತಿದ್ದೇನೆ, ಹಾಗಾಗಿ ನಾನು ಮನೆ ಖಾಲಿ ಮಾಡುವುದಿಲ್ಲ ಎಂದೆ. ಈ ವಿಷಯದಲ್ಲಿ ಆಕೆ ಮಿರ್ಝಾ ನಿಝಾಮುದ್ದೀನ್ ಸಾಹಿಬ್‌ರಿಂದ ಸಹಾಯ ಪಡೆಯಲು ಯೋಚಿಸಿದಳು. ಅವರು ಪದೇ ಪದೇ ಖೈರುದ್ದೀನ್ ಸಾಹಿಬ್ ಎಂಬ ಕಾವಲುಗಾರನ ಮೂಲಕ ನನ್ನನ್ನು ಕರೆಯಿಸುತ್ತಿದ್ದರು. ನಾನು ಕೆಲವೊಮ್ಮೆ ಹೋಗುತ್ತಿದ್ದೆ ಮತ್ತು ಕೆಲವೊಮ್ಮೆ ಹೋಗುತ್ತಿರಲಿಲ್ಲ. ಒಟ್ಟಿನಲ್ಲಿ, ಗಲಾಟೆಯಾಗುತ್ತದೆ ಎಂದು ಬೆದರಿಸಿ ಅವರು ಮನೆಯನ್ನು ಖಾಲಿ ಮಾಡಿಸಲು ಬಯಸುತ್ತಿದ್ದರು, ಆದರೆ ನಾನು ಖಾಲಿ ಮಾಡುತ್ತಿರಲಿಲ್ಲ. ಆಗ ಮಿರ್ಝಾ ಸಾಹಿಬ್ ಶೇಖ್ ಯಾಕೂಬ್ ಅಲಿ ಸಾಹಿಬ್(ರ)ರಿಂದ ಸಹಾಯ ಕೋರಿದರು. ಮಿರ್ಝಾ ನಿಝಾಮುದ್ದೀನ್ ಸಾಹಿಬ್ ಶೇಖ್ ಯಾಕೂಬ್ ಅಲಿ ಸಾಹಿಬ್(ರ)ರಿಗೆ ಹೇಳಿದರು. ಆಗ ಶೇಖ್ ಸಾಹಿಬ್(ರ) ನನ್ನೊಡನೆ, 'ಮನೆ ಖಾಲಿ ಮಾಡುವುದೇ ಒಳಿತು' ಎಂದರು. ಆ ದಿನಗಳಲ್ಲಿ ನನ್ನ ಮನೆಯಲ್ಲಿ ಹೆಣ್ಣುಮಗುವೊಂದು ಜನಿಸಿತ್ತು, ಹಾಗಾಗಿ ಮನೆ ಬದಲಾಯಿಸುವುದು ಕಷ್ಟವಾಗಿತ್ತು. ನಾನು ಈ ವಿಷಯವನ್ನು ಹಝ್ರತ್ ಮೌಲವಿ ನೂರುದ್ದೀನ್ ಸಾಹಿಬ್(ರ)ರಿಗೆ ತಿಳಿಸಿದೆ. ಮೌಲವಿ ಸಾಹಿಬ್(ರ) ಶೇಖ್ ಯಾಕೂಬ್ ಅಲಿ ಸಾಹಿಬ್(ರ)ರ ಮೇಲೆ ಕೋಪಗೊಂಡು, 'ನೀವು ಮೊದಲು ಅವರಿಗೆ ಯಾವುದಾದರೂ ಮನೆಯನ್ನು ಕೊಡಿಸಿ, ನಂತರ ಖಾಲಿ ಮಾಡಿಸಿರಿ' ಎಂದು ಬರೆದರು. ಮೌಲವಿ ಸಾಹಿಬ್(ರ)ರ ಕೋಪಕ್ಕೆ ಶೇಖ್ ಸಾಹಿಬ್(ರ) ಸಂಪೂರ್ಣವಾಗಿ ಮೌನವಾದರು. ಆದರೆ ಮಿರ್ಝಾ ನಿಝಾಮುದ್ದೀನ್ ಒತ್ತಾಯವನ್ನು ಮುಂದುವರಿಸಿದರು. ಕೊನೆಗೆ ಒಂದು ದಿನ ನಾನು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಎಲ್ಲ ವಿಷಯವನ್ನೂ

ಬರೆದೆ. ಅವರಿಗೆ ಬಹಳ ಬೇಸರವಾಯಿತು ಮತ್ತು ಹೀಗೆ ಹೇಳಿದರು: 'ಇದನ್ನು ಓದಿ ನನಗೆ ಬಹಳ ದುಃಖವಾಗಿದೆ. ನನ್ನ ಬಳಿ ಯಾವುದಾದರೂ ಮನೆ ಖಾಲಿಯಿದ್ದಿದ್ದರೆ ಖಂಡಿತ ಕೊಡುತ್ತಿದ್ದೆ. ಮುಂದೆ ಗಮನಹರಿಸುತ್ತೇನೆ. ಇಂದು ನಾನು ಝುಹರ್ ನಮಾಝ್‌ಗಾಗಿ ಬರುವಾಗ ಮತ್ತು ಶೇಖ್ ಅಲಿ ಸಾಹಿಬ್ ಕೂಡ ಬರುವಾಗ ನನ್ನನ್ನು ನೆನಪಿಸು.' ಆ ದಿನಗಳಲ್ಲಿ ಮುಬಾರಕ್ ಮಸೀದಿಯ ವಿಸ್ತರಣೆಯ ಕೆಲಸ ನಡೆಯುತ್ತಿತ್ತು, ಹಾಗಾಗಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ)ರ ಮನೆಯಲ್ಲಿ ನಮಾಝ್ ನಡೆಸಲಾಗುತ್ತಿತ್ತು. ನಾನು ಝುಹರ್ ನಮಾಝ್‌ಗಾಗಿ ಹೋದಾಗ ಹುಝೂರ್ ಬಂದರು. ನಾನು ಇನ್ನೂ ಏನೂ ಹೇಳಿರಲಿಲ್ಲ, ನನ್ನನ್ನು ನೋಡಿ ಹೀಗೆ ಹೇಳಿದರು: 'ಮಿರ್ಝಾ ನಿಝಾಮುದ್ದೀನ್ ಕಡೆಯಿಂದ ಒಬ್ಬ ಮಹಿಳೆ ಬಂದಿದ್ದಳು. ನಾನು ಅವರಿಗೆ ಸಂದೇಶ ಕಳುಹಿಸಿದ್ದೇನೆ. ಇನ್ನು ನಿನಗೆ ತೊಂದರೆಯಾಗುವುದಿಲ್ಲ.' ಅದರಂತೆ, ನಂತರ ಯಾರೂ ನನಗೆ ಏನೂ ಹೇಳಲಿಲ್ಲ ಮತ್ತು ನಾನು ಬಹಳ ಕಾಲ ಆ ಮನೆಯಲ್ಲೇ ಇದ್ದೆ. ಸದರ್ ಅಂಜುಮನ್ ಅಹ್ಮದಿಯಾ ವತಿಯಿಂದ ನನಗೆ ಕ್ವಾರ್ಟರ್ಸ್ ಮಂಜೂರಾಗಿ ನಾನು ಮನೆ ಖಾಲಿ ಮಾಡುವ ಹೊತ್ತಿಗೆ, ಆ ಮಹಿಳೆಯ ವರ್ತನೆಯೇ ಸಂಪೂರ್ಣವಾಗಿ ಬದಲಾಗಿಹೋಗಿತ್ತು. ಹಝ್ರತ್ ಮಸೀಹ್ ಮೌಊದ್(ಅ) ಆಕೆಯ ಮೇಲೆ ಯಾವುದೋ ಉಪಕಾರ ಮಾಡಿದ್ದರು, ಆ ಕಾರಣದಿಂದಾಗಿ ಆಕೆ, 'ನೀವು ಏಕೆ ಹೋಗುತ್ತಿದ್ದೀರಿ?' ಎಂದು ಕಣ್ಣೀರು ಹಾಕುತ್ತಾ ನನ್ನನ್ನು ಹೋಗಲು ಬಿಡುತ್ತಿರಲಿಲ್ಲ. ಮೊದಲು ಜಗಳದ ವಾತಾವರಣವಿತ್ತು, ಆದರೆ ಹಝ್ರತ್ ಮಸೀಹ್ ಮೌಊದ್(ಅ)ರ ವರ್ತನೆ ಮತ್ತು ಅವರು ಮಾಡಿದ ಉಪಕಾರದಿಂದಾಗಿ ಆಕೆ ಸಂಪೂರ್ಣವಾಗಿ ಬದಲಾಗಿದ್ದಳು. ಅವರು ಬರೆಯುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಒಬ್ಬ ಸಾಮಾನ್ಯ ಸೇವಕನ ಮೇಲಿನ ಈ ಕರುಣೆ ಮತ್ತು ಉಪಕಾರ ಎಂತಹದ್ದೆಂದರೆ, ಮಿರ್ಝಾ ನಿಝಾಮುದ್ದೀನ್ ಸಾಹಿಬ್‌ರೊಂದಿಗೆ ಯಾವುದೇ ರೀತಿಯ ಒಡನಾಟವಿರಲಿಲ್ಲ, ಬಂದು-ಹೋಗುವುದು ಇರಲಿಲ್ಲ, ಸಂಪೂರ್ಣವಾಗಿ ಸಂಬಂಧ ಕಡಿದುಕೊಂಡಿದ್ದರು ಎಂಬುದು ಎಲ್ಲರಿಗೂ ತಿಳಿದಿತ್ತು. ಆದರೂ ಅವರು ನನ್ನ ಮೇಲೆ ಈ ಉಪಕಾರ ಮಾಡಿದರು. (ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ-5, ಪುಟ-445-446, ವರದಿ ಹಝ್ರತ್ ಶೇಖ್ ಮುಹಮ್ಮದ್ ನಸೀಬ್ ಸಾಹಿಬ್(ರ))

ಹಝ್ರತ್ ಶೇಖ್ ಯಾಕೂಬ್ ಅಲಿ ಸಾಹಿಬ್ ಇರ್ಫಾನಿ(ರ) ಬರೆಯುತ್ತಾರೆ: ಹೋಶಿಯಾರ್‌ಪುರದ ಮಿರ್ಝಾ ಅಹ್ಮದ್ ಬೇಗ್ ಸಾಹಿಬ್‌ರ ಮಗ ಮಿರ್ಝಾ ಮುಹಮ್ಮದ್ ಬೇಗ್‌ರ ಘಟನೆಯನ್ನೂ ಇಲ್ಲಿ ದಾಖಲಿಸುತ್ತಿದ್ದೇನೆ. ಮಿರ್ಝಾ ಮುಹಮ್ಮದ್ ಬೇಗ್‌ರ ಕುಟುಂಬದೊಂದಿಗೂ ಸಂಬಂಧ ಉತ್ತಮವಾಗಿರಲಿಲ್ಲ ಮತ್ತು ಈ ಬಾಂಧವ್ಯವು ದೇವನ ಸಂಪ್ರೀತಿಗಾಗಿ ಮಾತ್ರ ಆಗಿತ್ತು. ಇದು ಅಹ್ಮದ್ ಬೇಗ್ ಮತ್ತು ಮುಹಮ್ಮದಿ ಬೇಗಮ್‌ರ ಕುಟುಂಬವಾಗಿತ್ತು, ಅವರು ತೀವ್ರ ಧರ್ಮವಿರೋಧಿಗಳು ಮತ್ತು ಜಮಾಅತಿನ ಶತ್ರುಗಳಾಗಿದ್ದರು. ಮಿರ್ಝಾ ಮುಹಮ್ಮದ್ ಬೇಗ್ ಜಮ್ಮುವಿಗೆ ಹೋಗಿ ಉದ್ಯೋಗ ಮಾಡಲು ಬಯಸಿದನು ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರಿಂದ, ಹಝ್ರತ್ ಹಕೀಮುಲ್ ಉಮ್ಮತ್‌ರ ಹೆಸರಿಗೆ ಶಿಫಾರಸು ಪತ್ರ ನೀಡಬೇಕೆಂದು ವಿನಂತಿಸಿದನು. ಹಝ್ರತ್ ಮಸೀಹ್ ಮೌಊದ್(ಅ) ಯಾವುದೇ ನ್ಯಾಯಸಮ್ಮತ ಕೋರಿಕೆಯನ್ನು ನಿರಾಕರಿಸುತ್ತಿರಲಿಲ್ಲವಾದ್ದರಿಂದ, ಯಾವುದೇ ಹಿಂಜರಿಕೆಯಿಲ್ಲದೆ ಈ ಕೆಳಗಿನ ಪತ್ರವನ್ನು ಬರೆದರು. ಅದರಲ್ಲಿ ಹೀಗೆ ಬರೆಯಲಾಗಿತ್ತು: 'ನಿಮ್ಮ ಬಳಿ ಬಂದಿರುವ ಮುಹಮ್ಮದ್ ಬೇಗ್ ಎಂಬ ಹುಡುಗನ ತಂದೆ ಮಿರ್ಝಾ ಅಹ್ಮದ್ ಬೇಗ್, ತನ್ನ ಅಜ್ಞಾನ ಮತ್ತು ಅಹಂಕಾರದಿಂದಾಗಿ ನನ್ನೊಂದಿಗೆ ತೀವ್ರ ಶತ್ರುತ್ವ ಮತ್ತು ದ್ವೇಷವನ್ನು ಹೊಂದಿದ್ದಾನೆ ಎಂಬುದು ನಿಮಗೆ ತಿಳಿದಿರಬಹುದು. ಆದರೆ ಈ ಜನರ ಕಠೋರತೆಗೆ ಪ್ರತಿಯಾಗಿ ಮೃದುತ್ವವನ್ನು ತೋರುವ ಮೂಲಕ 'ಇದ್‌ಫಅ್ ಬಿಲ್ಲತೀ ಹಿಯ ಅಹ್ಸನ್' (ಕೆಡುಕನ್ನು ಅತ್ಯುತ್ತಮವಾದುದರಿಂದ ದೂರಮಾಡಿರಿ) ಎಂಬ ಪುಣ್ಯವನ್ನು ಗಳಿಸುವುದರಲ್ಲಿ ಯಾವುದೇ ಅಭ್ಯಂತರವಿಲ್ಲ. ನಾನು ಉತ್ತಮ ರೀತಿಯಲ್ಲಿ ಉತ್ತರಿಸಬೇಕು ಮತ್ತು ಅವನಿಗೆ ಒಳಿತು ಮಾಡಬೇಕು. ದೇವನ ಈ ಆಜ್ಞೆಯನ್ನು ಪಾಲಿಸುವ ಮೂಲಕ ಆ ಪುಣ್ಯವನ್ನು ನಾನೇಕೆ ಗಳಿಸಬಾರದು? ಈ ಹುಡುಗ ಮುಹಮ್ಮದ್ ಬೇಗ್‌ನ ಅನೇಕ ಪತ್ರಗಳು ಬಂದಿವೆ, ಮೌಲವಿ ಸಾಹಿಬ್ ಪೊಲೀಸ್ ಇಲಾಖೆಯಲ್ಲಿ ನನಗೆ ಉದ್ಯೋಗ ಕೊಡಿಸಬೇಕು ಎಂದು ಆತ ವಿನಂತಿಸಿದ್ದಾನೆ.' ಈ ಪತ್ರದ ನಂತರ ಹಝ್ರತ್ ಮೌಲವಿ ಸಾಹಿಬ್(ರ) ಅವನಿಗೆ ಪೊಲೀಸ್ ಇಲಾಖೆಯಲ್ಲಿ ಉದ್ಯೋಗ ಕೊಡಿಸಿದರು.

ಈ ಘಟನೆಗಳಿಂದ ಸ್ಪಷ್ಟವಾಗುವುದೇನೆಂದರೆ, ದೇವನ ಸೃಷ್ಟಿಗಳಿಗೆ ಯಾವುದೇ ರೀತಿಯಲ್ಲಿ ಪ್ರಯೋಜನವನ್ನು ಒದಗಿಸಲು ಅವರು ಸದಾ ಸಿದ್ಧರಿರುತ್ತಿದ್ದರು. ಔದಾರ್ಯ, ದಾನಶೀಲತೆ ಮತ್ತು ಶಿಫಾರಸು ಮಾಡುವುದರಿಂದ ಅವರು ಎಂದಿಗೂ ಹಿಂಜರಿಯುತ್ತಿರಲಿಲ್ಲ. ಇಷ್ಟೆಲ್ಲ ಇದ್ದಾಗ್ಯೂ, ಏನನ್ನಾದರೂ ನೀಡುವುದು ದುಂದುವೆಚ್ಚದ ರೀತಿಯಲ್ಲಿದೆ ಎಂದು ಕಂಡುಬಂದರೆ ಅವರು ಅದರಿಂದ ದೂರವಿರುತ್ತಿದ್ದರು. ದುಂದುವೆಚ್ಚವಾಗಬಾರದು ಎಂಬುದನ್ನು ಅವರು ಪಾಲಿಸುತ್ತಿದ್ದರು. (ಸೀರತ್ ಹಝ್ರತ್ ಮಸೀಹ್ ಮೌಊದ್(ಅ), ಹಝ್ರತ್ ಶೇಖ್ ಯಾಕೂಬ್ ಅಲೀ ಸಾಹಿಬ್ ಇರ್ಫಾನಿ, ಭಾಗ-2, ಪುಟ-298-299)

ಹಝ್ರತ್ ಶೇಖ್ ಯಾಕೂಬ್ ಅಲಿ ಸಾಹಿಬ್(ರ) ಬರೆಯುತ್ತಾರೆ: ಖಾದಿಯಾನಿನಲ್ಲಿ ನಿಹಾಲ್ ಚಂದ್ ಎಂಬೊಬ್ಬನಿದ್ದನು. ಅವನನ್ನು ನಿಹಾಲಾ ಎಂತಲೂ ಕರೆಯುತ್ತಿದ್ದರು. ಆತನ್ ಬಹಾರೋ ರಾಜ್ ಎಂಬ ಬ್ರಾಹ್ಮಣನಾಗಿದ್ದ. ನಿಹಾಲ್ ಚಂದ್ ತನ್ನ ಯೌವನದ ದಿನಗಳಲ್ಲಿ ಪ್ರಸಿದ್ಧ ಮೊಕದ್ದಮೆಗಾರನಾಗಿದ್ದನು ಮತ್ತು ಹಿಂದೂ ಆಗಿದ್ದನು. ಆತ ಹಝ್ರತ್ ಮಸೀಹ್ ಮೌಊದ್(ಅ)ರ ಕುಟುಂಬದವರೊಂದಿಗೆ ಸದಾ ಕಿಡಿಗೇಡಿತನ ಮಾಡುತ್ತಿದ್ದ ಜನರ ಗುಂಪಿನವನಾಗಿದ್ದನು. ಕೊನೆಯವರೆಗೂ ಆತನ ಸ್ಥಿತಿ ಬಹುತೇಕ ಹೀಗೆಯೇ ಇತ್ತು. ಆತ ಜಮಾಅತಿನ ಶತ್ರುಗಳೊಂದಿಗೂ ಸೇರಿಕೊಂಡಿದ್ದನು. ಜೀವನದ ಕೊನೆಯ ದಿನಗಳಲ್ಲಿ ಅವನ ಆರ್ಥಿಕ ಸ್ಥಿತಿ ಅತ್ಯಂತ ಹದಗೆಟ್ಟಿತು. ಎಷ್ಟರಮಟ್ಟಿಗೆ ಎಂದರೆ ಕೆಲವೊಮ್ಮೆ ಅವನಿಗೆ ತನ್ನ ದೈನಂದಿನ ಅಗತ್ಯಗಳಿಗೂ ಕಷ್ಟವಾಗುತ್ತಿತ್ತು. ಊಟಕ್ಕೂ ಪರದಾಡುವಂತಾಯಿತು. ಒಮ್ಮೆ ಅವನು ಹಝ್ರತ್ ಮಸೀಹ್ ಮೌಊದ್(ಅ)ರ ಮನೆ ಬಾಗಿಲಿಗೆ ಬಂದು ಭೇಟಿಯಾಗುವ ಇಚ್ಛೆಯನ್ನು ವ್ಯಕ್ತಪಡಿಸಿ ವಿಷಯ ಮುಟ್ಟಿಸಿದನು. ಆತ ಶತ್ರುವಾಗಿದ್ದನು, ಆದರೂ ಇಂತಹ ಜನರಿಗೆ ಯಾವ ನಾಚಿಕೆಯೂ ಇರುವುದಿಲ್ಲ. ಹಝ್ರತ್ ಮಸೀಹ್ ಮೌಊದ್(ಅ)ರ ಬಾಗಿಲಿಗೆ ಬಂದು ಭೇಟಿಯ ಇಚ್ಛೆ ವ್ಯಕ್ತಪಡಿಸಿದಾಗ, ಅವರು ತಕ್ಷಣವೇ ಹೊರಬಂದರು. ಅವನು ನಮಸ್ಕರಿಸಿ ತನ್ನ ಕಥೆಯನ್ನು ಹೇಳಲಾರಂಭಿಸಿದನು. ಹಝ್ರತ್ ಮಸೀಹ್ ಮೌಊದ್(ಅ) ಅವನಿಗೆ ಸಾಂತ್ವನ ಹೇಳಿದ್ದಲ್ಲದೆ, ಇಪ್ಪತ್ತೈದು ರೂಪಾಯಿ ತಂದು ಅವನ ಕೈಗಿಟ್ಟು, 'ಸದ್ಯಕ್ಕೆ ಇದರಿಂದ ನಿಭಾಯಿಸಿಕೊ, ಆಮೇಲೆ ಅಗತ್ಯವಿದ್ದಾಗ ನನಗೆ ತಿಳಿಸು' ಎಂದರು. ಅನಂತರ ಅದು ಅವನ ವಾಡಿಕೆಯಾಯಿತು. ಅವನು ತಿಂಗಳು-ಎರಡು ತಿಂಗಳಿಗೊಮ್ಮೆ ಬರುತ್ತಿದ್ದನು ಮತ್ತು ತನ್ನ ಅಗತ್ಯಗಳಿಗಾಗಿ ತಕ್ಕಮಟ್ಟಿಗಿನ ಹಣವನ್ನು ಪಡೆದುಕೊಳ್ಳುತ್ತಿದ್ದನು. ಆತ ಕೇವಲ ಹಝ್ರತ್ ಮಸೀಹ್ ಮೌಊದ್(ಅ)ರಿಂದ ಮಾತ್ರವಲ್ಲ, ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ)ರಿಂದಲೂ ನಿರ್ದಿಷ್ಟ ಗಡುವಿನ ವಾಗ್ದಾನದೊಂದಿಗೆ ಸಾಲವಾಗಿ ಒಂದು ದೊಡ್ಡ ಮೊತ್ತವನ್ನು ಪಡೆದಿದ್ದನು. ವಾಗ್ದಾನ ಮಾಡಿದ ಸಮಯ ಮುಗಿದಾಗ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಹಣವನ್ನು ಮರುಪಾವತಿಸಲು ಹೇಳಿ ಕಳುಹಿಸಿದರು. ಆದರೆ ಆತ ಕೇವಲ ಹಾರಿಕೆಯ ಉತ್ತರ ನೀಡಿ ಸಾಗಹಾಕಿದನು. ಕೊನೆಗೆ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಆತನನ್ನು ಕೇಳುವಂತೆ ನನಗೆ ಹೇಳಿದರು. ನಾನು ಹೋಗಿ ಕೇಳಿದಾಗ ಆತ ಮೇಲೆ ವಿವರಿಸಲಾದ ಘಟನೆಯನ್ನೇ ಹೇಳಿ, 'ಮೌಲವಿ ಸಾಹಿಬ್ ಅವರು ಪದೇ ಪದೇ ಜನರನ್ನು ಕಳುಹಿಸುತ್ತಾರೆ, ಮಿರ್ಝಾಜೀ ನನಗೆ ಯಾವಾಗಲೂ ಹಣ ನೀಡುತ್ತಾರೆ ಮತ್ತು ಅದರಿಂದಲೇ ನನ್ನ ಜೀವನ ಸಾಗುತ್ತಿದೆ' ಎಂದು ಹೇಳಿದನು. ನಾನು ಬಂದು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ)ರಿಗೆ ಎಲ್ಲವನ್ನೂ ವಿವರಿಸಿದೆ. ಆಗ ಅವರು ಹೇಳಿದರು: 'ಸರಿ, ಇನ್ನು ಮುಂದೆ ಅವನನ್ನು ಕೇಳಬೇಡ' ತದನಂತರ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಅವನಿಂದ ಎಂದಿಗೂ ಮರಳಿ ಕೇಳಲಿಲ್ಲ.

ಅದೇ ರೀತಿ ಪಂಡಿತ್ ಭೇಜ್ ನಾಥ್ ಎಂಬೊಬ್ಬ ವ್ಯಕ್ತಿಯಿದ್ದನು. ಆತನ ವರ್ತನೆ ಸರಿಯಿಲ್ಲದಿದ್ದರೂ, ಕೆಲವೊಮ್ಮೆ ಹಝ್ರತ್ ಮಸೀಹ್ ಮೌಊದ್(ಅ) ಆತನಿಗೂ ಸಹಾಯ ಮಾಡಿದ್ದರು ಎಂದು ನನಗೆ ತಿಳಿದಿದೆ.

(ಸೀರತ್ ಹಝ್ರತ್ ಮಸೀಹ್ ಮೌಊದ್(ಅ), ಹಝ್ರತ್ ಶೇಖ್ ಯಾಕೂಬ್ ಅಲೀ ಸಾಹಿಬ್ ಇರ್ಫಾನಿ, ಭಾಗ-2, ಪುಟ-289-290)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ವೈ.ಎಂ.ಸಿ.ಎ. ಕಾರ್ಯದರ್ಶಿಯಾಗಿದ್ದ ಪಾದ್ರಿ ವಾಲ್ಟರ್ ಎಂ.ಎ. ತಮ್ಮ ಇಂಗ್ಲಿಷ್ ಪುಸ್ತಕ 'ದಿ ಅಹ್ಮದಿಯಾ ಮೂವ್‌ಮೆಂಟ್'ನಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ಕುರಿತು ಈ ಅಭಿಪ್ರಾಯವನ್ನು ಬರೆದಿದ್ದಾರೆ: ಮಿರ್ಝಾ ಸಾಹಿಬ್ ತಮ್ಮ ಅಭ್ಯಾಸಗಳಲ್ಲಿ ಸರಳ ಮತ್ತು ಉದಾರ ಭಾವನೆಗಳನ್ನು ಹೊಂದಿರುವವರಾಗಿದ್ದರು ಎಂಬುದು ಎಲ್ಲ ರೀತಿಯಿಂದಲೂ ಸಾಬೀತಾಗಿದೆ. ತಮ್ಮ ವಿರೋಧಿಗಳ ಕಡೆಯಿಂದ ಉಂಟಾದ ತೀವ್ರ ವಿರೋಧ ಮತ್ತು ಕಿರುಕುಳದ ಮುಂದೆ ಅವರು ತೋರಿದ ನೈತಿಕ ಧೈರ್ಯವು ಖಂಡಿತವಾಗಿಯೂ ಶ್ಲಾಘನೀಯವಾಗಿದೆ. ಕಾಂತದಂತಹ ಆಕರ್ಷಣೆ ಮತ್ತು ಅತ್ಯಂತ ಹಿತಕರವಾದ ನೈತಿಕತೆಯನ್ನು ಹೊಂದಿರುವ ವ್ಯಕ್ತಿ ಮಾತ್ರ ಇಂತಹ ಜನರ ಸ್ನೇಹ ಮತ್ತು ನಿಷ್ಠೆಯನ್ನು ಗಳಿಸಲು ಸಾಧ್ಯ. ಅವರಲ್ಲಿ ಕನಿಷ್ಠ ಇಬ್ಬರು ಅಫ್ಘಾನಿಸ್ತಾನದಲ್ಲಿ ತಮ್ಮ ನಂಬಿಕೆಗಳಿಗಾಗಿ ಜೀವಾರ್ಪಣೆ ಮಾಡಿದರು. (ಆ ಅಫ್ಘಾನಿಸ್ತಾನದ ಹುತಾತ್ಮರ ಉಲ್ಲೇಖವನ್ನು ಅವರು ಮಾಡಿದ್ದಾರೆ). ಆ ಜನರು ಪ್ರಾಣಬಿಟ್ಟರು, ಆದರೆ ಹಝ್ರತ್ ಮಸೀಹ್ ಮೌಊದ್(ಅ)ರ ವರ್ತನೆಯ ಕಾರಣದಿಂದಾಗಿ ಅವರ ಕೈ ಬಿಡಲಿಲ್ಲ. ನಾನು ಕೆಲವು ಹಳೆಯ ಅಹ್ಮದಿಯರಿಂದ ಅವರು ಅಹ್ಮದಿಯಾಗಲು ಕಾರಣವೇನೆಂದು ಕೇಳಿದಾಗ, ಹೆಚ್ಚಿನವರು ಮಿರ್ಝಾ ಸಾಹಿಬ್(ಅ)ರ ವೈಯಕ್ತಿಕ ಪ್ರಭಾವ ಮತ್ತು ಅವರ ಆಕರ್ಷಕ ವ್ಯಕ್ತಿತ್ವವನ್ನೇ ಅತಿದೊಡ್ಡ ಕಾರಣವಾಗಿ ಮುಂದಿಟ್ಟರು. (ಸೀರತುಲ್

ಮಹದಿ, ಸಂಪುಟ–1, ಭಾಗ–1, ಪುಟ–268–269, ವರದಿ ಸಂಖ್ಯೆ–297)

ಸಾರ್ವಜನಿಕ ಸಭೆಗಳಲ್ಲೂ ಹಝ್ರತ್ ಮಸೀಹ್ ಮೌಊದ್(ಅ), ವಿರೋಧಿಗಳು ಬಂದು ತಮ್ಮ ಸಂಶಯಗಳನ್ನು ನಿವಾರಿಸಲು ನನ್ನೊಡನೆ ಪ್ರಶ್ನೆಗಳನ್ನು ಕೇಳುವುದಾದರೆ ಅವರ ಖರ್ಚನ್ನೂ ಭರಿಸಲು ನಾನು ಸಿದ್ಧನಿದ್ದೇನೆ ಎಂದು ಹೇಳುತ್ತಿದ್ದರು. ಈ ಕುರಿತು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಮಿಯಾನ್ ಫಕ್ರುದ್ದೀನ್ ಸಾಹಿಬ್ ಮುಲ್ತಾನಿ ನನಗೆ ತಿಳಿಸಿದರು, ಹಝ್ರತ್ ಮಸೀಹ್ ಮೌಊದ್(ಅ)ರ ಕಾಲದಲ್ಲಿ ಒಮ್ಮೆ ನನ್ನ ತಂದೆಯವರು ಇಲ್ಲಿಗೆ ಬಂದರು. ಅವರು ತೀವ್ರ ವಿರೋಧಿ ಮತ್ತು ನಿಂದಕರಾಗಿದ್ದರು. ಇಲ್ಲಿಗೆ ಬಂದಾಗಲೂ ಬಹಳ ಆವೇಶದಿಂದ ಮಾತನಾಡುತ್ತಿದ್ದರು. ಮುಲ್ತಾನ್‌ನಲ್ಲಿದ್ದಾಗ ಅವರು ಹೀಗೆ ಹೇಳುತ್ತಿದ್ದರು: 'ನಾನು ಎಂದಾದರೂ ಮಿರ್ಝಾರನ್ನು ಭೇಟಿಯಾದರೆ, ಅವರ ಮುಂದೆಯೇ ಶಾಪ ಹಾಕುವೆ' ಅಂದರೆ ಇಲ್ಲಿ ಏನು ಹೇಳುತ್ತೇನೋ ಅದನ್ನೇ ಅವರ ಮುಂದೆಯೂ ಹೇಳುವೆ ಎನ್ನುತ್ತಿದ್ದರು. ಏನೇ ಇರಲಿ, ನಾನು ಅವರನ್ನು ಹಝ್ರತ್ ಸಾಹಿಬ್‌ರ ಬಳಿಗೆ ಕರೆದೊಯ್ದೆ. ಹಝ್ರತ್ ಮಸೀಹ್ ಮೌಊದ್(ಅ) ಹೊರಗೆ ಬಂದಾಗ, ನನ್ನ ತಂದೆ ಅತ್ಯಂತ ವಿನಯದಿಂದ ಎದ್ದು ನಿಂತರು ಮತ್ತು ಹೆದರಿ ಹಿಂದಕ್ಕೆ ಸರಿದು ಕುಳಿತುಕೊಂಡರು. ಆ ಸಮಯದಲ್ಲಿ ಸಭೆಯಲ್ಲಿ ಇತರ ಜನರೂ ಇದ್ದರು. ಹಝ್ರತ್ ಮಸೀಹ್ ಮೌಊದ್(ಅ) ಅಲ್ಲಿಯೇ ಕುಳಿತು, ಯಾವುದೇ ಪ್ರಶ್ನೆ ಕೇಳದೆಯೇ ಭಾಷಣ ಪ್ರಾರಂಭಿಸಿದರು ಮತ್ತು ಹೀಗೆ ಹೇಳಿದರು: "ಜನರು ನಮ್ಮ ಬಳಿಗೆ ಬರಬೇಕು, ನಮ್ಮ ಮಾತುಗಳನ್ನು ಕೇಳಬೇಕು, ನಮ್ಮೊಡನೆ ಪ್ರಶ್ನೆಗಳನ್ನು ಕೇಳಬೇಕು ಎಂದು ನಾವು ಎಷ್ಟೋ ಬಾರಿ ಬಯಸಿದ್ದೇವೆ, ಮತ್ತು ನಾವು ಅವರಿಗಾಗಿ ಖರ್ಚು ಮಾಡಲೂ ಸಿದ್ಧರಿದ್ದೇವೆ. ಆದರೆ ಮೊದಲನೆಯದಾಗಿ ಜನರು ಬರುವುದಿಲ್ಲ, ಒಂದು ವೇಳೆ ಬಂದರೂ ಮೌನವಾಗಿ ಕುಳಿತಿರುತ್ತಾರೆ ಮತ್ತು ಹಿಂದೆ ಹೋಗಿ ಮಾತನಾಡುತ್ತಾರೆ." ಒಟ್ಟಿನಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಅತ್ಯಂತ ಸ್ಪಷ್ಟವಾಗಿ ಭಾಷಣ ಮಾಡಿದರು ಮತ್ತು ಧರ್ಮಪ್ರಚಾರ ಮಾಡಿದರು, ಹಾಗೂ ಪ್ರಶ್ನೆ ಕೇಳಲು ಅವರನ್ನು ಹಲವು ಬಾರಿ ಪ್ರೇರೇಪಿಸಿದರು. ನನ್ನ ತಂದೆ ಬಹಳ ಮಾತನಾಡುವವರಾಗಿದ್ದಾರೆ, ಆದರೆ ಆ ಕ್ಷಣದಲ್ಲಿ ಅವರ ಬಾಯಿಗೆ ಬೀಗ ಹಾಕಿದಂತಾಗಿತ್ತು ಮತ್ತು ಅವರು ಒಂದು ಮಾತನ್ನೂ ಆಡಲಿಲ್ಲ. ಅಲ್ಲಿಂದ ಎದ್ದ ನಂತರ ನಾನು ಅವರೊಡನೆ, "ನೀವು ಅಲ್ಲಿ ಏಕೆ ಮಾತನಾಡಲಿಲ್ಲ?" ಎಂದು ಕೇಳಿದೆ. ಅದಕ್ಕೆ ಅವರು ಏನೂ ಹೇಳಲಿಲ್ಲ, ಮಾತುಗಳಲ್ಲೇ ಸಾಗಹಾಕಿದರು. ಏನೇ ಆಗಲಿ, ಮಿಯಾನ್ ಫಕ್ರುದ್ದೀನ್ ಸಾಹಿಬ್ ಹೇಳುತ್ತಾರೆ, ಹಝ್ರತ್ ಸಾಹಿಬ್ ತಮ್ಮ ಭಾಷಣದಲ್ಲಿ ನನ್ನ ತಂದೆಯನ್ನು ನೇರವಾಗಿ ಉದ್ದೇಶಿಸಿರಲಿಲ್ಲ, ಬದಲಾಗಿ ಸಾಮಾನ್ಯ ಭಾಷಣ ಮಾಡಿದ್ದರು. ಆದರೆ ದುರದೃಷ್ಟವಶಾತ್ ಮಿಯಾನ್ ಫಕ್ರುದ್ದೀನ್ ಸಾಹಿಬ್ ಕೂಡ ಎರಡನೇ ಖಿಲಾಫತ್‌ನ ಕಾಲದಲ್ಲಿ ಜಮಾಅತನ್ನು ತೊರೆದರು.

(ಸೀರತುಲ್ ಮಹದಿ, ಸಂಪುಟ–1, ಭಾಗ–1, ಪುಟ–54, 55 ವರದಿ ಸಂಖ್ಯೆ–74)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ವಿವರಿಸುತ್ತಾರೆ: ನುಸ್ರತ್ ಹೈಸ್ಕೂಲ್‌ನಲ್ಲಿ ಶಿಕ್ಷಕಿಯಾಗಿರುವ ಲುಧಿಯಾನಾದ ದಿವಂಗತ ಮೌಲವಿ ಅಬ್ದುಲ್ ಖಾದಿರ್ ಸಾಹಿಬ್(ರ)ರ ಪುತ್ರಿ ಸಫಿಯಾ ಬೇಗಮ್ ನನಗೆ ತಿಳಿಸಿದರು. ಒಮ್ಮೆ ಒಬ್ಬ ಯಾಚಕನು ಕಿಟಕಿಯ ಮೂಲಕ ಕುರ್ತಾ ಕೇಳುತ್ತಿದ್ದನು. ಒಬ್ಬ ಯಾಚಕ ಬಂದು ಕುರ್ತಾ ಕೇಳಿದನು. ಹಝ್ರತ್ ಸಾಹಿಬ್ ತಮ್ಮ ಕುರ್ತಾವನ್ನೇ ತೆಗೆದು ಕಿಟಕಿಯಿಂದ ಆ ಫಕೀರನಿಗೆ ನೀಡಿದರು. ಅದನ್ನು ನೋಡುತ್ತಿದ್ದ ನನ್ನ ತಂದೆ, 'ಅಲ್ಲಾಹ್ ಅಲ್ಲಾಹ್, ಎಂತಹ ಔದಾರ್ಯ ಮೆರೆಯುತ್ತಿದ್ದಾರೆ' ಎಂದು ಹೇಳಿದರು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ವಿವರಿಸುತ್ತಾರೆ: ಮೌಲವಿ ಅಬ್ದುರ್ರಹ್ಮಾನ್ ಸಾಹಿಬ್ ಫಾಝಿಲ್ ಜಟ್‌ರ ಅತ್ತೆಯೂ ಮತ್ತು ದಿವಂಗತ ಹಾಫಿಝ್ ಹಾಮಿದ್ ಅಲಿ ಸಾಹಿಬ್(ರ)ರ ಪತ್ನಿಯೂ ಆಗಿರುವ ರಸೂಲ್ ಬೀವಿ ಸಾಹಿಬಾ ವಿವರಿಸಿದರು: ನಮ್ಮ ಆಹಾರ ಮತ್ತು ಬಟ್ಟೆಯ ಎಲ್ಲ ಖರ್ಚನ್ನೂ ಹಝ್ರತ್ ಮಸೀಹ್ ಮೌಊದ್(ಅ)ರೇ ನೋಡಿಕೊಳ್ಳುತ್ತಿದ್ದರು. ಒಮ್ಮೆ ಅವರು ತಮಗಾಗಿ ಮತ್ತು ಹಾಫಿಝ್ ಹಾಮಿದ್ ಅಲಿ ಸಾಹಿಬ್(ರ)ಗಾಗಿ ಒಂದೇ ಬಗೆಯ ಬಟ್ಟೆಯ ಎರಡು ಕೋಟುಗಳನ್ನು ಹೊಲಿಸಿದ್ದರು. ಚಳಿಗಾಲದ ಸಮಯವಾಗಿತ್ತು, ನಾನು ಹಾಫಿಝ್ ಸಾಹಿಬ್‌ರೊಡನೆ ಹೇಳಿದೆ: 'ಬೆಳಿಗ್ಗೆ ತಹಜ್ಜುದ್ ನಮಾಝಿಗಾಗಿ ಎಳುವಾಗ ಮತ್ತು ಊಟ ತಯಾರಿಸುವಾಗ ನನಗೆ ಚಳಿಯಾಗುತ್ತದೆ.' ಹಝ್ರತ್ ಮಸೀಹ್ ಮೌಊದ್(ಅ) ಮಾಡಿಸಿಕೊಟ್ಟಿದ್ದ ಬೆಚ್ಚಗಿನ ಕೋಟನ್ನು ಹಾಫಿಝ್ ಸಾಹಿಬ್ ನನಗೆ ನೀಡಿ, 'ನೀನು ಇದನ್ನು ಧರಿಸಿಕೊ' ಎಂದರು. ನಾನು ಅದನ್ನು ಧರಿಸಿಕೊಂಡು ಒಲೆಯ ಬಳಿ ಬೆಂಕಿ ಉರಿಸುತ್ತಿದ್ದಾಗ ಹಝ್ರತ್ ಮಸೀಹ್ ಮೌಊದ್(ಅ) ಅಲ್ಲಿಗೆ ಬಂದರು. ಅವರು ತಮಾಷೆಯಾಗಿ, 'ರಸೂಲ್ ಬೀವಿ, ನನ್ನ ಕೋಟನ್ನು ಕದ್ದಿದ್ದೀಯಾ?' ಎಂದು ಕೇಳಿದರು. ಆಗ ನಾನು ಹೇಳಿದೆ: 'ಹುಝೂರ್, ಎಲ್ಲವೂ ನಿಮ್ಮದೇ, ನಿಮ್ಮದ್ದನ್ನೇ ತಿನ್ನುತ್ತೇವೆ, ನಿಮ್ಮದ್ದನ್ನೇ ಧರಿಸುತ್ತೇವೆ.' ಆಗ ಹಝ್ರತ್ ಮಸೀಹ್ ಮೌಊದ್(ಅ) ನಕ್ಕು, 'ಚೆನ್ನಾಗಿ ತಿನ್ನಿ, ಕುಡಿಯಿರಿ' ಎಂದರು. (ಸೀರತುಲ್ ಮಹದಿ, ಸಂಪುಟ–2, ಭಾಗ–5, ಪುಟ–288, ವರದಿ ಸಂಖ್ಯೆ–1517)

ಹಝ್ರತ್ ಶೇಖ್ ಯಾಕೂಬ್ ಅಲಿ ಸಾಹಿಬ್(ರ) ವಿವರಿಸುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ) ಯಾರಿಗಾದರೂ ಏನನ್ನಾದರೂ ನೀಡಿದರೆ ಅದು ಯಾವುದೇ ಪ್ರದರ್ಶನಕ್ಕಾಗಿ ಆಗಿರುತ್ತಿರಲಿಲ್ಲ, ಬದಲಾಗಿ ಕೇವಲ ದೇವನ ಸಂಪ್ರೀತಿಗಾಗಿ ಮತ್ತು ದೇವನ ಸೃಷ್ಟಿಗಳ ಮೇಲಿನ ವಾತ್ಸಲ್ಯದ ಭಾವನೆಯಿಂದ ನೀಡುತ್ತಿದ್ದರು. ಆದ್ದರಿಂದ ಅವರು ಸಾಮಾನ್ಯವಾಗಿ ಅತ್ಯಂತ ರಹಸ್ಯವಾಗಿ ನೀಡುತ್ತಿದ್ದರು ಮತ್ತು ಕೆಲವೊಮ್ಮೆ ಇತರರಿಗೆ ಪ್ರೇರಣೆ ನೀಡಲು ಮತ್ತು ಪ್ರಾಯೋಗಿಕ ಪಾಠವನ್ನು ಕಲಿಸಲು ಬಹಿರಂಗವಾಗಿಯೂ ನೀಡುತ್ತಿದ್ದರು. ರಹಸ್ಯವಾಗಿ ನೀಡುವಲ್ಲಿ ಅವರ ಇನ್ನೊಂದು ವಿಧಾನವೇನೆಂದರೆ, ಕೆಲವೊಮ್ಮೆ ಪಡೆಯುವವನಿಗೂ ತಿಳಿಯದಂತೆ ನೀಡುತ್ತಿದ್ದರು. ಈ ವಿಷಯದಲ್ಲಿ ನಾನು ಒಂದು ಘಟನೆಯನ್ನು ವಿವರಿಸುತ್ತೇನೆ. ಇಂದು ಖಾದಿಯಾನಿನಿಂದ ಸಂಬಂಧ ಕಡಿದುಕೊಂಡು ಹಿಂದೆ ಸರಿದಿರುವ ಮುನ್ಷಿ ಮುಹಮ್ಮದ್ ನಸೀಬ್ ಸಾಹಿಬ್, ಹಿಂದೆ ಅನಾಥನಾಗಿ ಖಾದಿಯಾನಿಗೆ ಬಂದಿದ್ದರು ಮತ್ತು ಹಝ್ರತ್ ಸಾಹಿಬ್‌ರ ಕರುಣೆ ಮತ್ತು ಆಶ್ರಯದಲ್ಲಿ ಖಾದಿಯಾನಿನಲ್ಲಿ ಶಿಕ್ಷಣ ಪಡೆದರು. ಅವರ ಖರ್ಚು ಮತ್ತು ಅಗತ್ಯಗಳ ಸಂಪೂರ್ಣ ಹೊರೆ ಜಮಾಅತ್ ಮೇಲಿತ್ತು. ಅವರು ಯುವಕರಾಗಿ ಮದುವೆಯಾದ ನಂತರ ಲಾಹೋರ್‌ನ ಪತ್ರಿಕಾ ಕಚೇರಿಯೊಂದರಲ್ಲಿ ಗುಮಾಸ್ತರಾಗಿ ಕೆಲಸ ಮಾಡಿದರು ಮತ್ತು ನಂತರ ಖಾದಿಯಾನಿನ ಬದರ್ ಕಚೇರಿಗೆ ಬಂದು ಹನ್ನೆರಡು ರೂಪಾಯಿ ಮಾಸಿಕ ವೇತನಕ್ಕೆ ಉದ್ಯೋಗಿಯಾದರು. ಅಲ್ಲಾಹನು ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ)ರಿಗೆ ಮೊದಲ ಪುತ್ರ ನಸೀರ್ ಅಹ್ಮದ್‌ರನ್ನು ದಯಪಾಲಿಸಿದಾಗ (ಈ ಮಗು ನಂತರ ತೀರಿಕೊಂಡಿತು), ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಆ ಮಗುವನ್ನು ಸಾಕಿ ಸಲುಹಲು ಒಬ್ಬ ದಾದಿಯ ಅಗತ್ಯವಿತ್ತು. ನಾನು ಶೇಖ್ ಮಹಮೂದ್ ನಸೀಬ್‌ರೊಡನೆ ಹೇಳಿದೆ: 'ಇಂತಹ ಸಂದರ್ಭದಲ್ಲಿ ನೀನು ನಿನ್ನ ಹೆಂಡತಿಯ ಸೇವೆಗಳನ್ನು ಮುಂದಿಡು. ಇದು ಲಾಭ ಮತ್ತು ಪುಣ್ಯ ಎರಡೂ ಸಿಗುವ ಅವಕಾಶವಾಗಿದೆ. ಇದರಿಂದ ನಿನಗೆ ದ್ವಿಗುಣ ಲಾಭವಾಗುತ್ತದೆ'. ಶೇಖ್ ಸಾಹಿಬ್ ನನ್ನ ಸಲಹೆಯನ್ನು ಗೌರವದಿಂದ ಸ್ವೀಕರಿಸಿದರು ಮತ್ತು ಅವರಿಗೆ ಆ ಅವಕಾಶ ಸಿಕ್ಕಿತು, ಅವರ ಪತ್ನಿಯು ಸಾಹೇಬ್‌ಝಾದಾ ನಸೀರ್ ಅಹ್ಮದ್‌ರಿಗೆ ಹಾಲುಣಿಸುವ ಕಾರ್ಯಕ್ಕೆ ನೇಮಕಗೊಂಡರು. ಈ ಮಧ್ಯೆ ಹಝ್ರತ್ ಮಸೀಹ್ ಮೌಊದ್(ಅ) ಮಾತಿನ ಮಧ್ಯೆ, 'ಶೇಖ್ ಮಹಮೂದ್ ನಸೀಬ್ ಸಾಹಿಬ್‌ಗೆ ಎಷ್ಟು ವೇತನ ಸಿಗುತ್ತದೆ?' ಎಂದು ವಿಚಾರಿಸಿದರು. ಕೇವಲ ಹನ್ನೆರಡು ರೂಪಾಯಿಗಳು ಸಿಗುತ್ತವೆ ಎಂದು ತಿಳಿದಾಗ, ಇಷ್ಟು ಕಡಿಮೆ ವೇತನದಲ್ಲಿ ಅವರಿಗೆ ಜೀವನ ಸಾಗಿಸುವುದು ಕಷ್ಟವಾಗುತ್ತಿರಬಹುದು ಎಂದು ಅವರಿಗೆ ಅನಿಸಿತು. ಅದು ಅಗ್ಗದ ಕಾಲವಾಗಿದ್ದರೂ, ಹಝ್ರತ್ ಸಾಹಿಬ್‌ರಿಗೆ ಈ ಭಾವನೆ ಮೂಡಿತು. ಒಂದು ದಿನ ಅವರು ಹಾದುಹೋಗುವಾಗ ಶೇಖ್ ಸಾಹಿಬ್‌ರ ಕೋಣೆಯಲ್ಲಿ ಇಪ್ಪತ್ತು–ಇಪ್ಪತ್ತೈದು ರೂಪಾಯಿಗಳ ಗಂಟೊಂದನ್ನು ಎಸೆದರು. ಶೇಖ್ ಸಾಹಿಬ್‌ಗೆ ಇದು ಎಲ್ಲಿಂದ ಬಂದ ಹಣ ಎಂದು ಆಶ್ಚರ್ಯವಾಯಿತು. ಕೊನೆಗೆ, ಅವರಿಗೆ ಕಷ್ಟವಾಗಬಾರದು ಮತ್ತು ಅವರು ನೆಮ್ಮದಿಯಿಂದ ಜೀವನ ಸಾಗಿಸಲಿ ಎಂದು ಹಝ್ರತ್ ಸಾಹಿಬ್‌ರೇ ಅವರ ಆರ್ಥಿಕ ಮುಗ್ಗಟ್ಟನ್ನು ಅರಿತು ಆ ಹಣವನ್ನು ಇಟ್ಟಿದ್ದರು ಎಂಬುದು ತಿಳಿಯಿತು. ಆಗ ಅವರ ಊಟ–ತಿಂಡಿಯ ಅಗತ್ಯಗಳು ಹಝ್ರತ್ ಸಾಹಿಬ್‌ರ ವಿಶಾಲವಾದ ಅಡುಗೆಮನೆಯಿಂದಲೇ ಪೂರೈಸಲ್ಪಡುತ್ತಿದ್ದ ಕಾರಣ, ಅವರು ಆ ಹಣವನ್ನು ಆಭರಣ ಮಾಡಿಸಲು ಬಳಸಿದರು.

(ಸೀರತ್ ಹಝ್ರತ್ ಮಸೀಹ್ ಮೌಊದ್(ಅ), ಹಝ್ರತ್ ಶೇಖ್ ಯಾಖೂಬ್ ಅಲೀ ಸಾಹಿಬ್ ಇರ್ಫಾನಿ, ಭಾಗ–2, ಪುಟ–294–295)

ಹಝ್ರತ್ ಶೇಖ್ ಯಾಕೂಬ್ ಅಲಿ ಸಾಹಿಬ್(ರ) ಹೇಳುತ್ತಾರೆ: ಬೇಡುವವರನ್ನು ಎಂದಿಗೂ ನಿರಾಕರಿಸದಿರುವುದು ಅವರ ಅಭ್ಯಾಸವಾಗಿದ್ದಂತೆಯೇ, ಕೆಲವು ಜನರ ಅಗತ್ಯಗಳನ್ನು ಅರಿತು ಅವರು ಕೇಳುವ ಮೊದಲೇ ಅವರಿಗೆ ಸಹಾಯ ಮಾಡುವುದು ಕೂಡ ಅವರ ವಾಡಿಕೆಯಾಗಿತ್ತು. 28 ಅಕ್ಟೋಬರ್ 1904ರ ಘಟನೆಯೊಂದನ್ನು ವಿವರಿಸುತ್ತಾರೆ. ಮುಂಜಾನೆಯ ನಮಾಝಿಗಿಂತ ಮೊದಲು ಹಝ್ರತ್ ಮಸೀಹ್ ಮೌಊದ್(ಅ) ಒಬ್ಬ ನಿಷ್ಠಾವಂತ ವಲಸಿಗನಿಗೆ ಹೀಗೆ ಹೇಳಿ ಎಂಟು ಅಥವಾ ಹತ್ತು ನೂರು ರೂಪಾಯಿಗಳನ್ನು ನೀಡಿದರು: 'ಚಳಿಗಾಲ ಆಗಿರುವುದರಿಂದ ನಿಮಗೆ ಬಟ್ಟೆಗಳ ಅಗತ್ಯವಿರಬಹುದು.' ಆ ವಲಸಿಗನ ಕಡೆಯಿಂದ ಯಾವುದೇ ಬೇಡಿಕೆಯಿರಲಿಲ್ಲ. ಹಝ್ರತ್ ಸಾಹಿಬ್‌ರೇ ಆತನ ಅಗತ್ಯವನ್ನು ಅರಿತು ಈ ಹಣವನ್ನು ನೀಡಿದ್ದರು ಮತ್ತು ಇದು ಕೇವಲ ಒಂದೇ ಘಟನೆಯಲ್ಲ, ಹೀಗೆ ಹಲವು ಬಾರಿ ನಡೆಯುತ್ತಿತ್ತು. ಅವರು ಅತ್ಯಂತ ರಹಸ್ಯವಾಗಿ ಅಗತ್ಯವುಳ್ಳವರಿಗೆ ಸಹಾಯ ಮಾಡುತ್ತಿದ್ದರು ಮತ್ತು ಅದರಲ್ಲಿ ಮಿತ್ರ–ಶತ್ರು, ಹಿಂದೂ–ಮುಸ್ಲಿಂ ಎಂಬ ಯಾವುದೇ ಭೇದಭಾವವಿರಲಿಲ್ಲ. (ಸೀರತ್ ಹಝ್ರತ್ ಮಸೀಹ್ ಮೌಊದ್(ಅ), ಹಝ್ರತ್ ಶೇಖ್ ಯಾಖೂಬ್ ಅಲೀ ಸಾಹಿಬ್ ಇರ್ಫಾನಿ, ಭಾಗ–2, ಪುಟ–288–289)

ಹಝ್ರತ್ ಶೇಖ್ ಯಾಕೂಬ್ ಅಲಿ ಸಾಹಿಬ್(ರ) ಬರೆಯುತ್ತಾರೆ:

ಹಝ್ರತ್ ಮಸೀಹ್ ಮೌಊದ್(ಅ)ರ ಅಭ್ಯಾಸವೇನೆಂದರೆ, ಕೆಲವೊಮ್ಮೆ ಅವರು ಇತರರ ಅಗತ್ಯವನ್ನು ಅರಿತುಕೊಂಡು, ಅವರು ಕೇಳುವ ಅಥವಾ ವ್ಯಕ್ತಪಡಿಸುವವರೆಗೆ ಕಾಯದೆ ತಾವಾಗಿಯೇ ಸಹಾಯ ಮಾಡುತ್ತಿದ್ದರು. ಈ ಬಗ್ಗೆ ಕಾಶ್ಮೀರ ರಾಜ್ಯದ ನಿವೃತ್ತ ಇನ್ಸ್‌ಪೆಕ್ಟರ್ ಸನ್ಮಾನ್ಯ ಶೇಖ್ ಫತಹ್ ಮುಹಮ್ಮದ್ ಸಾಹಿಬ್ ಹಝ್ರತ್ ಮಸೀಹ್ ಮೌಊದ್(ಅ)ರ ಸನ್ನಿಧಿಗೆ ಬಹುಕಾಲದಿಂದ ಬರುತ್ತಿದ್ದವರು. ಅವರು ವಿವರಿಸುತ್ತಾರೆ: 'ನಾನು ಹಝ್ರತ್ ಸಾಹಿಬ್‌ರ ಸನ್ನಿಧಿಯಲ್ಲಿ ಹಾಜರಾಗುವಾಗಲೆಲ್ಲ ಅವರು ಯಾವಾಗಲೂ ನನ್ನ ಪ್ರಯಾಣದ ವೆಚ್ಚವನ್ನು ಪಾವತಿಸಲು ಸಿದ್ಧರಿರುತ್ತಿದ್ದರು. ನನಗೆ ಅದರ ಅಗತ್ಯವಿಲ್ಲದಿದ್ದ ಕಾರಣ ನಾನು ಎಂದಿಗೂ ಪಡೆಯಲಿಲ್ಲ. ಆದರೆ ಹಝ್ರತ್ ಸಾಹಿಬ್‌ರ ದಾನಶೀಲತೆಯ ಗುಣವು ಎಷ್ಟೊಂದು ಭವ್ಯವಾಗಿತ್ತೆಂದರೆ, ಅವರು ಕೇಳದೆಯೇ ಯಾವಾಗಲೂ ನೀಡುತ್ತಿದ್ದರು ಮತ್ತು ಇದು ನನ್ನೊಡನೆ ಮಾತ್ರ ಆಗಿರಲಿಲ್ಲ, ಹೆಚ್ಚಿನವರಿಗೂ ನೀಡುತ್ತಲೇ ಇರುತ್ತಿದ್ದರು. ಸಿರಿಯಾ ಮತ್ತು ಅರೇಬಿಯಾದಿಂದ ಕೆಲವು ಜನರು ಬರುತ್ತಿದ್ದರು. ಅವರು ಬಹಳ ದೂರದಿಂದ ಬಂದಿರುತ್ತಿದ್ದ ಕಾರಣದಿಂದ ಕೆಲವೊಮ್ಮೆ ಹುಝೂರ್ ಅವರಿಗೆ ಪ್ರಯಾಣದ ಖರ್ಚಿಗಾಗಿ ದೊಡ್ಡ ಮೊತ್ತವನ್ನೇ ನೀಡುತ್ತಿದ್ದರು.' (ಸೀರತ್ ಹಝ್ರತ್ ಮಸೀಹ್ ಮೌಊದ್(ಅ), ಹಝ್ರತ್ ಶೇಖ್ ಯಾಖೂಬ್ ಅಲೀ ಸಾಹಿಬ್ ಇರ್ಫಾನಿ, ಭಾಗ-2, ಪುಟ-309)

ಅದೇ ರೀತಿ ಶೇಖ್ ಯಾಕೂಬ್ ಅಲಿ ಸಾಹಿಬ್(ರ) ಬರೆಯುತ್ತಾರೆ: 'ಸಾಮಾನ್ಯವಾಗಿ ನೇರವಾಗಿ ಕೇಳದೆ ಚೀಟಿಯನ್ನು ಬರೆದು ಕೊಡುವ ಅನೇಕ ಯಾಚಕರೂ ಬರುತ್ತಿದ್ದರು. ಆತ ಕೇಳಿದ್ದಾನೆಂದು ಯಾರಿಗೂ ತಿಳಿದಿರುತ್ತಿರಲಿಲ್ಲ. ಆದರೆ ಹಝ್ರತ್ ಸಾಹಿಬ್ ಒಳಗಿನಿಂದ ಆ ಯಾಚಕನಿಗಾಗಿ ಏನಾದರೂ ಕಳುಹಿಸುವಾಗ ತಿಳಿದುಬರುತ್ತಿತ್ತು ಅಥವಾ ಕೆಲವೊಮ್ಮೆ ಒಳಗೆ ಹೋಗುವಾಗ, 'ನೀವು ಕುಳಿತುಕೊಳ್ಳಿ, ನಾನು ಬರುತ್ತೇನೆ' ಎಂದು ಹೇಳಿ ಹೋಗುತ್ತಿದ್ದರು. ಹಝ್ರತ್ ಸಾಹಿಬ್ ಬರುತ್ತಾರೆ ಎಂದು ಕೆಲವು ಜನರು ಅಲ್ಲಿಯೇ ಕಾಯುತ್ತಿದ್ದರು, ಆಗ ಅವರು ಆ ಯಾಚಕನಿಗೆ ಬೇಕಾದ ವಸ್ತು, ನಗದು ಅಥವಾ ಬಟ್ಟೆಯನ್ನು ತೆಗೆದುಕೊಂಡು ಬರುವಾಗ ಗೊತ್ತಾಗುತ್ತಿತ್ತು.' (ಸೀರತ್ ಹಝ್ರತ್ ಮಸೀಹ್ ಮೌಊದ್(ಅ), ಹಝ್ರತ್ ಶೇಖ್ ಯಾಖೂಬ್ ಅಲೀ ಸಾಹಿಬ್ ಇರ್ಫಾನಿ, ಭಾಗ-2, ಪುಟ-294)

ಹಝ್ರತ್ ಮುನ್ಷಿ ಝಫರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಕಪೂರ್‌ಥಲಾದ ನಿವಾಸಿಯಾಗಿದ್ದ ಮಿಯಾನ್‌ಜೀ ನಿಝಾಮುದ್ದೀನ್ ಅಹ್ಮದಿ ಸಾಹಿಬ್ ಅತ್ಯಂತ ಬಡವರಾಗಿದ್ದರು. ಅವರು ಕಾಲ್ನಡಿಗೆಯಲ್ಲಿಯೇ ಖಾದಿಯಾನಿಗೆ ಬಂದು ಎರಡು ಆಣೆಗಳನ್ನು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಕಾಣಿಕೆಯಾಗಿ ನೀಡಿದರು. ಅವರು ಜಝಾಕಮುಲ್ಲಾಹ್ ಎಂದು ಹೇಳಿ ಆ ಎರಡು ಆಣೆಗಳನ್ನು ಪಡೆದುಕೊಂಡರು. ಕೆಲವು ದಿನಗಳ ನಂತರ ನಿಝಾಮುದ್ದೀನ್ ಸಾಹಿಬ್ ಹಿಂದಿರುಗಲು ಹೊರಟಾಗ ಹಝ್ರತ್ ಮಸೀಹ್ ಮೌಊದ್(ಅ) ಅವರೊಡನೆ, 'ಸ್ವಲ್ಪ ಇರಿ' ಎಂದರು. ಅವರು ಒಳಗಿನಿಂದ ಏಳು-ಎಂಟು ರೂಪಾಯಿಗಳನ್ನು ತಂದು ಮಿಯಾನ್ ಜೀ ನಿಝಾಮುದ್ದೀನ್‌ರಿಗೆ ನೀಡಿದರು. (ಅಸ್‌ಹಾಬೆ ಅಹ್ಮದ್, ಸಂಪುಟ-4, ಪುಟ-215)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಮುನ್ಷಿ ಝಫರ್ ಅಹ್ಮದ್ ಸಾಹಿಬ್ ಕಪೂರ್‌ಥಲವಿ(ರ) ಪತ್ರದ ಮೂಲಕ ನನಗೆ ವಿವರಿಸಿದರು. ಮುನ್ಷಿ ಅಲಿ ಗೌಹರ್ ಸಾಹಿಬ್ ಕಪೂರ್‌ಥಲಾದ ಅಂಚೆ ಕಚೇರಿಯಲ್ಲಿ ಉದ್ಯೋಗಿಯಾಗಿದ್ದರು. ಅವರಿಗೆ ಎರಡೂವರೆ ರೂಪಾಯಿ ಪಿಂಚಣಿ ಸಿಗುತ್ತಿತ್ತು. ನಿವೃತ್ತಿಯಾದ ನಂತರ ಅವರ ಜೀವನ ಬಹಳ ಕಷ್ಟಕರವಾಗಿತ್ತು. ಅವರು ಜಲಂಧರ್‌ನಲ್ಲಿರುವ ತಮ್ಮ ಮನೆಗೆ ಮರಳಿದರು. ಅವರು ನನಗೆ ಪತ್ರ ಬರೆದು, 'ನೀನು ಖಾದಿಯಾನಿಗೆ ಹೋಗುವಾಗ ನನ್ನನ್ನೂ ಕರೆದುಕೊಂಡು ಹೋಗು' ಎಂದಿದ್ದರು. ಅವರು ಬಹಳ ನಿಷ್ಠಾವಂತ ಅಹ್ಮದಿಯಾಗಿದ್ದರು. ಹಾಗಾಗಿ ನಾನು ಖಾದಿಯಾನಿಗೆ ಹೋಗುವಾಗ ಅವರನ್ನು ಕರೆದುಕೊಂಡು ಹೋಗಲು ಜಲಂಧರ್‌ಗೆ ಹೋದೆ. ಅವರು ಅತ್ಯಂತ ವಿನಯಶೀಲ ಮತ್ತು ಅತಿಥಿ ಸತ್ಕಾರ ಪ್ರಿಯರಾಗಿದ್ದರು. ನನಗಾಗಿ ಅತ್ಯುತ್ತಮ ಊಟ ಮಾಡಿಸಿದ್ದರು ಮತ್ತು ಅವರು ತಮ್ಮ ಮನೆಯ ಪಾತ್ರೆಯೊಂದನ್ನು ಮಾರಿ ಆ ಔತಣದ ವ್ಯವಸ್ಥೆ ಮಾಡಿದ್ದರು ಎಂಬುದು ನನಗೆ ನಂತರ ತಿಳಿಯಿತು. ಹಝ್ರತ್ ಮಸೀಹ್ ಮೌಊದ್(ಅ)ರಿಂದ ತರಬೇತಿ ಪಡೆದ ಸಹಾಬಿಯರ ಸ್ಥಿತಿಯೂ ಇದಾಗಿತ್ತು. ಹಾಗಾಗಿ, ನಾನೇ ಮುನ್ಷಿ ಅಲಿ ಗೌಹರ್ ಸಾಹಿಬ್‌ರ ಟಿಕೆಟ್ ಖರೀದಿಸಿದೆ. ಅವರು ತಮ್ಮ ಪ್ರಯಾಣದ ಹಣ ನೀಡಲು ಒತ್ತಾಯಿಸತೊಡಗಿದರು. ನಾನು, 'ಇದನ್ನು ನೀವು ಹಝ್ರತ್ ಸಾಹಿಬ್‌ರಿಗೆ ಕಾಣಿಕೆಯಾಗಿ ನೀಡಿರಿ' ಎಂದೆ. ನನಗೆ ಅವರ ಆರ್ಥಿಕ ಸ್ಥಿತಿಯ ಅರಿವಿತ್ತು. ನಾನು ನನ್ನ ಬಳಿಯಿದ್ದ ಹಣದಿಂದಲೇ ಟಿಕೆಟ್ ಖರೀದಿಸಿದೆ. ಅವರು ಬಹಳ ಒತ್ತಾಯಿಸಿದಾಗ, 'ಸರಿ, ಈ ಹಣವನ್ನು ನೀವು ಹಝ್ರತ್ ಮಸೀಹ್ ಮೌಊದ್(ಅ)ರ ಸನ್ನಿಧಿಯಲ್ಲಿ ಕಾಣಿಕೆಯಾಗಿ ನೀಡಿರಿ' ಎಂದು ಹೇಳಿದೆ. ಅದರಂತೆ ಅವರು ಎರಡು ರೂಪಾಯಿಗಳನ್ನು ಹಝ್ರತ್ ಸಾಹಿಬ್‌ರಿಗೆ ಕಾಣಿಕೆಯಾಗಿ ನೀಡಿದರು. ಎಂಟು-ಹತ್ತು ದಿನಗಳ ನಂತರ ನಾವು ಮರಳಿ ಹೋಗಲು ಅನುಮತಿ ಕೇಳಿದಾಗ, ಹಝ್ರತ್ ಮಸೀಹ್ ಮೌಊದ್(ಅ) ಅನುಮತಿ ನೀಡಿದರು ಮತ್ತು ಮುನ್ಷಿ ಸಾಹಿಬ್‌ರೊಡನೆ, 'ನೀವು ಸ್ವಲ್ಪ ಇರಿ' ಎಂದರು. ನಂತರ ಅವರು ಹತ್ತು-ಹದಿನೈದು ರೂಪಾಯಿಗಳನ್ನು ತಂದು ಮುನ್ಷಿ ಸಾಹಿಬ್‌ಗೆ ನೀಡಿದರು. ಮುನ್ಷಿ ಸಾಹಿಬ್ ಅಳಲಾರಂಭಿಸಿದರು ಮತ್ತು ಹೀಗೆ ಹೇಳಿದರು: 'ಹುಝೂರ್, ನಾನು ನಿಮಗೆ ಸೇವೆ ಸಲ್ಲಿಸಬೇಕಾಗಿತ್ತು, ಆದರೆ ಈಗ ನಾನು ನಿಮ್ಮಿಂದ ಪಡೆಯುತ್ತಿದ್ದೇನಲ್ಲ'. ಆಗ ಹಝ್ರತ್ ಮಸೀಹ್ ಮೌಊದ್(ಅ) ನನ್ನೊಡನೆ ಹೀಗೆ ಹೇಳಿದರು: 'ಇವರು ನಿಮ್ಮ ಸ್ನೇಹಿತರು, ನೀವು ಇವರಿಗೆ ತಿಳಿಹೇಳಿರಿ'. 'ಹಝ್ರತ್ ಮಸೀಹ್ ಮೌಊದ್(ಅ) ನೀಡುವುದರಲ್ಲಿ ಅನುಗ್ರಹವಿದೆ, ನೀವು ಇದನ್ನು ತೆಗೆದುಕೊಳ್ಳಿ' ಎಂದು ನಾನು ತಿಳಿಹೇಳಿದ ನಂತರ ಅವರು ಅದನ್ನು ಪಡೆದುಕೊಂಡರು ಮತ್ತು ನಾವು ಮರಳಿ ಬಂದೆವು. ಮುನ್ಷಿ ಸಾಹಿಬ್‌ರ ಆರ್ಥಿಕ ಸ್ಥಿತಿಯ ಬಗ್ಗೆ ಹಝ್ರತ್ ಸಾಹಿಬ್‌ರಿಗೆ ಯಾವುದೇ ಮಾಹಿತಿಯಿರಲಿಲ್ಲ, ಆದರೂ ಅವರು ಸಹಾಯ ಮಾಡಿದ್ದರು. (ಸೀರತುಲ್ ಮಹದಿ, ಸಂಪುಟ-2, ಭಾಗ-4, ಪುಟ-96-97, ವರದಿ ಸಂಖ್ಯೆ-1123)

ಹಝ್ರತ್ ಮುನ್ಷಿ ಝಫರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಸೇವಕರಿಗೆ ಸಾಂತ್ವನ ಹೇಳುವುದರ ಬಗ್ಗೆ ಬಹಳ ಕಾಳಜಿ ವಹಿಸುತ್ತಿದ್ದರು ಮತ್ತು ಅದಕ್ಕಾಗಿ ಅವರು ಸ್ವತಃ ಎಲ್ಲ ರೀತಿಯ ತ್ಯಾಗ ಮತ್ತು ಬಲಿದಾನವನ್ನು ಪ್ರಾಯೋಗಿಕವಾಗಿ ತೋರ್ಪಡಿಸುತ್ತಿದ್ದರು. ಒಮ್ಮೆ ಈದ್ ದಿನವಾಗಿತ್ತು. ಅವರು ಹೇಳುತ್ತಾರೆ: ತಲೆಗೆ ಕಟ್ಟಿಕೊಳ್ಳುವ ನನ್ನ ರುಮಾಲು ಸ್ವಚ್ಛವಾಗಿರಲಿಲ್ಲ. ಏಕೆಂದರೆ, ನಾವು ಇಲ್ಲಿಗೆ ಬರುವಾಗಲೆಲ್ಲ ಒಂದೆರಡು ದಿನಗಳ ಬಿಡುವು ಮಾಡಿಕೊಂಡು ಬರುತ್ತಿದ್ದೆವು, ಆದರೆ ಇಲ್ಲಿಗೆ ಖಾದಿಯಾನಿಗೆ ಬಂದಾಗ, 'ಇಲ್ಲಿಯೇ ಕೆಲವು ದಿನಗಳ ಕಾಲ ಇರಿ' ಎಂದು ಹಝ್ರತ್ ಮಸೀಹ್ ಮೌಊದ್(ಅ) ಆದೇಶಿಸುತ್ತಿದ್ದರು. ಆಗ ನಾವು ಕೆಲಸಕ್ಕೆ ಮರಳುವ ಯೋಚನೆಯನ್ನು ಕೈಬಿಟ್ಟು ಅಲ್ಲೇ ಉಳಿಯುತ್ತಿದ್ದೆವು. ಹಾಗೆ ಉಳಿದಿದ್ದಾಗ ಒಮ್ಮೆ ಈದ್ ದಿನ ಬಂತು. ನಾನು ಕೇವಲ ಒಂದೇ ರುಮಾಲನ್ನು ತಂದಿದ್ದೆ. ಅದು ಕೊಳೆಯಾಗಿತ್ತು. ಮಾರುಕಟ್ಟೆಗೆ ಹೋಗಿ ಹೊಸದನ್ನು ಖರೀದಿಸಿ ತರಬೇಕು ಎಂದು ನಾನು ಯೋಚಿಸಿದೆ. ಅದರಂತೆ ನಾನು ಮಾರುಕಟ್ಟೆಯತ್ತ ಹೋಗುತ್ತಿದ್ದಾಗ ಅವರು ನನ್ನನ್ನು ನೋಡಿದರು ಮತ್ತು ಅವರ ದೃಷ್ಟಿ ದೈವದತ್ತ ದೃಷ್ಟಿಯಾಗಿತ್ತು. 'ಎಲ್ಲಿಗೆ ಹೋಗುತ್ತಿದ್ದೀರಿ?' ಎಂದು ಕೇಳಿದರು. 'ಈದ್ ದಿನವಾಗಿದೆ, ನನ್ನ ರುಮಾಲು ಕೊಳೆಯಾಗಿದೆ, ಮಾರುಕಟ್ಟೆಯಿಂದ ಖರೀದಿಸಲು ಹೋಗುತ್ತಿದ್ದೇನೆ' ಎಂದು ಹೇಳಿದೆ. ಆ ಕ್ಷಣವೇ ಅಲ್ಲಿಯೇ ನಿಂತುಕೊಂಡು ತಮ್ಮ ತಲೆಯ ಮೇಲಿದ್ದ ರುಮಾಲನ್ನು ತೆಗೆದು ನನಗೆ ನೀಡಿ, 'ಇದು ನಿಮಗೆ ಇಷ್ಟವಾದರೆ, ನೀವೇ ತೆಗೆದುಕೊಳ್ಳಿ. ನಾನು ಬೇರೊಂದನ್ನು ಕಟ್ಟಿಕೊಳ್ಳುತ್ತೇನೆ' ಎಂದರು. ಈ ಪ್ರೀತಿ ಮತ್ತು ಕರುಣೆಯು ನನ್ನ ಮೇಲೆ ಬೀರಿದ ಪ್ರಭಾವವನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ. ನಾನು ಅತ್ಯಂತ ಗೌರವದಿಂದ ಆ ರುಮಾಲನ್ನು ಪಡೆದುಕೊಂಡೆ ಮತ್ತು ಅವರು ಸಹಜವಾಗಿಯೇ ಮನೆಗೆ ಹಿಂದಿರುಗಿ, ನಂತರ ಬೇರೊಂದು ರುಮಾಲನ್ನು ಕಟ್ಟಿಕೊಂಡು ಬಂದರು. (ಅಸ್‌ಹಾಬೆ ಅಹ್ಮದ್, ಸಂಪುಟ-4, ಪುಟ-225-226)

ಹಝ್ರತ್ ಮಿಯಾನ್ ಖೈರುದ್ದೀನ್ ಸಾಹಿಬ್(ರ) ವಿವರಿಸುತ್ತಾರೆ: ಪ್ರವಾದಿತ್ವದ ವಾದಕ್ಕೂ ಮುನ್ನ ನಡೆದ ಘಟನೆಯಿದು. ಹಝ್ರತ್ ಮಸೀಹ್ ಮೌಊದ್(ಅ)ರ ಅಣ್ಣನ ಮದುವೆಯ ಸಮಯದಲ್ಲಿ ಅವರು ಕೆಲವು ಮೇಕೆಗಳನ್ನು ತರಿಸಿದ್ದರು. ನಂಗಲ್ ಬಾಗ್ಬಾನಾದ ಒಬ್ಬ ವ್ಯಕ್ತಿ ಅವುಗಳನ್ನು ಮೇಯಿಸುತ್ತಿದ್ದನು. ಒಂದು ದಿನ ಹಝ್ರತ್ ಮಸೀಹ್ ಮೌಊದ್(ಅ) ವಾಯುವಿಹಾರಕ್ಕೆ ಹೋಗುತ್ತಿದ್ದಾಗ, ದಾರಿಯಲ್ಲಿ ಆ ವ್ಯಕ್ತಿ ಮೇಕೆ ಮೇಯಿಸುತ್ತಿದ್ದನು. ಅವನೊಂದಿಗೆ ಅವನ ಮಗನೂ ಇದ್ದನು, ಮತ್ತು ಆ ಮಗ ಬರಿಗಾಲಿನಲ್ಲಿದ್ದನು. ಹಝ್ರತ್ ಮಸೀಹ್ ಮೌಊದ್(ಅ) ಅವನತ್ತ ನೋಡಿ, 'ಸೋದರ, ನೀನು ಬರಿಗಾಲಿನಲ್ಲಿ ತಿರುಗುತ್ತಿದ್ದೀಯಾ, ನಿನಗೆ ಮುಳ್ಳು ಚುಚ್ಚುವುದಿಲ್ಲವೇ?' ಎಂದು ಕೇಳಿದರು. ಅವನು ಹೇಳಿದನು: 'ಹುಝೂರ್, ನನ್ನ ಬಳಿ ಚಪ್ಪಲಿಯಿಲ್ಲ, ನನ್ನ ತಂದೆ ಬಡವನಾಗಿದ್ದು, ಖರೀದಿಸಲು ಸಾಧ್ಯವಿಲ್ಲ'. ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಕಾಲಿನಿಂದ ಒಂದು ಚಪ್ಪಲಿಯನ್ನು ತೆಗೆದು, 'ಇದನ್ನು ಧರಿಸಿ ನೋಡು, ಸರಿಯಾಗುತ್ತದೆಯೇ?' ಎಂದರು. ಅವನು, 'ನಾನು ನಿಮ್ಮ ಚಪ್ಪಲಿಯನ್ನು ಹೇಗೆ ಧರಿಸಲಿ?' ಎಂದು ನಿರಾಕರಿಸಿದನು. 'ಇಲ್ಲ, ನೀನು ಧರಿಸಲೇಬೇಕು' ಎಂದು ಹಝ್ರತ್ ಮಸೀಹ್ ಮೌಊದ್(ಅ) ಬಲವಂತ ಮಾಡಿದರು. ಅವನು ಒಂದು ಚಪ್ಪಲಿಯನ್ನು ಧರಿಸಿದಾಗ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: 'ಇದು ನಿನಗೆ ಸರಿಯಾಗಿದೆ'. ನಂತರ ಇನ್ನೊಂದು ಚಪ್ಪಲಿಯನ್ನೂ ತೆಗೆದು, 'ಇದನ್ನೂ ಧರಿಸು' ಎಂದರು. ಅವನು ಅದನ್ನೂ ಧರಿಸಿದನು, ಇದನ್ನು ಕಂಡು ಹಝ್ರತ್ ಮಸೀಹ್ ಮೌಊದ್(ಅ) ಬಹಳ ಸಂತೋಷಪಟ್ಟರು ಮತ್ತು ಹೀಗೆ ಹೇಳಿದರು: 'ಸರಿ, ಈಗ ಸರಿಯಾಗಿದೆ. ಇನ್ನು ಮುಂದೆ ನೀನು ಇದನ್ನೇ ಉಪಯೋಗಿಸು'. ಹೀಗೆ ಅವರು ಬರಿಗಾಲಿನಲ್ಲಿಯೇ ಮನೆಗೆ ಹಿಂತಿರುಗಿದರು. ಇದು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಇಪ್ಪತ್ತು ಅಥವಾ ಮೂವತ್ತು ವರ್ಷ ಪ್ರಾಯವಿದ್ದಾಗಿನ

ಘಟನೆಯಾಗಿದೆ. (ರಿವಾಯಾತ್ ಅಸ್‌ಹಾಬೆ ಅಹ್ಮದ್, ಸಂಪುಟ-5, ಪುಟ-380)

ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಔದಾರ್ಯವಂತ ನೇತಾರರಾದ ಹಝ್ರತ್ ಪೈಗಂಬರ್(ಸ‌ರ ಅನುಸರಣೆಯಲ್ಲಿ ಔದಾರ್ಯ ಮತ್ತು ದಾನಶೀಲತೆಯ ಸಾಕಾರ ರೂಪಿಯಾಗಿದ್ದರು. ಆದರೂ ಕೆಲವೊಮ್ಮೆ ಯಾವುದಾದರೂ ಯುಕ್ತಿ ಮತ್ತು ಒಳಿತಿನ ದೃಷ್ಟಿಯಿಂದ ಬೇಡುವವನಿಗೆ ನೀಡುವುದರಿಂದ ಹಿಂದೆ ಸರಿಯುತ್ತಿದ್ದರು ಎಂಬುದು ಕೂಡ ನಮಗೆ ಕಂಡುಬರುತ್ತದೆ. ಶೇಖ್ ಯಅ್‌ಖೂಬ್ ಅಲಿ ಸಾಹಿಬ್(ರ) ಬರೆಯುತ್ತಾರೆ: 1889ರಲ್ಲಿ, ಅಂದರೆ ಬೈಅತ್ ವರ್ಷದಲ್ಲಿ ಅವರು ಲುಧಿಯಾನಾದಲ್ಲಿದ್ದರು. ಒಮ್ಮೆ ಅವರ ಬಳಿ ಒಬ್ಬ ಯಾಚಕ ಬಂದು ಹೀಗೆ ಹೇಳಿದನು: 'ನನ್ನ ಸಂಬಂಧಿಕನೊಬ್ಬ ಮರಣಹೊಂದಿದ್ದಾನೆ. ಕಫನ್ ಮತ್ತು ಶವಸಂಸ್ಕಾರಕ್ಕಾಗಿ ನನ್ನ ಬಳಿ ಏನೂ ಇಲ್ಲ'. ಅವನು ಒಂದು ಬಟ್ಟಲಿನಲ್ಲಿ ಕೆಲವು ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಇಟ್ಟುಕೊಂಡಿದ್ದನು ಮತ್ತು, 'ನೋಡಿ, ಬೇಡಿ ಬೇಡಿ ಇಷ್ಟು ಹಣ ಸಂಗ್ರಹಿಸಿದ್ದೇನೆ, ಶವಸಂಸ್ಕಾರ ಮಾಡಲು ಇನ್ನೂ ಹಣದ ಅಗತ್ಯವಿದೆ' ಎಂದು ತೋರಿಸುತ್ತಿದ್ದನು. ಹಝ್ರತ್ ಮಸೀಹ್ ಮೌಊದ್(ಅ) ಅತ್ಯಂತ ನಿಷ್ಠಾವಂತ ಮತ್ತು ಅವರ ಮಾರ್ಗದಲ್ಲಿ ಪ್ರಾಣವನ್ನೇ ಮುಡಿಪಾಗಿಟ್ಟಿದ್ದ ಹಿರಿಯರಾದ ಸನ್ಮಾನ್ಯ ಖಾಝಿ ಖಾಜಾ ಅಲಿ ಸಾಹಿಬ್(ರ)ರೊಡನೆ ಹೀಗೆ ಹೇಳಿದರು: 'ಖಾಝಿ ಸಾಹಿಬ್, ಇವನ ಜೊತೆ ಹೋಗಿ ಕಫನಿನ ವ್ಯವಸ್ಥೆ ಮಾಡಿಕೊಡಿ. ಇವನಿಗೆ ಕಫನಿನ ವ್ಯವಸ್ಥೆ ಮಾಡಬೇಕಾಗಿದೆಯಲ್ಲ, ಕಫನಿನ ಏನೇನು ಅಗತ್ಯಗಳಿವೆಯೋ ಅದೆಲ್ಲವನ್ನೂ ಪೂರೈಸಿಕೊಡಿ'. ಹಝ್ರತ್ ಮಸೀಹ್ ಮೌಊದ್(ಅ)ರ ಅಭ್ಯಾಸ ಇದಾಗಿರಲಿಲ್ಲ. ಸಾಮಾನ್ಯವಾಗಿ ಯಾರಾದರೂ ಕೇಳಿದರೆ ಕೊಟ್ಟುಬಿಡುತ್ತಿದ್ದರು. ಆದರೆ ಇಲ್ಲಿ ನಾವು ಅವರ ಅಭ್ಯಾಸಕ್ಕೆ ವಿರುದ್ಧವಾದ ಹೊಸದೊಂದು ವಿಷಯವನ್ನು ನೋಡಿದೆವು. ಅವರು ಸಾಮಾನ್ಯವಾಗಿ ಸೂಕ್ತವೆನಿಸಿದ್ದನ್ನು ಕೊಟ್ಟುಬಿಡುತ್ತಿದ್ದರು. ಈ ಆದೇಶ ಕೇಳಿ ಸೇವಕರಿಗೂ ಆಶ್ಚರ್ಯವಾಯಿತು. ಖಾಝಿ ಸಾಹಿಬ್ ಕೂಡ, 'ಏನು ಕೊಡಬೇಕು? ಎಂದು ಕೇಳಲಿಲ್ಲ' ಬದಲಾಗಿ ಆತನ ಜೊತೆ ಹೊರಟು, 'ನಡೆ ಅಣ್ಣ, ನಾನು ಬಂದು ಎಲ್ಲ ವ್ಯವಸ್ಥೆಯನ್ನೂ ಮಾಡುತ್ತೇನೆ' ಎಂದರು. ಆ ಯಾಚಕ ಖಾಝಿ ಸಾಹಿಬ್‌ರನ್ನು ಕರೆದುಕೊಂಡು ಹೋದನು. ಸ್ವಲ್ಪ ಸಮಯದ ನಂತರ ಖಾಝಿ ಸಾಹಿಬ್ ನಗುತ್ತಾ ಮರಳಿ ಬಂದು ಹೀಗೆ ಹೇಳಿದರು: 'ಹಝ್ರತ್, ಅವನು ದೊಡ್ಡ ಮೋಸಗಾರನಾಗಿದ್ದ. ದಾರಿಯಲ್ಲಿ ಹೋಗುವಾಗ ಆತ, ದೇವನ ಹೆಸರಲ್ಲಿ, ನೀವು ಬರಬೇಡಿ, ಏನು ಕೊಡಬೇಕೋ ಅದನ್ನು ಕೊಟ್ಟುಬಿಡಿ ಎಂದು ಬೇಡಿಕೊಳ್ಳಲು ಮತ್ತು ಹೊಗಳಲು ಪ್ರಾರಂಭಿಸಿದನು. ನಾನು, ನಾನೇ ಹೋಗಿ ನೋಡುವಂತೆ ನನಗೆ ಆದೇಶಿಸಲಾಗಿದೆ, ನಿನ್ನ ಬಳಿ ಇರುವ ಹಣವನ್ನು ನನಗೆ ಕೊಡು, ಎಷ್ಟು ಖರ್ಚಾಗುತ್ತದೋ ಅದೆಲ್ಲವನ್ನೂ ನಾನೇ ಭರಿಸುತ್ತೇನೆ ಎಂದು ಹೇಳಿದೆ. ಕೊನೆಗೆ ನಾನು ಹಿಂದೇಟು ಹಾಕುವುದಿಲ್ಲ ಎಂಬುದನ್ನು ಅರಿತ ಆತ, ಕೈ ಮುಗಿದು ನಾಚಿಕೆಯಿಂದ, ಯಾರೂ ಮೃತಪಟ್ಟಿಲ್ಲ, ಶವಸಂಸ್ಕಾರದ ಅಗತ್ಯವೂ ಇಲ್ಲ, ಇದು ನನ್ನ ವೃತ್ತಿಯಾಗಿದೆ. ಈಗ ನನ್ನ ಗುಟ್ಟನ್ನು ರಟ್ಟು ಮಾಡಬೇಡಿ. ನೀವು ಮರಳಿ ಹೋಗಿ ನನ್ನನ್ನು ಬಿಟ್ಟುಬಿಡಿ. ಇನ್ನು ಮುಂದೆ ನಾನು ಈ ಕೆಲಸ ಮಾಡುವುದಿಲ್ಲ ಎಂದು ಹೇಳಿದನು' ಕೆಲವು ಯಾಚಕರ ಸ್ಥಿತಿ ಹೀಗೂ ಇರುತ್ತಿತ್ತು. ಖಾಝಿ ಸಾಹಿಬ್ ಈ ಘಟನೆಯನ್ನು ವಿವರಿಸಿದಾಗ ಸಹಜವಾಗಿಯೇ ಎಲ್ಲರಿಗೂ ನಗು ಬಂತು. ಆದರೆ ಅವರ ವಿಶ್ವಾಸಪೂರ್ಣ ದೃಷ್ಟಿ ಮತ್ತು ನೈತಿಕತೆಯ ಎಂತಹ ವಿಚಿತ್ರ ಪ್ರಭಾವವೆಂದರೆ, ಅವರು ಸದ್ಭಾವನೆಯಿಂದ ಆತನನ್ನು ನಿರಾಕರಿಸಲೂ ಇಲ್ಲ, ಆದರೆ ಆತನ ತಪ್ಪು ತಿದ್ದಿಕೊಳ್ಳುವಂತಹ ಮಾರ್ಗವೊಂದನ್ನು ಅನುಸರಿಸಿದರು ಮತ್ತು ಅನಗತ್ಯವಾಗಿ ಹಣ ವ್ಯರ್ಥವಾಗುವ ಪರಿಸ್ಥಿತಿಯೂ ಬರಲಿಲ್ಲ.
(ಸೀರತ್ ಹಝ್ರತ್ ಮಸೀಹ್ ಮೌಊದ್(ಅ), ಹಝ್ರತ್ ಶೇಖ್ ಯಾಖೂಬ್ ಅಲೀ ಸಾಹಿಬ್ ಇರ್ಫಾನಿ, ಭಾಗ-2, ಪುಟ-287-288)

ಈ ಘಟನೆ ಅಥವಾ ಇದೇ ರೀತಿಯ ಮತ್ತೊಂದು ಘಟನೆಯನ್ನು ಸ್ವತಃ ಹಝ್ರತ್ ಮಸೀಹ್ ಮೌಊದ್(ಅ) ವಿವರಿಸಿದ್ದಾರೆ. ಅವರು ಹೇಳುತ್ತಾರೆ: 'ಲುಧಿಯಾನಾದಲ್ಲಿ ಒಬ್ಬ ಯಾಚಕ ನನ್ನ ಬಳಿ ಬಂದು, ಒಬ್ಬ ವ್ಯಕ್ತಿ ಮರಣಹೊಂದಿದ್ದಾನೆ, ಅವನ ಕಫನ್‌ಗಾಗಿ ಸಾಮಗ್ರಿಗಳನ್ನು ಹೊಂದಿಸುತ್ತಿದ್ದೇನೆ. ಇನ್ನು ಕೇವಲ ನಾಲ್ಕು ಆಣೆಗಳು ಮಾತ್ರ ಬೇಕಾಗಿದೆ' ಎಂದು ಹೇಳಿದನು. ಅಲ್ಲಿದ್ದ ವ್ಯಕ್ತಿಯೊಬ್ಬ, 'ಮೊದಲು ಶವ ಎಲ್ಲಿದೆ ಎಂಬುದನ್ನು ನೋಡಬೇಕು, ನಂತರ ಪೂರ್ಣ ಸಹಾಯ ಮಾಡಬೇಕು' ಎಂದನು. ಅದರಂತೆ ಆ ವ್ಯಕ್ತಿ ಜೊತೆ ಹೋದಾಗ, ಸ್ವಲ್ಪ ದೂರ ಹೋದ ನಂತರ ಆ ಯಾಚಕ ಓಡಿಹೋದನು. ಏಕೆಂದರೆ ಅವನು ಹೇಳಿದ್ದೆಲ್ಲವೂ ಸುಳ್ಳು ಕಥೆಯಾಗಿತ್ತು.
(ಮಲ್‌ಫೂಝಾತ್, ಸಂಪುಟ-8, ಪುಟ-15, 2022)

ಅದೇ ರೀತಿ ಒಮ್ಮೆ ಎಲ್ಲಿಂದಲೋ ಒಂದು ಪತ್ರ ಬಂತು: 'ನಾವು ಒಂದು ಮಸೀದಿಯನ್ನು ಕಟ್ಟಲು ಬಯಸುತ್ತೇವೆ, ಪವಿತ್ರ ಕಾಣಿಕೆಯಾಗಿ ನೀವೂ ಸ್ವಲ್ಪ ದೇಣಿಗೆ ನೀಡಬೇಕು.' ಆಗ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: 'ನಾವು ಕೊಡಬಹುದು, ಮತ್ತು ಇದೇನು ದೊಡ್ಡ ವಿಷಯವಲ್ಲ. ಆದರೆ ಸ್ವತಃ ನಮ್ಮಲ್ಲೇ ಖರ್ಚು ಮಾಡಬೇಕಾದ ಅನೇಕ ದೊಡ್ಡ, ಪ್ರಮುಖ ಮತ್ತು ಅತ್ಯಗತ್ಯ ಕಾರ್ಯಗಳಿರುವಾಗ, ಅವುಗಳ ಮುಂದೆ ಇಂತಹ ಖರ್ಚುಗಳಲ್ಲಿ ಪಾಲ್ಗೊಳ್ಳುವುದು ದುಂದುವೆಚ್ಚವೆನಿಸುತ್ತದೆ. ಹೀಗಿರುವಾಗ ನಾವು ಹೇಗೆ ಪಾಲ್ಗೊಳ್ಳಲು ಸಾಧ್ಯ? ಇಲ್ಲಿ ಅಲ್ಲಾಹನು ಕಟ್ಟುತ್ತಿರುವ ಮಸೀದಿಯೇ ಮಸ್ಜಿದ್ ಅಖ್ಸಾ ಆಗಿದೆ ಮತ್ತು ಅದೇ ಎಲ್ಲಕ್ಕಿಂತಲೂ ಪ್ರಮುಖವಾಗಿದೆ. ಈಗ ಜನರು ಇದಕ್ಕಾಗಿ ಹಣ ಕಳುಹಿಸಿ ಪುಣ್ಯ ಗಳಿಸಿಕೊಳ್ಳಬೇಕು. ನಮ್ಮ ಮಾತನ್ನು ಕೇಳುವವನೇ ನಮ್ಮ ಸ್ನೇಹಿತನಾಗಿದ್ದಾನೆ ಹೊರತು, ತನ್ನ ಮಾತನ್ನೇ ಮುಂದಿಡುವವನಲ್ಲ'.

ನಂತರ ಅವರು ಹಝ್ರತ್ ಇಮಾಮ್ ಅಬೂ ಹನೀಫಾ(ರ)ರ ಉದಾಹರಣೆ ನೀಡಿದರು. ಹಝ್ರತ್ ಇಮಾಮ್ ಅಬೂ ಹನೀಫಾರ ಬಳಿ ಒಬ್ಬ ವ್ಯಕ್ತಿ ಬಂದು, 'ನಾವು ಒಂದು ಮಸೀದಿ ಕಟ್ಟುತ್ತಿದ್ದೇವೆ, ನೀವೂ ಸ್ವಲ್ಪ ದೇಣಿಗೆ ನೀಡಿ' ಎಂದನು. ಅವರು ಸದ್ಯಕ್ಕೆ ನಾನು ಇದರಲ್ಲಿ ಏನನ್ನೂ ಕೊಡಲಾರೆ ಎಂದು ನಿರಾಕರಿಸಿದರು. ಅವರು ಮನಸ್ಸು ಮಾಡಿದ್ದರೆ ಬಹಳಷ್ಟು ಕೊಡಬಹುದಿತ್ತು. ಆ ವ್ಯಕ್ತಿ, 'ನಾವು ನಿಮ್ಮಿಂದ ಬಹಳಷ್ಟು ಕೇಳುತ್ತಿಲ್ಲ, ಕೇವಲ ಪವಿತ್ರ ಕಾಣಿಕೆಯಾಗಿ ಸ್ವಲ್ಪ ಕೊಡಿ' ಎಂದನು. ಕೊನೆಗೆ ಅವರು ಸುಮಾರು ಎರಡು ಆಣೆಯ ಬೆಲೆಯ ಸಣ್ಣ ನಾಣ್ಯವೊಂದನ್ನು ನೀಡಿದರು. ಸಂಜೆ ಆ ವ್ಯಕ್ತಿ ಆ ಎರಡು ಆಣೆಯನ್ನು ಹಿಂತಿರುಗಿ ತಂದು, 'ಹುಝೂರ್, ಇದು ನಕಲಿ ನಾಣ್ಯವಾಗಿದೆ' ಎಂದನು. ಆಗ ಇಮಾಮ್ ಅಬೂ ಹನೀಫಾರಿಗೆ ಬಹಳ ಸಂತೋಷವಾಯಿತು ಮತ್ತು 'ಒಳ್ಳೆಯದಾಯಿತು. ವಾಸ್ತವದಲ್ಲಿ, ನೀವು ಮಸೀದಿ ಕಟ್ಟುತ್ತಿರುವ ರೀತಿಯನ್ನು ನೋಡಿ, ನಿಮಗೆ ಏನಾದರೂ ಕೊಡಲು ನನ್ನ ಮನಸ್ಸು ಒಪ್ಪುತ್ತಿರಲಿಲ್ಲ. ಮಸೀದಿಗಳು ಬಹಳಷ್ಟಿವೆ, ಮತ್ತು ನನಗೆ ಇದು ದುಂದುವೆಚ್ಚವೆನಿಸುತ್ತದೆ. (ಮಲ್‌ಫೂಝಾತ್, ಸಂಪುಟ-2, ಪುಟ-170-171, 2022)

ನೀವು ನಮಾಝ್ ನಿರ್ವಹಿಸುವುದಿಲ್ಲ, ಬದಲಾಗಿ ಕೇವಲ ತೋರಿಕೆಗಾಗಿ ಮಸೀದಿಗಳನ್ನು ಕಟ್ಟುತ್ತಿದ್ದೀರಿ' ಎಂದು ಹೇಳಿದರು.

ಮಕ್ಕಳಿಗೂ ಅವರ ಆಸೆಯ ಪ್ರಕಾರವೇ ನೀಡುತ್ತಿದ್ದರು. ಹಝ್ರತ್ ಮಿರ್ಝಾ ಬಶೀರ್ ಸಾಹಿಬ್(ರ) ಬರೆಯುತ್ತಾರೆ: ಖಾದಿಯಾನಿನ ಹಕೀಮ್ ಮುಹಮ್ಮದ್ ಉಮರ್ ಸಾಹಿಬ್‌ರ ಪತ್ನಿ ಅಝೀಝಾ ಬೇಗಮ್‌ರ ತಾಯಿಯಾದ ಬೀಬಿ ರಾಣಿ ಮೂಸಿಯಾ ವಿವರಿಸುತ್ತಾರೆ: ನಾನು 1901 ರಲ್ಲಿ ಪತ್ರದ ಮೂಲಕ ಬೈಅತ್ ಮಾಡಿದ್ದೆ. ನನ್ನ ಮಗಳು ಅಝೀಝಾ ಬೇಗಮ್ ಖಾದಿಯಾನಿನಲ್ಲಿದ್ದರು. ಆ ಕಾರಣಕ್ಕಾಗಿ 1902ರಲ್ಲಿ ನನಗೂ ಖಾದಿಯಾನಿಗೆ ಬರಬೇಕೆನಿಸಿತು. ನನ್ನ ಜೊತೆ ನನ್ನ ಚಿಕ್ಕ ಮಗಳಿದ್ದಳು. ಹಝ್ರತ್ ಮಸೀಹ್ ಮೌಊದ್(ಅ) ಬೆಳಿಗ್ಗೆ ಯಾವುದಾದರೂ ಸಮಯದಲ್ಲಿ ವಾಯುವಿಹಾರಕ್ಕಾಗಿ ಹೊರಗೆ ತೋಟದ ಕಡೆಗೆ ಹೋಗುತ್ತಿದ್ದಾಗ, ನಾನು ಕೂಡ ಹೆಚ್ಚಿನ ಸಮಯ ಅವರೊಟ್ಟಿಗೆ ಹೋಗುತ್ತಿದ್ದೆ. ನನಗೆ ವಯಸ್ಸಾಗಿದ್ದ ಕಾರಣ ಮತ್ತು ಬಹಳ ಸಮಯ ಕಳೆದ ಕಾರಣ ಹೆಚ್ಚಿನ ಮಾತುಗಳು ನೆನಪಿಲ್ಲ. ಆದರೆ ಅವರು ಹೇಳುತ್ತಾರೆ: ನನಗೆ ಒಂದು ವಿಷಯ ನೆನಪಿದೆ, ಒಮ್ಮೆ ಮುಂಜಾನೆ ಹಝ್ರತ್ ಮಸೀಹ್ ಮೌಊದ್(ಅ) ಊಟ ಮಾಡುತ್ತಿದ್ದಾಗ ನಾನು ಕೂಡ ಅಲ್ಲಿಗೆ ಬಂದೆ. ನನ್ನ ಚಿಕ್ಕ ಮಗಳು ಅಳಲು ಪ್ರಾರಂಭಿಸಿದಳು. 'ಕಾರಣವೇನು?' ಎಂದು ಹಝ್ರತ್ ಮಸೀಹ್ ಮೌಊದ್(ಅ) ಕೇಳಿದರು. ನಾನು ಹೇಳಿದೆ: 'ಅವಳು ರೊಟ್ಟಿ ಕೇಳುತ್ತಿದ್ದಾಳೆ'. ಅವರು ಅವಳಿಗೆ ರೊಟ್ಟಿ ತರಿಸಿ ಕೊಟ್ಟರು, ಆದರೆ ಆ ಹುಡುಗಿ ಸುಮ್ಮನಾಗದೆ ಮತ್ತೂ ಅಳುತ್ತಲೇ ಇದ್ದಳು. ಹಝ್ರತ್ ಮಸೀಹ್ ಮೌಊದ್(ಅ) ಮತ್ತೆ ಕೇಳಿದಾಗ ನಾನು ಹೇಳಿದೆ: 'ಹುಝೂರ್ ತಿನ್ನುತ್ತಿರುವ ರೊಟ್ಟಿಯನ್ನೇ ಅವಳು ಕೇಳುತ್ತಿದ್ದಾಳೆ'. ಆಗ ಹಝ್ರತ್ ಮಸೀಹ್ ಮೌಊದ್(ಅ) ತಾವು ತಿನ್ನುತ್ತಿದ್ದ ರೊಟ್ಟಿಯನ್ನೇ ಅವಳಿಗೆ ಕೊಟ್ಟರು. ಆ ಹುಡುಗಿ ಆ ರೊಟ್ಟಿಯನ್ನು ತೆಗೆದುಕೊಂಡು ಸುಮ್ಮನಾಗಿ ತಿನ್ನಲಾರಂಭಿಸಿದಳು.
(ಸೀರತುಲ್ ಮಹದಿ, ಸಂಪುಟ-2, ಭಾಗ-5, ಪುಟ-188, ವರದಿ ಸಂಖ್ಯೆ-1281)

ಹಝ್ರತ್ ಮಸೀಹ್ ಮೌಊದ್(ಅ) ಇತರರಿಂದ ಕೆಲಸ ಮಾಡಿಸಿದರೆ, ಕೆಲಸ ಮಾಡುವವರ ಸೌಕರ್ಯದ ಬಗ್ಗೆಯೂ ಕಾಳಜಿ ವಹಿಸುತ್ತಿದ್ದರು. ಡಾಕ್ಟರ್ ಅತರ್ ದೀನ್ ಸಾಹಿಬ್ ಹೇಳುತ್ತಾರೆ: ಆಗ ಇನ್ನೂ ಮಗುವಾಗಿದ್ದ ಹಝ್ರತ್ ಮೀರ್ ಮುಹಮ್ಮದ್ ಇಸ್ಹಾಕ್ ಸಾಹಿಬ್ ಎಲ್ಲೋ ಹೊರಗೆ ಹೋಗಿದ್ದರು. ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಈ ವಿಷಯ ತಿಳಿದಾಗ, ಅವರು ತಕ್ಷಣವೇ ಚಿಂತಿತರಾದರು ಮತ್ತು ತಮ್ಮ ಸೇವಕನನ್ನು ಬೋರ್ಡಿಂಗ್ ಹೌಸ್‌ಗೆ ಕಳುಹಿಸಿ, ಬಹಳ ವೇಗವಾಗಿ ಓಡಬಲ್ಲ ವಿದ್ಯಾರ್ಥಿಗಳನ್ನು ಕರೆತರುವಂತೆ ಹೇಳಿದರು. ಅಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳನ್ನು ಕರೆಯಿಸಲಾಯಿತು. ಆ ಸಮಯದಲ್ಲಿ ನವ ಮುಸ್ಲಿಂ ಸಹೋದರರಾದ ಅಬ್ದುರ್ರಹೀಮ್ ಸಾಹಿಬ್ ಅವರು ಬೋರ್ಡಿಂಗ್ ಸೂಪರಿಂಟೆಂಡೆಂಟ್ ಆಗಿದ್ದರು. ಅವರು ನನ್ನನ್ನು ಮತ್ತು ಇತರ ಮೂರ್ನಾಲ್ಕು ಹುಡುಗರನ್ನು ಕಳುಹಿಸಿದರು ಮತ್ತು ನನ್ನನ್ನು ಆ ತಂಡದ ನಾಯಕ ಅಥವಾ ಕ್ಯಾಪ್ಟನ್ ಆಗಿ ಮಾಡಿದರು. ನಾವು ಹಝ್ರತ್ ಮಸೀಹ್ ಮೌಊದ್(ಅ)ರ ಬಳಿಗೆ ಹೋದಾಗ, ಅವರು ಅತ್ಯಂತ ಪ್ರೀತಿಯಿಂದ ಹೀಗೆ ಹೇಳಿದರು: 'ನಿಮಗೆ ಬಹಳ ತೊಂದರೆಯಾಗಿದೆ, ನಾನು ನಿಮ್ಮನ್ನು ಕರೆಸಿದ್ದೇನೆ ಮತ್ತು ನೀವು

ಒಂದು ಕೆಲಸಕ್ಕಾಗಿ ಹೋಗಬೇಕಾಗಿದೆ. ನೀವು ಹುಡುಕುತ್ತಾ ಹೋಗಬೇಕಾಗಿರುವುದರಿಂದ ತಡವಾಗಬಹುದು, ಬಹಳಷ್ಟು ಅಲೆಯಬೇಕಾಗಬಹುದು ಮತ್ತು ನಿಮಗೆ ಹಸಿವಾಗಲೂಬಹುದು'. ಆದ್ದರಿಂದ ಅವರು ನನಗೆ ಬಹಳಷ್ಟು ರೊಟ್ಟಿಗಳನ್ನು ನೀಡಿದರು ಮತ್ತು ದಾಲಿನಂತಹ ಪಲ್ಯವೊಂದನ್ನು ತಾವೇ ಸ್ವತಃ ತಂದು ನಮಗೆ ಕೊಟ್ಟರು. ಹುಡುಕಾಟಕ್ಕಾಗಿ ಹೋಗುತ್ತಿದ್ದರಿಂದ ದಾರಿಯಲ್ಲಿ ಹಸಿವಾಗಬಹುದು ಎಂಬ ಕಾಳಜಿಯಿತ್ತು. ಏನೇ ಆಗಲಿ, ನಾವು ಹೊರಡಲು ಸಿದ್ಧರಾದಾಗ, ಸನ್ಮಾನ್ಯ ಶೇಖ್ ಯಾಕೂಬ್ ಅಲಿ ಸಾಹಿಬ್ ಇರ್ಫಾನಿ(ರ) ಮೀರ್ ಸಾಹಿಬ್‌ರನ್ನು ಕರೆದುಕೊಂಡು ಅದೇ ಕ್ಷಣದಲ್ಲಿ ಹಾಜರಾದರು. ಅವರು ಸಿಕ್ಕಿದ್ದರಿಂದ ನಾವು ಹೋಗಬೇಕಾಗಿ ಬರಲಿಲ್ಲ, ಆದರೆ ಹಝ್ರತ್ ಮಸೀಹ್ ಮೌಊದ್(ಅ)ರ ಕರುಣೆ ತಮ್ಮ ಸೇವಕರ ಮೇಲೆಯೂ ಇತ್ತು ಎಂಬುದು ಇದರಿಂದ ವ್ಯಕ್ತವಾಗುತ್ತದೆ. (ರಿವಾಯತ್ ಅಸ್‌ಹಾಬೆ ಅಹ್ಮದ್, ಸಂಪುಟ–3, ಪುಟ–346, ವರದಿ ಡಾ॥ ಅತರುದ್ದೀನ್ ಸಾಹಿಬ್(ರ))

ಖಾದಿಯಾನಿಗೆ ಹೊಂದಿಕೊಂಡಿರುವ ಖಾದಿರಾಬಾದ್ ಗ್ರಾಮದಲ್ಲಿ ವಾಸಿಸುತ್ತಿದ್ದ ಭಾಗೋ ಸಾಹಿಬ್‌ರ ಪುತ್ರ ಮುಹಮ್ಮದಿ ಸಾಹಿಬ್ (ಮುಹಮ್ಮದ್ ದೀನ್ ಸಾಹಿಬ್) ವಿವರಿಸುತ್ತಾರೆ: 'ಹಲವು ಬಾರಿ ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಮನೆಯಿಂದ ಊಟ ಇತ್ಯಾದಿಗಳನ್ನು ತಂದು ನಮ್ಮ ಊರಿನ ಮಸೀದಿಯಲ್ಲಿ ತಿನ್ನುತ್ತಿದ್ದರು ಮತ್ತು ನಮಗೂ ಕೊಡುತ್ತಿದ್ದರು.' (ಅಸ್‌ಹಾಬೆ ಅಹ್ಮದ್, ಸಂಪುಟ–2, ಪುಟ–378, ವರದಿ ಹಝ್ರತ್ ಮುಹಮ್ಮದಿ (ಮಹಮ್ಮದ್ ದೀನ್) ಸಾಹಿಬ್(ರ))

ಪತ್ನಿಯಿಂದ ಪಡೆದ ಸಾಲವನ್ನು ಮರುಪಾವತಿಸುವುದೂ ಅತ್ಯಗತ್ಯವಾಗಿದೆ. ಲಂಗರ್‌ನ ಖರ್ಚು ಹೆಚ್ಚಾಗುವಾಗ ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಅಮ್ಮಾ ಜಾನ್(ರ)ರ ಆಭರಣವನ್ನು ಮಾರಿ ಆ ಖರ್ಚನ್ನು ಸರಿದೂಗಿಸಿದ ಘಟನೆಯನ್ನು ನಾನು ಕಳೆದ ಖುತ್ಬಾದಲ್ಲಿ ವಿವರಿಸಿದ್ದೆ. ಇದರರ್ಥ ಅಗತ್ಯಬಿದ್ದಾಗ ಪತ್ನಿಯ ಆಭರಣದ ಹಣವು ಪತಿಯ ವಶಕ್ಕೆ ಬರಬಹುದೇ ಮತ್ತು ಅದನ್ನು ಖರ್ಚು ಮಾಡಬಹುದೇ? ಎಂದು ಕಳೆದ ವಾರ ಈ ಬಗ್ಗೆ ಒಬ್ಬರು ನನ್ನನ್ನು ಪ್ರಶ್ನಿಸಿದ್ದರು. ಇದಕ್ಕೆ ಉತ್ತರವೇನೆಂದರೆ: ಹಝ್ರತ್ ಮಸೀಹ್ ಮೌಊದ್(ಅ) ಅದನ್ನು ಸಾಲವಾಗಿ ಪಡೆಯುತ್ತಿದ್ದರು ಮತ್ತು ಮರುಪಾವತಿಸುತ್ತಿದ್ದರು. ಈ ಬಗ್ಗೆ ಒಂದು ವರದಿಯಿದೆ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ವಿವರಿಸುತ್ತಾರೆ: ಹಝ್ರತ್ ಹಾಮಿದ್ ಅಲಿ ಸಾಹಿಬ್‌ರ ಪತ್ನಿಯಾದ ರಸೂಲ್ ಬೀವಿ ಸಾಹಿಬಾ ವಿವರಿಸಿದರು: 'ಬರಗಾಲ ಬಂದಾಗ ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಉಮ್ಮುಲ್ ಮುಅ್‌ನೀನ್‌ರಿಂದ ಹಣವನ್ನು ಸಾಲವಾಗಿ ಪಡೆದರು. (ಮೊದಲನೇ ಬಾರಿ ಹೇಳಿದ ಉದಾಹರಣೆಯಲ್ಲೂ ಸಾಲ ಅಥವಾ ಅಡವಿಡುವ ಮಾತೇ ಇತ್ತು. ಅಡವಿಟ್ಟದ್ದನ್ನು ಬಿಡಿಸಿದಾಗ ಹಝ್ರತ್ ಮಸೀಹ್ ಮೌಊದ್(ಅ)ರೇ ಅದನ್ನು ಪಾವತಿಸಿದ್ದರು). ಏನೇ ಇರಲಿ, ಅವರು ಹಣವನ್ನು ಸಾಲವಾಗಿ ಪಡೆದರು ಮತ್ತು ಗೋಧಿ ಖರೀದಿಸಿ ಮನೆಯ ಖರ್ಚು ಹಾಗೂ ಲಂಗರ್‌ನ ಖರ್ಚನ್ನು ಪೂರೈಸಿದರು. ಇದು ಕೇವಲ ಮನೆಯ ಖರ್ಚಿಗಾಗಿ ಮಾತ್ರ ಆಗಿರಲಿಲ್ಲ, ಬದಲಾಗಿ ಬಹಳಷ್ಟು ಊಟವು ಮನೆಯಿಂದಲೇ ಲಂಗರ್‌ಗಾಗಿ ತಯಾರಾಗುತ್ತಿತ್ತು. ಅದರ ನಂತರ, ಅವರು ಚೌಧರಿ ರುಸ್ತುಮ್ ಅಲಿ ಸಾಹಿಬ್‌ರಿಂದ, ಹಾಫಿಝ್ ಹಾಮಿದ್ ಅಲಿ ಸಾಹಿಬ್‌ರ ಮೂಲಕ ಐನೂರು ರೂಪಾಯಿಗಳನ್ನು ತರಿಸಿದರು ಮತ್ತು ಕೆಲವು ತುಪ್ಪದ ಜಾಡಿಗಳನ್ನು ತರಿಸಿದರು. ಹಣ ಬಂದ ನಂತರ, ಅವರು ಹಝ್ರತ್ ಉಮ್ಮುಲ್ ಮುಅ್‌ನೀನ್‌ರ ಸಾಲವನ್ನು ಮರುಪಾವತಿಸಿದರು. ಆ ದಿನಗಳಲ್ಲಿ ಬರಗಾಲವಿದ್ದುದರಿಂದ ಹಣದ ಅಗತ್ಯವಿತ್ತು, ಹಾಫಿಝ್ ಸಾಹಿಬ್ ರೂಪಾಯಿಗಳ ಚೀಲಗಳನ್ನೇ ತರುತ್ತಿದ್ದನ್ನು ನಾನು ಹಲವು ಬಾರಿ ನೋಡಿದ್ದೇನೆ ಮತ್ತು ರಾತ್ರಿಯ ವೇಳೆ ನಾನು ಆ ಚೀಲಗಳನ್ನು ಕಾವಲು ಕಾಯಬೇಕಾಗುತ್ತಿತ್ತು ಎಂದು ರಸೂಲ್ ಬೀವಿ ಹೇಳುತ್ತಾರೆ. (ಸೀರತುಲ್ ಮಹದಿ, ಸಂಪುಟ–2, ಭಾಗ–4, ಪುಟ–117, ವರದಿ–1145)

ಆ ಹಣವು ಸಾಲವಾಗಿರುತ್ತಿತ್ತು ಮತ್ತು ಜನರ ಕಡೆಯಿಂದ ಬರುವ ಸಹಾಯವಾಗಿರುತ್ತಿತ್ತು. ಏನೇ ಇರಲಿ, ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಅಮ್ಮಾ ಜಾನ್‌ರಿಂದ ಅಥವಾ ಬೇರೆ ಯಾರಿಂದಲೇ ಸಾಲ ಪಡೆದರೂ ಅದನ್ನು ಮರುಪಾವತಿಸುತ್ತಿದ್ದರು.

ಹಝ್ರತ್ ಬಾಬು ಗುಲಾಮ್ ಮುಹಮ್ಮದ್ ಸಾಹಿಬ್ ವಿವರಿಸುತ್ತಾರೆ: ಖಾದಿಯಾನಿನಲ್ಲಿ ಕೆಲವೊಮ್ಮೆ ಸಗಣಿಯಿಂದ ತುಂಬಿದ ಕೈಗಳು ಮತ್ತು ಕೊಳಕಾದ ಬಟ್ಟೆಗಳನ್ನು ಧರಿಸಿದ್ದ ಹಳ್ಳಿ ಮಹಿಳೆಯರು ಹಝ್ರತ್ ಮಸೀಹ್ ಮೌಊದ್(ಅ)ರ ಸನ್ನಿಧಿಗೆ ಬಂದು ಹೀಗೆ ಹೇಳಿದಳು: 'ಮಿರ್ಝಾ ಜೀ, ಮಗುವಿಗೆ ಹುಷಾರಿಲ್ಲ, ಪ್ರಜ್ಞೆ ತಪ್ಪಿದ್ದಾಳೆ, ಬಹಳ ಜ್ವರ ಬಂದಿದೆ'. ನಂತರ ತಮ್ಮ ಕೈಗಳನ್ನು ತೋರಿಸುತ್ತಾ, 'ನೋಡಿ, ನಾವು ಕೈ ಕೂಡ ತೊಳೆದುಕೊಂಡು ಬಂದಿಲ್ಲ' ಎನ್ನುತ್ತಿದ್ದಳು. ಒಮ್ಮೆ ಸಗಣಿಯಿಂದ, ಹೊಲಸಿನಿಂದ ತುಂಬಿದ ಕೈಗಳಿದ್ದ ಮಹಿಳೆಯೊಬ್ಬಳು ತನ್ನ ಕೆಲಸ ಮಾಡುತ್ತಿದ್ದಾಗ, ಹಾಗೆಯೇ ಹಝ್ರತ್ ಮಸೀಹ್ ಮೌಊದ್(ಅ)ರ ಬಳಿಗೆ ಬಂದು, 'ನನ್ನ ಮಗಳಿಗೆ ಬಹಳ ಜ್ವರವಿದೆ, ಸಂಪೂರ್ಣವಾಗಿ ಪ್ರಜ್ಞೆ ತಪ್ಪಿದ್ದಾಳೆ' ಎಂದು ಹೇಳಿದಳು., 'ಏನಾದರೂ ಪಾತ್ರೆ ತಂದಿದ್ದೀಯಾ?' ಎಂದು ಹಝ್ರತ್ ಮಸೀಹ್ ಮೌಊದ್(ಅ) ಕೇಳಿದರು. ಅವಳು ಸಗಣಿ ತುಂಬಿದ ಕೈಗಳಿಂದಲೇ ಒಂದು ಮಣ್ಣಿನ ಬಟ್ಟಲನ್ನು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ನೀಡಿದಳು. ಅವರು ಆ ಬಟ್ಟಲನ್ನು ತೆಗೆದುಕೊಂಡು ಅದರಲ್ಲಿ 'ರೂಹೇ ಕೇವಡಾ' ತುಂಬಿದರು ಮತ್ತು ಸುಮಾರು ಐದು ರತಿಯಷ್ಟು ಕಸ್ತೂರಿಯನ್ನು ನೀಡಿ, 'ಎರಡು ಬಾರಿ ಅರ್ಧ ಬಟ್ಟಲು ಮತ್ತು ಈ ಔಷಧಿಯನ್ನು ಕುಡಿಸು. ಜೊತೆಗೆ ಮಗುವಿಗೆ ಹೇಗಿದೆ ಎಂದು ನನಗೆ ತಿಳಿಸು' ಎಂದು ಹೇಳಿದರು. (ರಿವಾಯತ್ ಅಸ್‌ಹಾಬೆ ಅಹ್ಮದ್, ಸಂಪುಟ–4, ಪುಟ–249, ವರದಿ ಹಝ್ರತ್ ಬಾಬು ಗುಲಾಮ್ ಮುಹಮ್ಮದ್ ಸಾಹಿಬ್(ರ))

ಬಡವರ ಮೇಲೂ ಅವರ ಅತೀವ ಕರುಣೆ ಮತ್ತು ಉತ್ತಮ ನಡವಳಿಕೆ ಇರುತ್ತಿತ್ತು.

ಹಝ್ರತ್ ಶೇಖ್ ಮಹಮೂದ್ ನಸೀಬ್ ಸಾಹಿಬ್ ವಿವರಿಸುತ್ತಾರೆ: ಒಮ್ಮೆ ನನಗೆ ಹಣದ ಅಗತ್ಯಬಿದ್ದಾಗ ನಾನು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಹೀಗೆ ಬರೆದೆ: ಹತ್ತು ರೂಪಾಯಿಗಳನ್ನು ಸಾಲವಾಗಿ ಕಳುಹಿಸಿ, ನಾನು ಎರಡು ಕಂತುಗಳಲ್ಲಿ ಮರುಪಾವತಿಸುತ್ತೇನೆ. ಹಝ್ರತ್ ಮಸೀಹ್ ಮೌಊದ್(ಅ) ಹಣವನ್ನು ಕಳುಹಿಸಿದರು. (ಅಸ್‌ಹಾಬೆ ಅಹ್ಮದ್, ಸಂಪುಟ–5, ಪುಟ–446, ವರದಿ ಹಝ್ರತ್ ಶೇಖ್ ಮುಹಮ್ಮದ್ ನಸೀಬ್ ಸಾಹಿಬ್)

ಅವರು ಎಂದಿಗೂ ನಿರಾಕರಿಸುತ್ತಿರಲಿಲ್ಲ ಎಂಬುದು ಅವರ ಅಭ್ಯಾಸವಾಗಿತ್ತು ಮತ್ತು ಅವರು ಹಣವನ್ನು ಮರುಪಾವತಿಸಲು ಕೇಳುತ್ತಿರಲಿಲ್ಲ, ಬದಲಾಗಿ ಯಾರಾದರೂ ಮರಳಿ ನೀಡಿದರೆ, 'ಇಲ್ಲ, ನಮ್ಮ ಮತ್ತು ನಿಮ್ಮ ಸಂಪತ್ತು ಒಂದೇ ಆಗಿದೆ, ನೀವೇ ಇಟ್ಟುಕೊಳ್ಳಿ' ಎಂದು ಹೇಳುತ್ತಿದ್ದರು ಎಂಬುದನ್ನು ನಾವು ಆಗಲೇ ನೋಡಿದ್ದೇವೆ. ಇದೇ ಅವರ ಅಭ್ಯಾಸವಾಗಿತ್ತು.

(ಸೀರತ್ ಹಝ್ರತ್ ಮಸೀಹ್ ಮೌಊದ್(ಅ), ಹಝ್ರತ್ ಶೇಖ್ ಯಾಖೂಬ್ ಅಲೀ ಸಾಹಿಬ್ ಇರ್ಫಾನಿ, ಭಾಗ–2, ಪುಟ–307)

ಊಟದಲ್ಲಿ ಸಮೃದ್ಧಿ ಉಂಟಾದ ಒಂದು ಘಟನೆಯೂ ಸಿಗುತ್ತದೆ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಮಿಯಾನ್ ಅಬ್ದುಲ್ಲಾ ಸಾಹಿಬ್ ಸನೌರಿ(ರ) ಹೇಳುತ್ತಾರೆ: ಒಮ್ಮೆ ಹಝ್ರತ್ ಮಸೀಹ್ ಮೌಊದ್(ಅ) ಕೆಲವು ಅತಿಥಿಗಳಿಗೆ ಆಮಂತ್ರಣ ನೀಡಿದರು ಮತ್ತು ಅವರಿಗಾಗಿ ಮನೆಯಲ್ಲಿ ಊಟ ತಯಾರಿಸಲು ಹೇಳಿದರು. ಆದರೆ ಸರಿಯಾಗಿ ಊಟದ ಸಮಯದಲ್ಲಿ ಅಷ್ಟೇ ಸಂಖ್ಯೆಯ ಬೇರೆ ಅತಿಥಿಗಳು ಸಹ ಬಂದರು ಮತ್ತು ಮುಬಾರಕ್ ಮಸೀದಿ ಅತಿಥಿಗಳಿಂದ ತುಂಬಿಹೋಯಿತು. ಅದು ಚಿಕ್ಕ ಮಸೀದಿಯಾಗಿತ್ತು. ಹಝ್ರತ್ ಮಸೀಹ್ ಮೌಊದ್(ಅ) ಒಳಗೆ ಸಂದೇಶ ಕಳುಹಿಸಿ, 'ಇನ್ನೂ ಅತಿಥಿಗಳು ಬಂದಿದ್ದಾರೆ, ಹೆಚ್ಚು ಊಟ ಕಳುಹಿಸಿ' ಎಂದು ಹೇಳಿದರು. ಆದರೆ ಹಝ್ರತ್ ಮಸೀಹ್ ಮೌಊದ್(ಅ)ರ ಬಳಿ ಊಟಕ್ಕಾಗಿ ಬಂದವರಲ್ಲಿ ಕೆಲವರು ಊಟ ಮಾಡುವುದು ಮತ್ತು ಉಳಿದವರಿಗೆ ನೀವು ಊಟ ನೀಡದಿರುವುದು ಸಾಧ್ಯವಿರಲಿಲ್ಲ. ಇದು ಹಝ್ರತ್ ಮಸೀಹ್ ಮೌಊದ್(ಅ)ರ ಸ್ವಭಾವಕ್ಕೆ ವಿರುದ್ಧವಾಗಿತ್ತು. ಅವರ ಉದಾರತೆಗೆ ವಿರುದ್ಧವಾಗಿತ್ತು. ಹೇಗಿದ್ದರೂ ಅವರು ಎಲ್ಲರಿಗೂ ಊಟ ಬಡಿಸಬೇಕಾಗಿತ್ತು. ಆಗ ಹಝ್ರತ್ ಬೀಬಿ ಸಾಹಿಬಾ ಹಝ್ರತ್ ಅಮ್ಮಾ ಜಾನ್(ರ) ಹಝ್ರತ್ ಮಸೀಹ್ ಮೌಊದ್(ಅ)ರನ್ನು ಒಳಗೆ ಕರೆದು ಹೀಗೆ ಹೇಳಿದರು: 'ಊಟ ಸ್ವಲ್ಪವೇ ಇದೆ. ನೀವು ಮೊದಲು ಎಷ್ಟು ಅತಿಥಿಗಳಿಗೆ ಹೇಳಿದ್ದಿರೋ ಅಷ್ಟು ಜನರಿಗೆ ಮಾತ್ರ ಊಟ ತಯಾರಿಸಲಾಗಿದೆ, ಉಳಿದ ಊಟವನ್ನಾದರೂ ಹೇಗಾದರೂ ಮಾಡಿ ಹೊಂದಾಣಿಕೆ ಮಾಡಬಹುದು, ಆದರೆ ಜರ್ದಾ ಬಹಳ ಕಡಿಮೆಯಿದೆ, ಅದನ್ನು ಏನು ಮಾಡುವುದು?' 'ನಾನು ಜರ್ದಾವನ್ನು ಕಳುಹಿಸುವುದಿಲ್ಲ, ಉಳಿದ ಊಟವನ್ನು ಮಾತ್ರ ಬಡಿಸುತ್ತೇನೆ'. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: 'ಅದು ಸರಿಯಲ್ಲ. ನೀನು ಜರ್ದಾದ ಪಾತ್ರೆಯನ್ನು ನನ್ನ ಬಳಿ ತಾ'. ಅದರಂತೆ ಹಝ್ರತ್ ಮಸೀಹ್ ಮೌಊದ್(ಅ) ಆ ಪಾತ್ರೆಯ ಮೇಲೆ ರುಮಾಲನ್ನು ಹಾಕಿದರು ಮತ್ತು ರುಮಾಲಿನ ಕೆಳಗಿಂದ ತಮ್ಮ ಕೈಯನ್ನು ತೂರಿಸಿ, ತಮ್ಮ ಬೆರಳುಗಳನ್ನು ಜರ್ದಾದೊಳಗೆ ಇಟ್ಟರು. ಅನಂತರ, 'ಈಗ ಎಲ್ಲರಿಗೂ ಊಟ ಬಡಿಸಿ, ದೇವನು ಸಮೃದ್ಧಿಯನ್ನು ನೀಡುತ್ತಾನೆ' ಎಂದು ಹೇಳಿದರು. ಮಿಯಾನ್ ಅಬ್ದುಲ್ಲಾ ಸಾಹಿಬ್ ಹೇಳುತ್ತಾರೆ: 'ಜರ್ದಾ ಎಲ್ಲರಿಗೂ ಬಂತು, ಎಲ್ಲರೂ ತಿಂದರು ಮತ್ತು ನಂತರ ಸ್ವಲ್ಪ ಉಳಿಯಿತು ಕೂಡ.'

ಮಿಯಾನ್ ಅಬ್ದುಲ್ಲಾ ಸಾಹಿಬ್(ರ) ಹೇಳುತ್ತಾರೆ: ಈ ಮನೆಯ ಘಟನೆಯನ್ನು ಸ್ವತಃ ಹಝ್ರತ್ ಮಸೀಹ್ ಮೌಊದ್(ಅ)ರೇ ನನಗೆ ವಿವರಿಸಿದ್ದರು. ಅಂದರೆ, ಮನೆಯೊಳಗೆ ಕರೆದು ಹೀಗೆ ಹೇಳಿದರು: ನಾನು ಈ ರೀತಿ ಮಾಡಿದೆ ಮತ್ತು ಅಲ್ಲಾಹನು ಸಮೃದ್ಧಿಯನ್ನು ನೀಡಿದನು.

(ಸೀರತುಲ್ ಮಹದಿ, ಸಂಪುಟ–1, ಭಾಗ–1, ಪುಟ–133–135, ವರದಿ–144)

ಯಾವುದೇ ಔಪಚಾರಿಕತೆಯಿಲ್ಲದೆ ಸ್ನೇಹಿತರಿಗೆ ಋತುಮಾನದ ಹಣ್ಣುಗಳನ್ನೂ ತಿನ್ನಿಸುತ್ತಿದ್ದರು ಮತ್ತು ನೀಡುತ್ತಿದ್ದರು, ಅದರಲ್ಲಿ ಯಾವುದೇ

ಔಪಚಾರಿಕತೆ ಇರುತ್ತಿರಲಿಲ್ಲ. ಹಝ್ರತ್ ಮುಝ್ತಾರುಖ್ ಅಲಿ ಸಾಹಿಬ್ ಸಿದ್ದೀಖಿ(ರ) ಹೇಳುತ್ತಾರೆ: ತೋಟದಲ್ಲಿ ಒಂದು ಕಟ್ಟೆಯಿತ್ತು, ಅದನ್ನು ಈಗ ಪುನಃ ಸರಿಪಡಿಸಲಾಗಿದೆ. ಅಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಸ್ನೇಹಿತರೊಂದಿಗೆ ಬಂದು ಕುಳಿತುಕೊಳ್ಳುತ್ತಿದ್ದರು ಮತ್ತು ಕೆಲವೊಮ್ಮೆ ಅಲ್ಲಿ ಕುಳಿತು ಋತುಮಾನದ ಹಣ್ಣುಗಳನ್ನು ಸಹ ತಿನ್ನುತ್ತಿದ್ದರು ಎಂಬುದು ನನಗೆ ನೆನಪಿದೆ. ಒಮ್ಮೆ ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಕೈಗಳಿಂದ ನನಗೆ ಎರಡು ಮಾವಿನಹಣ್ಣುಗಳನ್ನು ನೀಡಿದರು ಮತ್ತು ಅದೇ ರೀತಿ ಉಳಿದ ಸ್ನೇಹಿತರಿಗೂ ಎರಡೆರಡು ಮಾವಿನಹಣ್ಣುಗಳನ್ನು ನೀಡಿದರು ಎಂಬುದು ನನಗೆ ನೆನಪಿದೆ. (ಅಸ್‌ಹಾಬೆ ಅಹ್ಮದ್, ಸಂಪುಟ-2, ಪುಟ-384, ವರದಿ ಹಝ್ರತ್ ಮುಮ್‌ತಾಝ್ ಅಲಿ ಸಿದ್ದೀಖಿ ಸಾಹಿಬ್(ರ))

ಇವು ಹಝ್ರತ್ ಮಸೀಹ್ ಮೌಊದ್(ಅ)ರ ದಾನಶೀಲತೆ ಮತ್ತು ಉಪಕಾರದ ಕೆಲವು ಘಟನೆಗಳಾಗಿವೆ. ತಮ್ಮ ಯಜಮಾನರಾದ ಹಝ್ರತ್ ಪೈಗಂಬರ್(ಸ)ರನ್ನು ಅನುಸರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಈ ಮಾದರಿಯನ್ನು ತೋರಿಸಿದರು ಮತ್ತು ಈ ಉಪಕಾರ ಹಾಗೂ ದಾನಶೀಲತೆಯಿಂದ ತಮ್ಮವರು ಮತ್ತು ಪರರು ಮಾತ್ರವಲ್ಲ, ಶತ್ರುಗಳು ಕೂಡ ಪ್ರಯೋಜನ ಪಡೆಯುತ್ತಿದ್ದರು.

------------*****------------

*(ಪುಟ ಸಂಖ್ಯೆ 01ರ ತಫ್ಸೀರ್‌ನ ಉಳಿದ ಭಾಗ)*

ಮತ್ತು ಈ ವಿಶ್ವದ ಪ್ರತಿಯೊಂದು ಕಣವೂ ಅಲ್ಲಾಹ್ ತಆಲಾದ ಅಧೀನದಲ್ಲಿದೆ. ಆದ್ದರಿಂದ ಆತನು ಅನುಮತಿಸಿದುದನ್ನು ಮಾತ್ರ ಸ್ವೀಕರಿಸಿರಿ ಮತ್ತು ಆತನು ನಿಷೇಧಿಸಿದುದರಿಂದ ದೂರವಿರಿ. ಏಕೆಂದರೆ ಯಜಮಾನನ ಅನುಮತಿಯಿಲ್ಲದೆ ಅವನ ವಸ್ತುವನ್ನು ಬಳಸುವವನು ಶಿಕ್ಷೆಗೆ ಅರ್ಹನಾಗುತ್ತಾನೆ.' ಎರಡನೆಯ ಅಂಶವಾದ ಆಧ್ಯಾತ್ಮಿಕ ಪ್ರಗತಿಯ ಕುರಿತು ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: 'ಎಲ್ಲವೂ ನಮ್ಮದೇ; ಪ್ರತಿಯೊಂದು ವಿಧದ ಒಳಿತು ಮತ್ತು ಬರಕತ್ತು ನಮ್ಮ ಮೂಲಕವೇ ದೊರೆಯುತ್ತದೆ. ಆದ್ದರಿಂದ ನೀವು ನಮ್ಮ ಆದೇಶಗಳನ್ನು ಪಾಲಿಸಿದಾಗ, ನಾವು ನಿಮ್ಮನ್ನು ನಮ್ಮ ಮಘ್ಫಿರತ್ (ಕ್ಷಮೆ)ಯ ಹೊದಿಕೆಯೊಳಗೆ ಸೇರಿಸಿಕೊಳ್ಳುತ್ತೇವೆ. ನಮ್ಮ ಸರ್ವಶಕ್ತಿಯು ನಿಮ್ಮನ್ನು ನಮ್ಮ ಸಮೀಪಕ್ಕೆ (ಕುರ್ಬ್-ಎ-ಇಲಾಹೀ) ಕೊಂಡೊಯ್ಯುತ್ತದೆ.'

**(ತಫ್ಸೀರ್-ಎ-ಕಬೀರ್, ಸಂಪುಟ 3, ಪುಟ 531, ಯು.ಕೆ. ಆವೃತ್ತಿ)**

------------*****------------

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಆದ್ದರಿಂದ, ಬುದ್ಧಿವಂತನು ಐಕ್ಯತೆಯ ಆಶೀರ್ವಾದಗಳಿಂದ ತನ್ನನ್ನು ವಂಚಿಸಿಕೊಳ್ಳುವುದಿಲ್ಲ. ಈ ದೇಶದಲ್ಲಿ ಹಿಂದೂಗಳು ಮತ್ತು ಮುಸ್ಲಿಮರು ಎಂಬ ಎರಡು ಮಹತ್ತರ ಸಮುದಾಯಗಳಿವೆ. ಯಾವಾಗಲಾದರೂ ಹಿಂದೂಗಳು ಒಗ್ಗೂಡಿ ಮುಸ್ಲಿಮರನ್ನು ದೇಶದಿಂದ ಹೊರಹಾಕುತ್ತಾರೆ ಅಥವಾ ಮುಸ್ಲಿಮರು ಒಟ್ಟಾಗಿ ಹಿಂದೂಗಳನ್ನು ದೇಶದಿಂದ ಹೊರಹಾಕುತ್ತಾರೆ ಎಂಬ ಕಲ್ಪನೆಯೇ ಅಸಾಧ್ಯವಾಗಿದೆ. ಇಂದು ಈ ಎರಡೂ ಸಮುದಾಯಗಳು ಪರಸ್ಪರ ಅವಲಂಬಿತ ಜೀವನವನ್ನು ನಡೆಸುತ್ತಿವೆ. ಒಂದು ಸಮುದಾಯಕ್ಕೆ ಹಾನಿಯಾದರೆ ಅದರ ಪರಿಣಾಮ ಮತ್ತೊಂದರ ಮೇಲೂ ಬೀಳುತ್ತದೆ. ಒಂದು ಸಮುದಾಯವು ಅಹಂಕಾರದಿಂದ ಮತ್ತೊಂದನ್ನು ಕೀಳಾಗಿ ಕಾಣಲು ಯತ್ನಿಸಿದರೆ, ಕೊನೆಗೆ ತಾನೂ ಅವಮಾನದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಹಾಗೆಯೇ ತನ್ನ ನೆರೆಯವರ ಕಷ್ಟದಲ್ಲಿ ಸಹಾಯ ಮಾಡಲು ನಿರ್ಲಕ್ಷ್ಯ ತೋರಿದವನು, ಅದರ ನಷ್ಟವನ್ನು ಕೊನೆಯಲ್ಲಿ ತಾನೇ ಅನುಭವಿಸಬೇಕಾಗುತ್ತದೆ. ಇನ್ನೊಬ್ಬ ಸಮುದಾಯದ ನಾಶವನ್ನು ಬಯಸುವವನ ಸ್ಥಿತಿ, ತಾನು ಕುಳಿತಿರುವ ಕೊಂಬೆಯನ್ನೇ ಕತ್ತರಿಸುವವನಂತೆಯೇ ಆಗಿರುತ್ತದೆ.

ಅಲ್ಲಾಹನ ಅನುಗ್ರಹದಿಂದ ಇಂದು ನೀವು ವಿದ್ಯಾವಂತರಾಗಿದ್ದೀರಿ. ಆದ್ದರಿಂದ ಈಗ ದ್ವೇಷವನ್ನು ತ್ಯಜಿಸಿ ಪ್ರೀತಿಯಲ್ಲಿ ಬೆಳೆಯಿರಿ. ನಿರ್ಲಕ್ಷ್ಯವನ್ನು ಬಿಟ್ಟು ಪರಸ್ಪರ ಸಹಾನುಭೂತಿಯನ್ನು ಅಳವಡಿಸಿಕೊಳ್ಳಿ. ಇದೇ ನಿಮ್ಮ ವಿದ್ಯೆ ಮತ್ತು ವಿವೇಕಕ್ಕೆ ತಕ್ಕ ಮಾರ್ಗವಾಗಿದೆ. ಜೀವನದ ಪಯಣವು ಉರಿಯುವ ಬಿಸಿಲಿನ ಮಧ್ಯೆ ಮರುಭೂಮಿಯನ್ನು ದಾಟುವ ಪ್ರಯಾಣದಂತಿದೆ. ಇಂತಹ ಕಠಿಣ ಪಯಣದಲ್ಲಿ ಪರಸ್ಪರ ಐಕ್ಯತೆ ಮತ್ತು ಸಹಕಾರವೇ ಆ ತಂಪಾದ ನೀರಿನಂತಿದ್ದು, ಅದು ಉರಿಯುವ ಬಿಸಿಯನ್ನು ಶಮನಗೊಳಿಸುವುದಲ್ಲದೆ, ದಾಹದಿಂದ ಜೀವ ಉಳಿಸುತ್ತದೆ.

ಈ ಅತ್ಯಂತ ಸೂಕ್ಷ್ಮ ಮತ್ತು ಸಂಕೀರ್ಣ ಸಮಯದಲ್ಲಿ ನಾನು ನಿಮ್ಮೆಲ್ಲರನ್ನು ಶಾಂತಿ, ಸೌಹಾರ್ದ ಮತ್ತು ಪರಸ್ಪರ ಸೌಹಾರ್ದತೆಯತ್ತ ಆಹ್ವಾನಿಸುತ್ತೇನೆ. ಏಕೆಂದರೆ ಇಂದು ನಮ್ಮೆಲ್ಲರಿಗೂ ಶಾಂತಿಯ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚಾಗಿದೆ.

ಜಮಾಅತ್ ಅಹ್ಮದೀಯ್ಯದ ಸ್ಥಾಪಕರಾದ ಹಝ್ರತ್ ಅಕ್ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ "ಪೈಘಾಮ್-ಎ-ಸುಲ್ಹ್" ಉಪನ್ಯಾಸದಲ್ಲಿನ ಈ ಅಮೂಲ್ಯ ಮಾರ್ಗದರ್ಶನಗಳು ಇಂದಿನ ಭಾರತದ ಸಾಮಾಜಿಕ ಹಾಗೂ ರಾಷ್ಟ್ರೀಯ ಪರಿಸ್ಥಿತಿಯಲ್ಲಿ ವಿಶೇಷ ಪ್ರಸ್ತುತತೆಯನ್ನು ಹೊಂದಿವೆ.

ಅಲ್ಲಾಹ್ ತಆಲಾ ನಮಗೆಲ್ಲರಿಗೂ ಈ ಮೈತ್ರಿ ಸಂದೇಶವನ್ನು ದೇಶದ ಮೂಲೆಮೂಲೆಗೂ ತಲುಪಿಸುವ, ನಮ್ಮ ನಡೆ-ನುಡಿಗಳ ಮೂಲಕ ಅದನ್ನು ಜೀವಂತಗೊಳಿಸುವ ಹಾಗೂ ಪರಸ್ಪರ ಪ್ರೀತಿ, ನ್ಯಾಯ ಮತ್ತು ಸಹಾನುಭೂತಿಯ ವಾತಾವರಣವನ್ನು ನಿರ್ಮಿಸುವ ತೌಫೀಕ್ ಅನುಗ್ರಹಿಸಲಿ. ಆಮೀನ್. ------------*****------------

**ಬದರ್ ಪತ್ರಿಕೆಯನ್ನು ನೀವೂ ಓದಿರಿ ಮತ್ತು ನಿಮ್ಮ ಸ್ನೇಹಿತರನ್ನೂ ಓದಲು ಪ್ರೋತ್ಸಾಹಿಸಿ.**

ಡಿಸೆಂಬರ್ 2014 ರ ಬದರ್ ಪತ್ರಿಕೆಯ ವಿಶೇಷ ಸಂಚಿಕೆಗಾಗಿ ತಮ್ಮ ಸಂದೇಶವನ್ನು ಕಳುಹಿಸುತ್ತಾ ಸಯ್ಯಿದುನಾ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಹೀಗೆ ಹೇಳಿದರು:

"ಬದರ್ ವಾರಪತ್ರಿಕೆಯ ಸಂಸ್ಥೆ ಮತ್ತು ಓದುಗರು ಈ ಪತ್ರಿಕೆಯನ್ನು ಜಮಾಅತ್‌ನ ಸದಸ್ಯರ ಆಧ್ಯಾತ್ಮಿಕ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ಪ್ರಕಟಿಸಲಾಗಿದೆ ಎಂಬುದನ್ನು ಯಾವಾಗಲೂ ನೆನಪಿನಲ್ಲಿಡಬೇಕು ಮತ್ತು ನಮ್ಮ ಹಿರಿಯರು ಪ್ರತಿಕೂಲ ಪರಿಸ್ಥಿತಿಗಳ ಹೊರತಾಗಿಯೂ ಅದನ್ನು ತಮ್ಮ ಎಲ್ಲಾ ಶಕ್ತಿಯಿಂದ ಮುಂದುವರಿಸಲು ಪ್ರಯತ್ನಿಸಿದರು ಮತ್ತು ಅವರ ಪ್ರಾರ್ಥನೆ ಮತ್ತು ಶುದ್ಧ ಪ್ರಯತ್ನಗಳ ಅನುಗ್ರಹಗಳಿಂದ ಮಾತ್ರ ಇದು ಇಂದಿಗೂ ಮುಂದುವರೆದಿದೆ ಮತ್ತು ಇದು ಸಾಧ್ಯವಾದಷ್ಟು ಅಹ್ಮದೀಯರು ಇದನ್ನು ಓದಬೇಕು ಮತ್ತು ಅದರಿಂದ ಪ್ರಯೋಜನ ಪಡೆಯಬೇಕು. ಸರ್ವಶಕ್ತನಾದ ಅಲ್ಲಾಹನು ತನ್ನ ಕೃಪೆಯಿಂದ, ವಿಶೇಷವಾಗಿ ಭಾರತದ ಅಹ್ಮದೀಯರಿಗೆ ಮತ್ತು ಸಾಮಾನ್ಯವಾಗಿ ಪ್ರಪಂಚದ ಉಳಿದ ಭಾಗಗಳಲ್ಲಿ ವಾಸಿಸುವ ಅಹ್ಮದೀಯರಿಗೆ ಇದನ್ನು ಅಧ್ಯಯನ ಮಾಡುವ ಮತ್ತು ಅದಕ್ಕೆ ಸಂಬಂಧಿಸಿದ ಅನುಗ್ರಹಗಳನ್ನು ಪಡೆಯುವ ಸಾಮರ್ಥ್ಯವನ್ನು ನೀಡಲಿ. ಆಮೀನ್."

ಸಯ್ಯಿದುನಾ ಹಝ್ರತ್ ಅಖ್ದಸ್ ಅಮೀರ್-ಉಲ್-ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಪ್ರತಿ ಮನೆಯೂ ಬದರ್ ವಾರಪತ್ರಿಕೆಯನ್ನು ಓದುವುದನ್ನು ಖಚಿತಪಡಿಸಿಕೊಳ್ಳುವುದು ಬಹಳ ಮುಖ್ಯ ಎಂದು ಅಹ್ಮದಿಯಾ ಜಮಾಅತ್ತಿಗೆ ಇಲ್ಲಿ ತಿಳಿಸಲಾಗಿದೆ. ಬದರ್ ಪತ್ರಿಕೆಯಲ್ಲಿ, ಪವಿತ್ರ ಖುರ್‌ಆನ್, ಹದೀಸ್ ಶರೀಫ್, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು, ಮತ್ತು ಹುಝೂರ್ ಅನ್ವರ್(ಅತಬಿಅ) ಅವರ ಖುತ್‌ಬ ಜುಮುಆಗಳು, ಭಾಷಣಗಳು ಮತ್ತು ಹುಝೂರ್ ಅನ್ವರ್(ಅತಬಿಅ) ಅವರ ವಿವಿಧ ದೇಶಗಳಿಗೆ ಮಾಡಿದ ಅನುಗ್ರಹದಾಯಕ ಭೇಟಿಗಳ ಕುತೂಹಲಕಾರಿ ಮತ್ತು ವಿಶ್ವಾಸವರ್ಧಕ ವರದಿಗಳನ್ನು ಬದರ್ ಪತ್ರಿಕೆಯಲ್ಲಿ ನಿಯಮಿತವಾಗಿ ಪ್ರಕಟಿಸಲಾಗುತ್ತದೆ, ಇದು ಪ್ರತಿಯೊಬ್ಬ ಅಹ್ಮದಿಯೂ ಓದಲೇಬೇಕಾದ ವಿಷಯವಾಗಿದೆ. ಸರ್ವಶಕ್ತನಾದ ಅಲ್ಲಾಹನ ಅನುಗ್ರಹ ಮತ್ತು ಸಯ್ಯಿದುನಾ ಹುಝೂರ್ ಅನ್ವರ್(ಅತಬಿಅ) ಅವರ ಕರುಣೆಯಿಂದ, ಈ ಪತ್ರಿಕೆಯು ಈಗ ಉರ್ದು ಬಾಷೆಯ ಜೊತೆಗೆ ಹಿಂದಿ, ಬಂಗಾಳಿ, ತಮಿಳು, ತೆಲುಗು, ಮಲಯಾಳಂ, ಒರಿಯಾ ಮತ್ತು ಕನ್ನಡ ಭಾಷೆಗಳಲ್ಲಿಯೂ ಪ್ರಕಟವಾಗುತ್ತಿದೆ. ಬದರ್ ಪತ್ರಿಕೆಗೆ ಇನ್ನೂ ಚಂದಾದಾರರಾಗದ ಅಹ್ಮದಿ ಸ್ನೇಹಿತರು ಇದಕ್ಕೆ ಚಂದಾದಾರರಾಗಲು ಮತ್ತು ಅದನ್ನು ಸ್ವತಃ ಓದಲು ಮತ್ತು ಅವರ ಮಕ್ಕಳು ಮತ್ತು ಇತರ ಕುಟುಂಬ ಸದಸ್ಯರಿಗೆ ಅದನ್ನು ಓದಲು ಅವಕಾಶವನ್ನು ಒದಗಿಸುವಂತೆ ವಿನಂತಿಸಲಾಗಿದೆ. ಸಯ್ಯಿದುನಾ ಹಝ್ರತ್ ಅಮೀರುಲ್ ಮುಮಿನೀನ್(ಅತಬಿಅ) ಅವರ ಸೂಚನೆಗಳ ಮೇರೆಗೆ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಅಲ್ಲಾಹನು ನಮಗೆ ನೀಡಲಿ. ಆಮೀನ್. ಬದರ್ ಪತ್ರಿಕೆ ಸಮಯಕ್ಕೆ ಸರಿಯಾಗಿ ಬರದಿದ್ದರೆ, ಅಥವಾ ದೇಣಿಗೆ ನೀಡಲು ಅಥವಾ ಯಾವುದೇ ರೀತಿಯ ಮಾಹಿತಿಗಾಗಿ, ದಯವಿಟ್ಟು ಬದರ್ ವಾರಪತ್ರಿಕೆಯ ಕಚೇರಿ ವ್ಯವಸ್ಥಾಪಕರಿಗೆ ಸಂಪರ್ಕಿಸಿ. ಜಝಾಕುಮುಲ್ಲಾಹ್. **(ಪತ್ರಿಕಾಂಗ)**


"ಎಲ್ಲ ಮುಸ್ಲಿಮ್ ಪುರುಷರು ಮತ್ತು ಮುಸ್ಲಿಮ್ ಮಹಿಳೆಯರು ವಿದ್ಯೆ ಕಲಿಯುವುದು ಕಡ್ಡಾಯವಾಗಿದೆ"

(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**

**M.B. Nasir Ahmed Saheb & Family, Bengaluru, Karnataka**

**"ಯಾರು ಜನರಿಗೆ ಮೊದಲು ಸಲಾಂ ಹೇಳುತ್ತಾನೋ ಅವನು ಜನರಲ್ಲಿ ಅಲ್ಲಾಹನಿಗೆ ಅತ್ಯಂತ ಮೆಚ್ಚುಗೆಯವನು."**

(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**

**Late S.R Abdur Rauf Saheb & Family, Shimoga, Karnataka**

## ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪವಿತ್ರ ಜೀವನ

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ)

### ಮುಸ್ಲಿಮರಿಗೆ ಬಹಿಷ್ಕಾರ

ಒಟ್ಟಾರೆ ಹೇಳುವುದಾದರೆ, ಸತ್ಯವಿಶ್ವಾಸಿಗಳ ವಿರುದ್ಧ ಅವಿಶ್ವಾಸಿಗಳ ದೌರ್ಜನ್ಯ ಮಿತಿಮೀರಿ ಹೋಗುತ್ತಿತ್ತು. ಕೆಲವು ಸತ್ಯವಿಶ್ವಾಸಿಗಳು ಮಕ್ಕದಿಂದ ಹೊರಗೆ ಹೋಗಿದ್ದರು. ಬೇರೆ ಕೆಲವರು ಮಕ್ಕದಲ್ಲಿ ವಾಸಿಸುತ್ತಾ ಮೊದಲಿಗಿಂತ ಹೆಚ್ಚಾಗಿ ದೌರ್ಜನ್ಯಕ್ಕೆ ಗುರಿಯಾಗುತ್ತಾ ಹೋಗುತ್ತಿದ್ದರು. ಆದರೆ ದೌರ್ಜನ್ಯಗಾರರ ಹೃದಯಗಳು ಸಮಾಧಾನಗೊಂಡಿರಲಿಲ್ಲ. ಈ ಮೊದಲು ಕೃತಿಗಿಳಿಸಿದ ದೌರ್ಜನ್ಯಗಳು ಮುಸ್ಲಿಮರ ಹೃದಯಗಳನ್ನು ಧೈರ್ಯಗುಂದಿಸಲು ಸಹಕಾರಿಯಾಗಲಿಲ್ಲ, ಅವರ ವಿಶ್ವಾಸದಲ್ಲಿ ಯಾವುದೇ ಬದಲಾವಣೆ ಉಂಟಾಗಲಿಲ್ಲ, ಅವರು ಏಕದೇವಾರಾಧನೆಯಲ್ಲಿ ಇನ್ನಷ್ಟು ಮುಂದುವರಿದಿರುವರು ಮತ್ತು ವಿಗ್ರಹಗಳ ಬಗ್ಗೆ ಅವರ ವಿರೋಧ ಇನ್ನಷ್ಟು ಹೆಚ್ಚುತ್ತಾ ಇದೆ ಎಂದು ಮನವರಿಕೆ ಮಾಡಿಕೊಂಡು ಅವಿಶ್ವಾಸಿಗಳು ಇನ್ನೊಂದು ಸಮಾಲೋಚನೆಯ ಸಭೆಯನ್ನು ಜರಗಿಸಿದರು. ಅವರು ಆ ಸಭೆಯಲ್ಲಿ ಹೀಗೆ ತೀರ್ಮಾನಿಸಿದರು: ಮುಸ್ಲಿಮರೊಂದಿಗೆ ಸಂಪೂರ್ಣ ಸಂಬಂಧ ವಿಚ್ಛೇದಿಸಬೇಕು. ಅವರಿಗೆ ಸಾಮಗ್ರಿಗಳನ್ನು ಯಾರೂ ಮಾರಾಟಮಾಡಬಾರದು. ಅವರೊಂದಿಗೆ ಯಾರೂ ಕೊಡುಕೊಳ್ಳುವ ವ್ಯಾಪಾರ ಕೂಡ ಮಾಡಬಾರದು. ಅವರನ್ನು ಬಹಿಷ್ಕರಿಸಬೇಕು.

ಆಗ ಹಝ್ರತ್ ಮುಹಮ್ಮದ್ ಪೈಗಂಬರ್(ಸ), ಅವರ ಕೆಲವು ಶಿಷ್ಯರು, ಅವರ ಪತ್ನಿಯರು, ಮಕ್ಕಳು ಮತ್ತು ಕೆಲವು ಮುಸ್ಲಿಮೇತರ ಸಂಬಂಧಿಕರು (ಅವರು ಮುಸ್ಲಿಮೇತರರಾಗಿದ್ದರೂ ಹಝ್ರತ್ ಪೈಗಂಬರರನ್ನು(ಸ) ಬಿಟ್ಟು ಬಿಡಲು ಸಿದ್ಧರಿರಲಿಲ್ಲ) ಒಂದು ಪ್ರತ್ಯೇಕ ಸ್ಥಳದಲ್ಲಿ ಆಶ್ರಯಪಡೆಯಲು ನಿರ್ಬಂಧಿಸಲ್ಪಟ್ಟರು. ಆ ಸ್ಥಳ ಅಬೂತಾಲಿಬರ ಮಾಲಿಕತ್ವಕ್ಕೆ ಸೇರಿದ್ದಿತು.[15] ಅವರಿಗೆ ಜೀವಿಸಲು ಅವರ ಬಳಿ ಹಣವಿರಲಿಲ್ಲ ಮತ್ತು ಆಹಾರದ ಉಗ್ರಾಣವೂ ಇರಲಿಲ್ಲ. ಅವರು ಕಠಿಣವಾದ ಆ ನಿರ್ಗತಿಕ ಅವಸ್ಥೆಯಲ್ಲಿ ಹೇಗೆ ಕಾಲ ಕಳೆದರೆಂಬುದು ಬೇರೆಯವರು ಮನವರಿಕೆ ಮಾಡುವುದು ಸಾಧ್ಯವಾಗಲಾರದು. ಅಂದಾಜು ಮೂರು ವರ್ಷಗಳ ಕಾಲ ಇದೇ ಪರಿಸ್ಥಿತಿ ಮುಂದುವರಿಯಿತು. ಮಕ್ಕದವರು ಬಹಿಷ್ಕಾರದ ಕುರಿತು ಮಾಡಿದ ತೀರ್ಮಾನದಲ್ಲಿ ಯಾವುದೇ ವ್ಯತ್ಯಾಸವಾಗಲಿಲ್ಲ. ಆದರೆ ಅಂದಾಜು ಮೂರು ವರ್ಷಗಳ ನಂತರ ಮಕ್ಕದ ಐವರು ಸಜ್ಜನರ ಹೃದಯದಲ್ಲಿ ಈ ದೌರ್ಜನ್ಯದ ವಿರುದ್ಧ ಭಾವನೆಗಳು ಉಂಟಾದವು. ಅವರು ಮುಸ್ಲಿಮರು ವಾಸಿಸುತ್ತಿದ್ದ ಶಅಬ್ ಅಬೀತಾಲಿಬ್‌ಗೆ ಬಂದು ಅಲ್ಲಿಂದ ಮುಸ್ಲಿಮರನ್ನು ಹೊರಕ್ಕೆ ಬರಲು ಹೇಳಿದರು. ಬಹಿಷ್ಕಾರದ ಆಜ್ಞೆಯನ್ನು ಹಿಂತೆಗೆದುಕೊಳ್ಳುವುದಾಗಿ ಅವರು ತಿಳಿಸಿದರು.

ಅಬೂತಾಲಿಬರು ದೀರ್ಘಕಾಲದ ಬಂಧನ ಮತ್ತು ನಿರಾಹಾರದಿಂದ ಬಹಳ ಕ್ಷೀಣಿತರಾಗಿದ್ದರು. ಅವರು ತಮ್ಮ ಗೋತ್ರದ ಜನರೊಂದಿಗೆ ಹೇಳಿದರು: "ನೀವು ಮಾಡಿದ ಈ ದೀರ್ಘಕಾಲದ ದೌರ್ಜನ್ಯವನ್ನು ಸಮರ್ಥಿಸುವುದಾದರೂ ಹೇಗೆ?"

ಐವರು ಸಜ್ಜನರು ತಮ್ಮ ಸಮಾಜದ ವಿರುದ್ಧ ವಿದ್ರೋಹ ಮಾಡಿದ ಸಮಾಚಾರ ಕೂಡಲೆ ಸಿಡಿಲು ಮಿಂಚಿನಂತೆ ನಗರದಲ್ಲೆಲ್ಲಾ ಹಬ್ಬಿತು. ಮನುಷ್ಯ ಸಹಜವಾದ ಪ್ರಕೃತಿ ಪುನಃ ತಲೆಯೆತ್ತಲು ಪ್ರಾರಂಭಿಸಿತು. ಒಳಿತಿನ ಆತ್ಮ ಇನ್ನೊಮ್ಮೆ ಶ್ವಾಸೋಚ್ಛ್ವಾಸ ಮಾಡಲು ತೊಡಗಿತು. ಮಕ್ಕದ ಜನರು ತಮ್ಮ ಪೈಶಾಚಿಕ ಒಪ್ಪಂದವನ್ನು ಮುರಿಯಲು ನಿರ್ಬಂಧಿತರಾದರು. ಬಹಿಷ್ಕಾರದ ನಿರ್ಧಾರ ಕೊನೆಗೊಂಡಿತು. ಆದರೆ ಮೂರುವರ್ಷಗಳ ಕಾಲ ಹಸಿವೆಯಿಂದ ಕಂಗೆಟ್ಟವರಿಗೆ ಅದು ತನ್ನ ಪರಿಣಾಮ ಬೀರಲು ತೊಡಗಿತು. ಕೆಲವೇ ದಿನಗಳಲ್ಲಿ ಹಝ್ರತ್ ಪೈಗಂಬರರ(ಸ) ನಿಷ್ಠಾವಂತೆಯಾದ ಪತ್ನಿ ಖದೀಜ(ರ) ಆ ಬಹಿಷ್ಕಾರದ ಕಾಲದಲ್ಲಿ ಅನುಭವಿಸಿದ ಕಷ್ಟಗಳ ಕಾರಣದಿಂದ ಮೃತರಾದರು. ಒಂದು ತಿಂಗಳ ನಂತರ ಅಬೂತಾಲಿಬರು ಸಹ ಈ ಲೋಕದಿಂದ ಅಗಲಿ ಹೋದರು.

### ಧರ್ಮಪ್ರಚಾರದಲ್ಲಿ ಉಂಟಾದ ತಡೆಗಳು ಮತ್ತು ಹಝ್ರತ್ ಪೈಗಂಬರರ(ಸ) ತಾಯಿಫ್ ಪ್ರಯಾಣ

ಹಝ್ರತ್ ಪೈಗಂಬರ್(ಸ) ಮತ್ತು ಅವರ ಶಿಷ್ಯರು ಅಬೂತಾಲಿಬರ ಸೌಹಾರ್ದದ ಪ್ರಭಾವದಿಂದ ಈಗ ವಂಚಿತರಾದರು. ಹಝ್ರತ್ ಪೈಗಂಬರರ(ಸ) ಗೃಹಜೀವನದ ಸಂಗಾತಿ ಸಹ ಅವರಿಂದ ಅಗಲಿ ಹೋದರು. ಅವರಿಬ್ಬರ ಜೊತೆಗಿದ್ದ ಬಾಂಧವ್ಯದ ಕಾರಣದಿಂದ ಸಹಜವಾಗಿ ದೌರ್ಜನ್ಯಗಾರರನ್ನು ತಡೆಯುತ್ತಿದ್ದವರ ಸಹಾನುಭೂತಿಗಳೂ ಕಡಿಮೆಯಾದುವು. ಅಬೂತಾಲಿಬರು ನಿಧನ ಹೊಂದಿದುದ ರಿಂದ ಉಂಟಾದ ಶೋಕದ ಕಾರಣದಿಂದ ಮತ್ತು ಅಬೂತಾಲಿಬರ ಮರಣ ಶಾಸನದ ಕಾರಣದಿಂದ ಕೆಲವು ದಿನಗಳವರೆಗೆ ಹಝ್ರತ್ ಪೈಗಂಬರರ(ಸ) ಕಠಿಣ ಶತ್ರುವಾದ, ಅಬೂತಾಲಿಬರ ಕಿರಿಯ ಸಹೋದರ ಅಬೂಲಹಬನು ಹಝ್ರತ್ ಪೈಗಂಬರ್‌ರಿಗೆ(ಸ) ಬೆಂಬಲ ನೀಡಿದ್ದನು. ಆದರೆ ಮಕ್ಕದ ಜನರು "ಮುಹಮ್ಮದ್ ಏಕದೇವನ ಏಕತ್ವದಲ್ಲಿ ನಂಬಿಕೆಯನ್ನು ಹೊಂದದವರನ್ನು ಅಪರಾಧಿಗಳೆಂದೂ ಶಿಕ್ಷಾರ್ಹರೆಂದೂ ಬಗೆದಿರುವರು" ಎಂದು ಹೇಳಿ ಅಬೂಲಹಬನನ್ನು ಉದ್ರೇಕಿಸಿದುದರಿಂದ ಆತನು ತನ್ನ ತಂದೆ ತಾತಂದಿರ ಅಭಿಮಾನದಿಂದ ಭಾವಾವೇಶಗೊಂಡು ಹಝ್ರತ್ ಪೈಗಂಬರ್‌ರಿಗೆ(ಸ) ಬೆಂಬಲ ಕೊಡುವುದನ್ನು ನಿಲ್ಲಿಸಿದನು ಮತ್ತು ಇನ್ನು ಮುಂದೆ ಮೊದಲಿಗಿಂತ ಅವರನ್ನು ಹೆಚ್ಚು ವಿರೋಧಿಸುವೆನೆಂದು ಪ್ರತಿಜ್ಞೆ ಮಾಡಿದನು.

ಬಹಿಷ್ಕೃತ ಮತ್ತು ಪ್ರತಿಬಂಧಕ ಸ್ಥಿತಿಯಲ್ಲಿ ಜೀವಿಸುತ್ತಾ ಇದ್ದುದರಿಂದ ಜನರು ತಮ್ಮ ಸಂಬಂಧಿಕರಿಂದ ದೂರವಿದ್ದ ಕಾರಣ ಬಾಂಧವ್ಯದಲ್ಲಿ (ಹೆಚ್ಚಿನ ಕಾವು ಇರದೆ) ಒಂದು ರೀತಿಯ ಶೈತ್ಯಾವಸ್ಥೆ ತಲೆದೋರಿತ್ತು. ಮಕ್ಕದ ಜನರು ಮುಸ್ಲಿಮರೊಂದಿಗೆ ಮಾತನಾಡುತ್ತಿರಲಿಲ್ಲ. ಆದುದರಿಂದ ಧರ್ಮಪ್ರಚಾರದ ಕ್ಷೇತ್ರ ಸೀಮಿತಗೊಂಡಿತ್ತು. ಹಝ್ರತ್ ಪೈಗಂಬರ್(ಸ) ಈ ಸ್ಥಿತಿಯನ್ನು ನೋಡಿ ಮಕ್ಕದ ಬದಲಿಗೆ ತಾಯಿಫ್ ನಗರಕ್ಕೆ ಹೋಗಿ ಅಲ್ಲಿನ ಜನರಿಗೆ ಇಸ್ಲಾಮಿನ ಸಂದೇಶ ನೀಡಲು ನಿರ್ಧರಿಸಿದರು. ಮಕ್ಕದವರ ವಿರೋಧ ಹೆಚ್ಚಾದಂತೆ ಅವರ ಈ ನಿರ್ಧಾರ ಬಲಯುತವಾಯಿತು. ಮಕ್ಕದ ಜನರು ಅವರ ಮಾತುಗಳನ್ನು ಆಲಿಸುತ್ತಲೇ ಇರಲಿಲ್ಲ. ಅವರು ಮಕ್ಕದ ಮಾರ್ಗಗಳಲ್ಲಿ ನಡೆಯಲು ಅವಿಶ್ವಾಸಿಗಳು ಬಿಡುತ್ತಿರಲಿಲ್ಲ. ಹಝ್ರತ್ ಪೈಗಂಬರ್(ಸ) ಮನೆಯಿಂದ ಹೊರಟಾಗ ಅವರ ತಲೆಗೆ ಮಣ್ಣು ಎಸೆಯಲಾಗುತ್ತಿತ್ತು. ಜನರನ್ನು ಭೇಟಿಯಾಗುವುದು ಅವರಿಗೆ ಅಸಾಧ್ಯವಾಗುತ್ತಿತ್ತು. ಒಮ್ಮೆ ಹಝ್ರತ್ ಪೈಗಂಬರ್(ಸ) ಈ ಸ್ಥಿತಿಯಲ್ಲಿ ಮನೆಗೆ ಹಿಂದೆರಳಿದಾಗ ಅವರ ಒಬ್ಬ ಪುತ್ರಿ ಅವರ ತಲೆಯಿಂದ ಮಣ್ಣನ್ನು ಕೊಡವಿ ತೆಗೆಯುತ್ತಾ ಅಳಲು ತೊಡಗಿದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಓ ನನ್ನ ಪ್ರಿಯ ಪುತ್ರೀ, ನೀನು ಅಳಬೇಡ. ಅಲ್ಲಾಹನು ನಿನ್ನ ಪಿತನ ಜೊತೆಗಿದ್ದಾನೆ."

ಹಝ್ರತ್ ಪೈಗಂಬರ್(ಸ) ಸಂಕಷ್ಟಗಳಿಂದ ಗಾಬರಿಗೊಳ್ಳುತ್ತಿರಲಿಲ್ಲ. ಆದರೆ ಜನರು ಅವರ ಮಾತನ್ನು ಆಲಿಸಲು ತಯಾರಾಗದುದು ಅವರಿಗೆ ವ್ಯಸನಕರವಾಗಿತ್ತು. ಕಷ್ಟಗಳ ಬಗ್ಗೆ ಹೇಳುವುದಾದರೆ, ಅವುಗಳು ಆವಶ್ಯಕವೆಂದು ಅವರು ಭಾವಿಸುತ್ತಿದ್ದರು. ಯಾವುದೇ ವ್ಯಕ್ತಿ ಆತ ಗುಲಾಮನಾಗಿರಲಿ, ಸ್ವತಂತ್ರ ವ್ಯಕ್ತಿಯಾಗಿರಲಿ ತನಗೆ ಯಾವುದೇ ಕಷ್ಟಕೊಡದಿದ್ದರೆ ಅದು ಅವರಿಗೆ ಹೆಚ್ಚು ದುಃಖಕರವಾದ ದಿನವಾಗುತ್ತಿತ್ತು. ಅಂತಹ ದಿನಗಳಲ್ಲಿ ಅವರು ದುಃಖದಿಂದಲೂ ವ್ಯಥೆಯಿಂದಲೂ ಮೌನಾವಲಂಬಿಯಾಗಿ ಮಲಗುತ್ತಿದ್ದರು. ಕೊನೆಗೆ ಅಲ್ಲಾಹನು ಅವರನ್ನು ಸಮಾಧಾನಪಡಿಸಿ, "ನೀನು ಹೋಗಿ ಪದೇ ಪದೇ ಆವರ್ತಿಸಿ ಅವರಿಗೆ ಎಚ್ಚರಿಕೆ ನೀಡು. ಅವರ ನಿರ್ಲಕ್ಷ್ಯತೆಯ ಬಗ್ಗೆ ಯೋಚಿಸಬೇಡ" ಎಂದು ಹೇಳಿದನು. ಆದುದರಿಂದ ಜನರು ಹಝ್ರತ್ ಪೈಗಂಬರರಿಗೆ(ಸ) ಕಷ್ಟಕೊಡುವುದು ಅವರಿಗೆ ದುಃಖಕರವಾಗಿರಲಿಲ್ಲ. ಆದರೆ ಲೋಕಕ್ಕೆ ಮಾರ್ಗದರ್ಶನ ನೀಡಲು ನಿಯುಕ್ತರಾದ ಅಲ್ಲಾಹನ ಪ್ರವಾದಿ, ತನ್ನೊಂದಿಗೆ ಜನರು ಮಾತನ್ನೇ ಆಡದಿರುವುದನ್ನು ಮತ್ತು ತನ್ನ ಮಾತನ್ನು ಕೇಳಲು ತಯಾರಾಗದುದನ್ನು ಹೇಗೆ ತಾನೆ ಸಹಿಸಬಲ್ಲರು. ಇಂತಹ ನಿರುಪಯುಕ್ತ ಜೀವಿತ ಅವರಿಗೆ ಅತ್ಯಂತ ದುಃಖಕರವಾಗಿತ್ತು. ಆದುದರಿಂದ ಹಝ್ರತ್ ಪೈಗಂಬರ್(ಸ) ತಾಯಿಫ್ ನಗರಕ್ಕೆ ಹೋಗಲು ಮತ್ತು ಅಲ್ಲಿನ ಜನರಿಗೆ ಅಲ್ಲಾಹನ ಸಂದೇಶ ತಲಪಿಸಲು ನಿರ್ಧರಿಸಿದರು.

ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶದ ಕಡೆಗೆ ಸಂಚರಿಸುತ್ತಾ ವಿವಿಧ ಜನಾಂಗಗಳಿಗೆ ಬೋಧಿಸುತ್ತಾ ತಿರುಗುವುದು ಅಲ್ಲಾಹನ ಪ್ರವಾದಿಗಳಿಗೆ ನಿರ್ದೇಶಿಸಲಾಗಿರುತ್ತದೆ. ಹಝ್ರತ್ ಮೂಸಾ(ಅ) ಹೀಗೆಯೇ ಮಾಡಿದರು. ಅವರು ಕೆಲವೊಮ್ಮೆ ಫಿರ್‌ಔನನ ಜನಾಂಗದವರನ್ನು ಸಂಬೋಧಿಸಿ ಮಾತನಾಡುತ್ತಿದ್ದರು. ಅವರು ಹಝ್ರತ್ ಇಸ್‌ಹಾಖರ(ಅ) ಸಂತತಿಗಳನ್ನೂ ಮದ್‌ಯನ್ ನಿವಾಸಿಗಳನ್ನೂ ಬೇರೆ ಬೇರೆ ಕಾಲಗಳಲ್ಲಿ ಸಂಬೋಧಿಸಿ ಮಾತನಾಡುತ್ತಿದ್ದರು.

ಹಝ್ರತ್ ಈಸಾ(ಅ) ಧರ್ಮಪ್ರಚಾರದ ಉತ್ಸಾಹದಿಂದ ಕೆಲವೊಮ್ಮೆ ಗಲೀಲದ ಜನರನ್ನೂ ಕೆಲವೊಮ್ಮೆ ಜೋರ್ಡನ್ ನದಿಯ ಆಚೆ ದಡದವರನ್ನೂ ಕೆಲವೊಮ್ಮೆ ಜೆರುಸಲೇಮಿನ ಜನರನ್ನೂ ಸಂಬೋಧಿಸಿ ಉಪದೇಶಿಸುತ್ತಿದ್ದರು. ಕೆಲವು ಸಾರಿ ಬೇರೆಯವರಿಗೂ ಉಪದೇಶಿಸುತ್ತಿದ್ದರು.

(ಮುಂದುವರಿಯುವುದು)

## ಹಝ಼್ರತ್ ಮಸೀಹ್ ಮೌಊದರ(ಅಲೈಹಿಸ್ಸಲಾಮ್) ಪವಿತ್ರ ಜೀವನ

ಹಝ಼್ರತ್ ಮಿರ್ಝಾ಼ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ)

**(30) ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್:** ಈ ವಿನೀತ ಸೇವಕ (ಖಾಕ್ಸಾರ್) ವಿನಮ್ರವಾಗಿ ಹೇಳುವುದೇನೆಂದರೆ: ಹಝ಼್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರ ಒಂದು ವಿಶೇಷ ಅಭ್ಯಾಸವೆಂದರೆ, ಅವರು ಪ್ರತಿಯೊಬ್ಬ ವ್ಯಕ್ತಿಯ ಕನಸನ್ನು ಅತ್ಯಂತ ಗಮನದಿಂದ ಆಲಿಸುತ್ತಿದ್ದರು. ಅನೇಕ ಸಂದರ್ಭಗಳಲ್ಲಿ ಆ ಕನಸುಗಳನ್ನು ಸ್ವತಃ ದಾಖಲಿಸಿಕೊಂಡು (ನೋಟ್ ಮಾಡಿಕೊಂಡು) ಇಡುತ್ತಿದ್ದರು. ಒಮ್ಮೆ ಮಿರ್ಝಾ಼ ಕಮಾಲುದ್ದೀನ್ ಮತ್ತು ಅವರ ಸಹಚರರು ಮಸೀದಿಯ ಕೆಳಗಿದ್ದ ದಾರಿಯನ್ನು ಗೋಡೆ ಕಟ್ಟಿಸಿ ಮುಚ್ಚಿಬಿಟ್ಟಿದ್ದರು. ಅದರ ಪರಿಣಾಮವಾಗಿ ಅಹ್ಮದಿಗಳಿಗೆ ತೀವ್ರ ತೊಂದರೆ ಉಂಟಾಯಿತು. ಆ ಸಂದರ್ಭದಲ್ಲೇ ಹಝ಼್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರು ಕಾನೂನು ಕ್ರಮ ಕೈಗೊಳ್ಳಬೇಕಾದ ಪರಿಸ್ಥಿತಿ ಎದುರಾಯಿತು. (ಈ ಘಟನೆಯನ್ನು ಹೊರತುಪಡಿಸಿ, ಹಝ಼್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರು ತಮ್ಮ ಜೀವನದಲ್ಲಿ ಯಾರ ವಿರುದ್ಧವೂ ಸ್ವತಃ ಮೊಕದ್ದಮೆ ಹೂಡಲಿಲ್ಲ.) ಅದೇ ಸಮಯದಲ್ಲಿ ನಾನು ಒಂದು ಕನಸು ಕಂಡೆ. ಕನಸಿನಲ್ಲಿ, ಮಸೀದಿಯ ದಾರಿಯನ್ನು ಮುಚ್ಚಿದ್ದ ಆ ಗೋಡೆಯನ್ನು ನೆಲಸಮ ಮಾಡಲಾಗುತ್ತಿತ್ತು. ನಾನು ಆ ಕುಸಿದ ಗೋಡೆಯ ಮೇಲಿನಿಂದ ನಡೆದು ಹೋಗುತ್ತಿರುವುದನ್ನು ಕಂಡೆ. ನಾನು ಈ ಕನಸನ್ನು ಹಝ಼್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರ ಸಮ್ಮುಖದಲ್ಲಿ ವಿವರಿಸಿದೆ. ಹಝ಼್ರತ್ ಸಾಹಿಬ್ (ಅಲೈಹಿಸ್ಸಲಾಮ್) ಅದನ್ನು ಅತ್ಯಂತ ಗಮನವಿಟ್ಟು ಆಲಿಸಿ, ತಮ್ಮ ದಾಖಲೆಯಲ್ಲಿ ಬರೆದುಕೊಂಡರು. ಆ ಸಮಯದಲ್ಲಿ ನಾನು ಇನ್ನೂ ಬಾಲಕನಾಗಿದ್ದೆ.

**(31) ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್:** ಈ ವಿನೀತ ಸೇವಕ (ಖಾಕ್ಸಾರ್) ವಿನಮ್ರವಾಗಿ ಹೇಳುವುದೇನೆಂದರೆ: 1905ರ ಭೀಕರ ಭೂಕಂಪ ಸಂಭವಿಸಿದ ದಿನಗಳಲ್ಲಿ, ಹಝ಼್ರತ್ ಮಸೀಹ್ ಮೌಊದ್ ಅ.ಸ. ತೋಟದಲ್ಲಿ ವಾಸಕ್ಕಾಗಿ ತೆರಳಿದ್ದರು. ಆ ದಿನಗಳಲ್ಲಿ ಮುಫ್ತಿ ಮುಹಮ್ಮದ್ ಸಾದಿಕ್ ಸಾಹಿಬರ ಪುತ್ರ ಮುಹಮ್ಮದ್ ಮಂಝೂ಼ರ್ ಇನ್ನೂ ಸಂಪೂರ್ಣವಾಗಿ ಬಾಲಕನಾಗಿದ್ದನು. ಅವನು ಕನಸಿನಲ್ಲಿ ಅನೇಕ ಆಡುಗಳನ್ನು ಖುರ್ಬಾನಿ ಮಾಡಲಾಗುತ್ತಿರುವುದನ್ನು ಕಂಡನು. ಈ ವಿಷಯ ಹಝ಼್ರತ್ ಅವರ ಗಮನಕ್ಕೆ ಬಂದಾಗ, ಅವರು ಹಲವಾರು ಆಡುಗಳನ್ನು ತರಿಸಿ ಸದಖ ಮಾಡಿಸಿದರು. ಹುಝೂ಼ರ್(ಅ) ಅವರ ಅನುಸರಣೆಯಲ್ಲಿ ಇನ್ನೂ ಅನೇಕ ಜನರೂ ಅದೇ ರೀತಿಯಲ್ಲಿ ಸದಖ ಮಾಡಿದರು. ನನ್ನ ಅಂದಾಜಿನ ಪ್ರಕಾರ, ಆ ಸಮಯದಲ್ಲಿ ತೋಟದಲ್ಲಿ ನೂರಕ್ಕೂ ಹೆಚ್ಚು ಆಡುಗಳನ್ನು ಜಿಬ್ಹ್ ಮಾಡಲಾಗಿರಬಹುದು.

**(32) ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್:** ಈ ವಿನೀತ ಸೇವಕ (ಖಾಕ್ಸಾರ್) ವಿನಮ್ರವಾಗಿ ಹೇಳುವುದೇನೆಂದರೆ: 1905ರ ಭೂಕಂಪ ಸಂಭವಿಸಿದಾಗ ನಾನು ಬಾಲಕನಾಗಿದ್ದೆ. ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬರ ನಗರದ ಮನೆಯ ಪಕ್ಕದಲ್ಲೇ ಹೊಂದಿಕೊಂಡಿದ್ದ ಹುಝೂ಼ರ್(ಅ)ರ ಮನೆಯ ಒಂದು ಭಾಗದಲ್ಲಿ ನಾವು ಇತರ ಮಕ್ಕಳೊಂದಿಗೆ ಮಂಚಗಳ ಮೇಲೆ ಮಲಗಿದ್ದೆವು. ಭೂಕಂಪ ಸಂಭವಿಸಿದಾಗ ನಾವೆಲ್ಲರೂ ಭಯಭೀತರಾಗಿ ತಕ್ಷಣ ಎದ್ದುಬಿಟ್ಟೆವು. ಏನು ನಡೆಯುತ್ತಿದೆ ಎಂಬುದೇ ನಮಗೆ ತಿಳಿದಿರಲಿಲ್ಲ. ಅಂಗಳಕ್ಕೆ ಬಂದಾಗ ಮೇಲಿನಿಂದ ಕಲ್ಲುಚೂರುಗಳು ಮತ್ತು ಇಟ್ಟಿಗೆಯ ತುಂಡುಗಳು ಸುರಿಯುತ್ತಿದ್ದವು. ನಾವು ಓಡುತ್ತಾ ದೊಡ್ಡ ಮನೆಯ ಕಡೆಗೆ ಬಂದೆವು. ಅಲ್ಲಿ ಹಝ಼್ರತ್ ಮಸೀಹ್ ಮೌಊದ್ ಅ.ಸ. ಮತ್ತು ವಾಲಿದಾ ಸಾಹಿಬಾ ಕೋಣೆಯಿಂದ ಹೊರಬರುತ್ತಿದ್ದರು. ನಾವು ತಕ್ಷಣವೇ ಹುಝೂ಼ರ್(ಅ) ಅವರನ್ನು ಹಿಡಿದುಕೊಂಡು ಅವರೊಂದಿಗೆ ಅಂಟಿಕೊಂಡೆವು. ಆ ಸಮಯದಲ್ಲಿ ಹುಝೂರ್ ಅವರೂ ಗಾಬರಿಗೊಂಡಿದ್ದರು ಮತ್ತು ದೊಡ್ಡ ಅಂಗಳದ ಕಡೆಗೆ ಹೋಗಲು ಬಯಸುತ್ತಿದ್ದರು. ಆದರೆ ಎಲ್ಲ ಕಡೆಯಿಂದಲೂ ಮಕ್ಕಳು ಅವರನ್ನು ಅಪ್ಪಿಕೊಂಡಿದ್ದರು ಮತ್ತು ವಾಲಿದಾ ಸಾಹಿಬಾರೂ ಅವರೊಂದಿಗೆ ಇದ್ದರು. ಯಾರೋ ಈ ಕಡೆಗೆ ಎಳೆಯುತ್ತಿದ್ದರು, ಮತ್ತಾರೋ ಆ ಕಡೆಗೆ ಎಳೆಯುತ್ತಿದ್ದರು; ಹುಝೂ಼ರ್ ಎಲ್ಲರ ಮಧ್ಯದಲ್ಲಿದ್ದರು. ಕೊನೆಗೆ ಬಹಳ ಕಷ್ಟಪಟ್ಟು ಹುಝೂ಼ರ್ ಮತ್ತು ಅವರೊಂದಿಗೆ ಅಂಟಿಕೊಂಡಿದ್ದ ನಾವು ಎಲ್ಲರೂ ದೊಡ್ಡ ಅಂಗಳಕ್ಕೆ ತಲುಪಿದೆವು. ಅಷ್ಟರೊಳಗೆ ಭೂಕಂಪದ ಕಂಪನಗಳೂ ಸ್ವಲ್ಪ ಶಮನಗೊಂಡಿದ್ದವು. ಸ್ವಲ್ಪ ಸಮಯದ ನಂತರ ಹುಝೂರ್ ಅವರು ನಮ್ಮನ್ನು ಕರೆದುಕೊಂಡು ತಮ್ಮ ತೋಟಕ್ಕೆ ತೆರಳಿದರು. ಇತರ ಅಹ್ಮದೀ ಸಹಾಬಾಗಳೂ ತಮ್ಮ ಸಾಮಾನುಗಳನ್ನು ತೆಗೆದುಕೊಂಡು ತೋಟಕ್ಕೆ ಬಂದು ಸೇರಿದರು. ಅಗತ್ಯಕ್ಕೆ ತಕ್ಕಂತೆ ಕೆಲವು ಕಚ್ಚಾ ಮನೆಗಳನ್ನು ನಿರ್ಮಿಸಲಾಯಿತು ಮತ್ತು ಕೆಲವು ಗುಡಾರಗಳನ್ನು ತರಿಸಲಾಯಿತು. ನಂತರ ನಾವು ಎಲ್ಲರೂ ದೀರ್ಘಕಾಲ ತೋಟದಲ್ಲಿಯೇ ವಾಸಿಸಿದ್ದೆವು. ಆ ದಿನಗಳಲ್ಲಿ ಮದರಸವೂ ಅಲ್ಲಿಯೇ ನಡೆಯುತ್ತಿತ್ತು. ಅಂದರೆ, ತೋಟದಲ್ಲಿ ಒಂದು ಸಂಪೂರ್ಣ ನಗರವೇ ನೆಲೆಸಿದಂತಾಗಿತ್ತು. ಅಲ್ಲಾಹ್! ಅಲ್ಲಾಹ್! ಎಂತಹ ಕಾಲವಾಗಿತ್ತು ಅದು!

**(33) ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್:** ಖಾಝಿ಼ ಅಮೀರ್ ಹುಸೈನ್ ಸಾಹಿಬರು ನಮಗೆ ವಿವರಿಸಿದರು: ಆರಂಭದಲ್ಲಿ ಪ್ರಯಾಣದಲ್ಲಿರುವಾಗ ಸಾಮಾನ್ಯ ಪರಿಸ್ಥಿತಿಯಲ್ಲಿ ಕಸ್ರ್ ನಮಾಝ್ ಜಾಯಿಝ್ ಅಲ್ಲ; ಯುದ್ಧದ ಪರಿಸ್ಥಿತಿಯಲ್ಲಿ ಅಥವಾ ಫಿತ್ನೆಯ ಭಯವಿರುವ ಸಂದರ್ಭದಲ್ಲಿ ಮಾತ್ರ ಕಸ್ರ್ ನಮಾಝ್ ಜಾಯಿಝ್ ಎಂದು ನಾನು ನಂಬಿದ್ದೆ. ಈ ವಿಷಯದಲ್ಲಿ ಹಝ್ರತ್ ಖಲೀಫತುಲ್ ಅವ್ವಲ್ ರ.ಅ. ಅವರೊಂದಿಗೆ ನಾನು ಬಹಳ ಚರ್ಚೆ ಮಾಡುತ್ತಿದ್ದೆ. ಖಾಝಿ಼ ಸಾಹಿಬರು ಹೇಳಿದರು: ಹಝ಼್ರತ್ ಮಸೀಹ್ ಮೌಊದ್ ಅ.ಸ. ಅವರ ಗೋರ್ದಾಸ್ಪುರದ ಮೊಕದ್ದಮೆಯ ದಿನಗಳಲ್ಲಿ ಒಂದು ಸಲ ನಾನೂ ಅಲ್ಲಿಗೆ ಹೋಗಿದ್ದೆ. ಹಝ಼್ರತ್ ಅವರೊಂದಿಗೆ ಮೌಲ್ವೀ ಸಾಹಿಬರು (ಹಝ಼್ರತ್ ಖಲೀಫತುಲ್ ಅವ್ವಲ್ ರ.ಅ.) ಮತ್ತು ಮೌಲ್ವೀ ಅಬ್ದುಲ್ ಕರೀಮ್ ಸಾಹಿಬರೂ ಇದ್ದರು. ಝುಹ್ರ್ ನಮಾಝಿನ ಸಮಯ ಬಂದಾಗ ಹುಝೂ಼ರ್(ಅ) ಅವರು ನನಗೆ, "ಖಾಝಿ಼ ಸಾಹಿಬ್, ನೀವು ನಮಾಝ್ ಮಾಡಿಸಿ" ಎಂದು ಹೇಳಿದರು. ನಾನು ಮನಸ್ಸಿನಲ್ಲಿ ದೃಢ ನಿರ್ಧಾರ ಮಾಡಿಕೊಂಡೆ: ಇಂದು ನನಗೆ ಅವಕಾಶ ಸಿಕ್ಕಿದೆ; ನಾನು ಕಸ್ರ್ ಮಾಡುವುದಿಲ್ಲ, ಪೂರ್ಣ ನಮಾಝ್ ಮಾಡಿಸುತ್ತೇನೆ. ಇದರಿಂದ ಈ ಮಸಲೆಯ ಬಗ್ಗೆ ಯಾವುದಾದರೂ ತೀರ್ಮಾನವಾಗಲಿ ಎಂದುಕೊಂಡೆ. ಈ ನಿರ್ಧಾರ ಮಾಡಿಕೊಂಡು ನಾನು ನಮಾಝಿಗಾಗಿ ಕೈಗಳನ್ನು ಎತ್ತಲು ಹೊರಟಾಗ, ಹುಝೂ಼ರ್(ಅ) ನನ್ನ ಹಿಂದೆ ಬಲಭಾಗದಲ್ಲಿ ನಿಂತಿದ್ದರು. ಅವರು ತಕ್ಷಣ ಒಂದು ಹೆಜ್ಜೆ ಮುಂದೆ ಬಂದು ನನ್ನ ಕಿವಿಯ ಬಳಿಗೆ ಬಾಯಿ ತಂದು, "ಖಾ಼ಝಿ಼ ಸಾಹಿಬ್, ಎರಡೇ ರಕಅತ್ ಓದುತ್ತೀರಲ್ಲವೇ?" ಎಂದು ಕೇಳಿದರು. ನಾನು ಹೇಳಿದೆ: "ಹುಝೂರ್, ಎರಡೇ ರಕಅತ್ ಓದುತ್ತೇನೆ." ಅಷ್ಟೇ. ಆ ಕ್ಷಣದಿಂದ ನಮ್ಮ ಮಸಲೆಯ ಸಮಸ್ಯೆ ಪರಿಹಾರವಾಯಿತು ಮತ್ತು ನಾನು ನನ್ನ ಹಿಂದಿನ ಅಭಿಪ್ರಾಯವನ್ನು ತ್ಯಜಿಸಿದೆ.

**(34) ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್:** ಖಾಝಿ಼ ಅಮೀರ್ ಹುಸೈನ್ ಸಾಹಿಬರು ವಿವರಿಸಿದರು: ನನ್ನ ಮೊದಲ ಪತ್ನಿಯಿಂದ ಒಬ್ಬ ಮಗನಿದ್ದನು. ಅವನು ನಿಧನರಾದನು. ಅವನ ತಾಯಿ ಬಹಳವಾಗಿ ಅಳುತ್ತಾ, ಗೋಳಾಡುತ್ತಾ, ಶೋಕವ್ಯಕ್ತಪಡಿಸಿದಳು. ಮಗುವಿನ ನಾನಿಯೂ ಅದೇ ರೀತಿಯಲ್ಲಿ ವರ್ತಿಸಿದಳು. ನಾನು ಅವರನ್ನು ಬಹಳವಾಗಿ ತಡೆಯಲು ಪ್ರಯತ್ನಿಸಿದೆ. ಆದರೆ ಅವರು ಕೇಳಲಿಲ್ಲ. ಹಝ಼್ರತ್ ಮಸೀಹ್ ಮೌಊದ್ ಅ.ಸ. ಆ ಮಗುವಿನ ಜನಾಝಾ ನಮಾಝ್‌ಗಾಗಿ ಬಂದಾಗ, ಜನಾಝಾ ನಮಾಝಿನ ನಂತರ ಅವರು ಎದ್ದು ಬಹಳ ಹೊತ್ತು ವಅಝ್(ಉಪದೇಶ) ಮಾಡಿದರು. ಕೊನೆಯಲ್ಲಿ ಅವರು, "ಕಾಝಿ ಸಾಹಿಬ್, ನನ್ನ ಈ ನಸೀಹತ್ ಅನ್ನು ನಿಮ್ಮ ಮನೆಯವರಿಗೂ ತಲುಪಿಸಿ" ಎಂದು ಹೇಳಿದರು. ನಾನು ಮನೆಗೆ ಬಂದು ನನ್ನ ಪತ್ನಿಗೆ ಹುಝೂ಼ರ್(ಅ) ಅವರ ವಅಝ್ ಅನ್ನು ತಿಳಿಸಿದೆ. ನಂತರ ಅವಳ ಇನ್ನೂ ಇಬ್ಬರು–ಮೂರು ಮಕ್ಕಳು ನಿಧನರಾದರು. ಆದರೆ ಆಕೆ ಕಣ್ಣೀರು ಸುರಿಸುವುದನ್ನು ಹೊರತುಪಡಿಸಿ ಬೇರೆ ಯಾವುದೇ ರೀತಿಯ ಅತಿಯಾದ ಶೋಕಪ್ರದರ್ಶನ ಮಾಡಲಿಲ್ಲ.

**(35) ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್:** ಮೌಲ್ವೀ ಶೇರ್ ಅಲಿ ಸಾಹಿಬರು ನನಗೆ ವಿವರಿಸಿದರು: ಒಂದು ಸಲ ಹಝ಼್ರತ್ ಮಸೀಹ್ ಮೌಊದ್ ಅ.ಸ. ಖಾದಿಯಾನಿನಿಂದ ಗೋರ್ದಾಸ್ಪುರಕ್ಕೆ ಪ್ರಯಾಣಿಸುತ್ತಿದ್ದಾಗ ಬಟಾಲಾದಲ್ಲಿ ತಂಗಿದರು. ಹುಝೂ಼ರ್(ಅ) ಅವರನ್ನು ಹುಡುಕುತ್ತಾ ಖಾದಿಯಾನಿನಿಂದ ಬಟಾಲಾಗೆ ಬಂದಿದ್ದ ಒಬ್ಬ ಅತಿಥಿ ಅವರಿಗಾಗಿ ಕೆಲವು ಹಣ್ಣುಗಳನ್ನು ಉಡುಗೊರೆಯಾಗಿ ತಂದನು. ಆ ಹಣ್ಣುಗಳಲ್ಲಿ ದ್ರಾಕ್ಷಿಯೂ ಇತ್ತು. ಹುಝೂ಼ರ್(ಅ) ಅವರು ದ್ರಾಕ್ಷಿಯನ್ನು ಸೇವಿಸಿ, "ದ್ರಾಕ್ಷಿಯಲ್ಲಿ ಹುಳಿ ಇರುತ್ತದೆ; ಆದರೆ ಈ ಹುಳಿ ನಜ್ಲಾಗೆ ಹಾನಿಕಾರಕವಲ್ಲ" ಎಂದು ಹೇಳಿದರು. ನಂತರ ಅವರು, "ಈಗಷ್ಟೇ ನನ್ನ ಮನಸ್ಸಿಗೆ ದ್ರಾಕ್ಷಿ ತಿನ್ನಬೇಕೆಂಬ ಆಸೆ ಉಂಟಾಗಿತ್ತು; ಆದ್ದರಿಂದ ಅಲ್ಲಾಹ್ ಅದನ್ನು ಕಳುಹಿಸಿಕೊಟ್ಟನು" ಎಂದು ಹೇಳಿದರು. ಮತ್ತೆ ಅವರು, "ನಾನು ಅನೇಕ ಬಾರಿ ಅನುಭವಿಸಿದ್ದೇನೆ: ಯಾವ ವಸ್ತುವಿನ ಬಗ್ಗೆ ನನ್ನ ಹೃದಯದಲ್ಲಿ ಆಸೆ ಮೂಡುತ್ತದೆಯೋ, ಅಲ್ಲಾಹ್ ಅದನ್ನು ಒದಗಿಸುತ್ತಾನೆ" ಎಂದು ಹೇಳಿದರು. ನಂತರ ಒಂದು ಸಲದ ಘಟನೆಯನ್ನು ವಿವರಿಸಿದರು: "ನಾನು ಒಂದು ಪ್ರಯಾಣದಲ್ಲಿದ್ದಾಗ ನನ್ನ ಮನಸ್ಸಿನಲ್ಲಿ ಪೌಂಡೆ ಕಬ್ಬು ತಿನ್ನಬೇಕೆಂಬ ಆಸೆ ಮೂಡಿತು. ಆದರೆ ದಾರಿಯಲ್ಲಿ ಎಲ್ಲಿಯೂ ಕಬ್ಬು ದೊರೆಯುತ್ತಿರಲಿಲ್ಲ. ಅಲ್ಲಾಹನ ಕುದ್ರತ್ (ಶಕ್ತಿ) ನೋಡಿ! ಸ್ವಲ್ಪ ಸಮಯದ ನಂತರ ಒಬ್ಬ ವ್ಯಕ್ತಿ ನಮಗೆ ಎದುರಾದನು; ಅವನ ಬಳಿ ಪೌಂಡೆ ಕಬ್ಬು ಇತ್ತು. ಅವನಿಂದ ನಮಗೆ ಆ ಕಬ್ಬು ದೊರೆಯಿತು."

(ಮುಂದುವರಿಯುವುದು)

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**

**Love for All, Hatred for None**

EDITOR
TARIQ AHMED IDRIS.
Mobile : +91 9902678609
e-mail:
akhbaarbadarkannadaqdn@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2026-28 Vol No.07, Thursday, 03 September 2026, Issue No. 36

Act. MANAGER
ATHAR AHMAD SHAMIM.
Mobile : +91 99156 39670
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

* ಕಝಾಕಿಸ್ತಾನದ ಯೆಸ್ಬೋಲ್ ಸಾಹಿಬ್ ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸುತ್ತಾ ಹೇಳುತ್ತಾರೆ: ಜಲ್ಸ ಸಾಲಾನದಲ್ಲಿ ಭಾಗವಹಿಸಿದ ನಂತರ ನನಗಿರುವ ಭಾವನೆಗಳನ್ನು ನಾನು ವರ್ಣಿಸಲು ಸಾಧ್ಯವಿಲ್ಲ, ಮೇಲಾಗಿ, ನನ್ನ ವಿಶ್ವಾಸವು ತುಂಬಾ ದೃಢವಾಗಿದೆ ಎಂದು ನಾನು ಭಾವಿಸುತ್ತೇನೆ. ಹುಝೂರ್ ಅನ್ವರ್(ಅತಬಿಅ) ಅವರೊಂದಿಗಿನ ನನ್ನ ವೈಯಕ್ತಿಕ ಭೇಟಿಯ ಸಮಯದಲ್ಲಿ, ನಾನು ಅಳುತ್ತಿದ್ದೆ ಮತ್ತು ಏನನ್ನೂ ಹೇಳಲು ಸಾಧ್ಯವಾಗಲಿಲ್ಲ. ಸರ್ವಶಕ್ತನಾದ ಅಲ್ಲಾಹನು ಈ ಜಲ್ಸವನ್ನು ನಮಗೆಲ್ಲರಿಗೂ ತುಂಬಾ ಅನುಗ್ರಹದಾಯಕ ಮಾಡಲಿ.

* ಕಝಾಕಿಸ್ತಾನದ ಅಹ್ಮದಿ ಸ್ನೇಹಿತ ಅಸ್ಲಾನ್ ತೆಮಿರ್ಖಾನೋವ್ ಸಾಹಿಬ್ ಹೇಳುತ್ತಾರೆ: ಹುಝೂರ್ ಅನ್ವರ್(ಅತಬಿಅ)ರ ಭಾಷಣಗಳು ಮತ್ತು ಜಲ್ಸದಲ್ಲಿ ಭಾಷಣಕಾರರ ಭಾಷಣಗಳು ನನ್ನ ಮೇಲೆ ಬಹಳ ಪ್ರಯೋಜನಕಾರಿ ಪ್ರಭಾವ ಬೀರಿದವು. ಅವು ನನ್ನ ಹೃದಯವನ್ನು ಮುಟ್ಟಿದವು ಮತ್ತು ಅನೇಕ ಸಂದರ್ಭಗಳಲ್ಲಿ ನನ್ನನ್ನು ಚಿಂತಿಸುವಂತೆ ಒತ್ತಾಯಿಸಿದವು. ದೇವರು ಬಯಸಿದರೆ, ಮುಂದಿನ ವರ್ಷ ನಾನು ಜಲ್ಸ ಸಾಲಾನದಲ್ಲಿ ಭಾಗವಹಿಸಲು ಮತ್ತು ಹುಝೂರ್ ಅನ್ವರ್(ಅತಬಿಅ)ರನ್ನು ನೋಡಲು ಸಾಧ್ಯವಾಗುತ್ತದೆ ಎಂದು ನಾನು ನಿರ್ಧರಿಸಿದ್ದೇನೆ ಮತ್ತುನನಗೆ ಹಸ್ತಲಾಘವ ಸಿಗಬಹುದು.

* ಕಿರ್ಗಿಝ್‌ಅಹ್ಮದಿ ಅತಿಥಿಯೊಬ್ಬರು ಹೇಳಿದರು: ಹುಝೂರ್ ಅನ್ವರ್(ಅತಬಿಅ) ಅವರ ಸಮ್ಮುಖದಲ್ಲಿ, ನನಗೆ ದಿವ್ಯಪ್ರಕಾಶ ಮಾತ್ರವಲ್ಲ, ವಿವರಿಸಲು ನನ್ನ ಸಾಮರ್ಥ್ಯಕ್ಕೆ ಮೀರಿದ ಬೇರೇನೋ ಅನಿಸುತ್ತದೆ, ಆದರೆ ನನ್ನ ಹೃದಯ ಮತ್ತು ಆತ್ಮವು ಸಂತೋಷದಿಂದ ತುಂಬಿದೆ.

* ಕಿರ್ಗಿಸ್ತಾನ್‌ನ ಬಖ್ಮಾಟೋವ್ ಜಮೀರ್ಬೆಕ್ ಕಚೀವಿಚ್ ಬರೆಯುತ್ತಾರೆ: ನನ್ನ ಅಭಿಪ್ರಾಯದಲ್ಲಿ, ಜರ್ಮನಿಯಲ್ಲಿ ಜಲ್ಸ ಸಾಲಾನವು ಬಹಳ ಉನ್ನತ ಮಟ್ಟದಲ್ಲಿ ನಡೆಯಿತು. ಜರ್ಮನಿಯಲ್ಲಿ ಜಲ್ಸ ಸಾಲಾನದಲ್ಲಿ ಹಾಜರಾಗುವುದು ಇದು ನನ್ನ ಎರಡನೇ ಬಾರಿ. ನಾನು ಒಮ್ಮೆ ಲಂಡನ್‌ನಲ್ಲಿ ನಡೆದ ಜಲ್ಸ ಸಾಲಾನದಲ್ಲಿಯೂ ಹಾಜರಾಗಿದ್ದೇನೆ. ನಾನು ಪ್ರತಿ ಬಾರಿ ಜಲ್ಸ ಸಾಲಾನಕ್ಕೆ ಹಾಜರಾದಾಗ, ನನಗೆ ಹೊಸ ಹೊಸ ವಿಷಯಗಳನ್ನು ನೋಡಲು ಸಾಧ್ಯವಾಗುತ್ತದೆ. ಜಲ್ಸ ಸಾಲಾನದ ನಂತರ ನನ್ನ ಸ್ಥಳಕ್ಕೆ, ಅಂದರೆ ನನ್ನ ಮನೆಗೆ ಹಿಂತಿರುಗಲು ನನಗೆ ಅನಿಸದಿರಲು ಒಂದು ಕಾರಣವಿದೆ. ಜಲ್ಸ ಸಾಲಾನದ ಸಮಯದಲ್ಲಿ, ನಾನು ಸ್ವರ್ಗದಲ್ಲಿ ನಡೆಯುತ್ತಿದ್ದೇನೆ ಎಂದು ನನಗೆ ಅನಿಸುತ್ತದೆ. ಈ ವರ್ಷ, ನಾನು ನನ್ನ ಇಡೀ ಕುಟುಂಬದೊಂದಿಗೆ ಜಲ್ಸ ಸಾಲಾನದಲ್ಲಿ ಭಾಗವಹಿಸುತ್ತಿದ್ದೆ, ಆದರೆ ಸಂದರ್ಭಗಳಿಂದಾಗಿ, ನನ್ನ ಹಿರಿಯ ಮಗನನ್ನು ಮಾತ್ರ ನನ್ನೊಂದಿಗೆ ಕರೆತಂದಿದ್ದೇನೆ. ನನ್ನ ಮಗನಿಗೂ ಎಲ್ಲವೂ ಇಷ್ಟವಾಯಿತು.

ಅದೇ ರೀತಿ, ಹುಝೂರ್ ಅನ್ವರರ್(ಅತಬಿಅ) ಅವರೊಂದಿಗಿನ ಭೇಟಿಯ ಬಗ್ಗೆ, ನಾನು ಬಹಳ ದಿನಗಳಿಂದ ಕಾಯುತ್ತಿದ್ದ ಇಂತಹ ಭೇಟಿ ನನಗೆ ಸಿಕ್ಕಿತು ಎಂದು ಹೇಳಲು ಬಯಸುತ್ತೇನೆ. ಹುಝೂರ್ ಅನ್ವರ್(ಅತಬಿಅ) ಅವರನ್ನು ನೋಡುವುದು ನಮಗೆ ದೊರೆತ ದೊಡ್ಡ ಅದೃಷ್ಟ. ಜಲ್ಸ ಸಾಲಾನವು ಬಹಳ ಉನ್ನತ ಮಟ್ಟದಲ್ಲಿ ನಡೆಯಿತು. ನಿಮ್ಮನ್ನು ಭೇಟಿಯಾಗುವುದು ಸಹ ತುಂಬಾ ಚೆನ್ನಾಗಿತ್ತು. ಅದಕ್ಕಾಗಿ ನಾನು ಸರ್ವಶಕ್ತನಾದ ಅಲ್ಲಾಹನಿಗೆ ತುಂಬಾ ಕೃತಜ್ಞನಾಗಿದ್ದೇನೆ.

* ಜಲ್ಸದ ಸಮಯದಲ್ಲಿ, ನನ್ನ ಧರ್ಮ ಮತ್ತು ಜಮಾಅತ್ ಬಗ್ಗೆ ನಾನು ಬಹಳಷ್ಟು ಕಲಿತಿದ್ದೇನೆ ಎಂದು ಕಿರ್ಗಿಸ್ತಾನ್‌ನ ಕಚೀವ್ ಐಡರ್‌ಬೆಕ್ ಬರೆಯುತ್ತಾರೆ. ನನ್ನ ಅನೇಕ ಪ್ರಶ್ನೆಗಳಿಗೆ ಉತ್ತರಗಳು ನನಗೆ ಸಿಕ್ಕವು. ನನ್ನ ಜೀವನದಲ್ಲಿ ನಾನು ಜಲ್ಸ ಸಾಲಾನಕ್ಕೆ ಹಾಜರಾಗಿದ್ದು ಇದೇ ಮೊದಲು. ಮತ್ತು ನಾನು ವಿದೇಶಕ್ಕೆ ಹೋಗಿದ್ದು ಇದೇ ಮೊದಲು. ಇಷ್ಟೊಂದು ಜನಸಂದಣಿ ಇರುತ್ತದೆ ಎಂದು ನನಗೆ ತಿಳಿದಿರಲಿಲ್ಲ. ಜಲ್ಸದ ಸಮಯದಲ್ಲಿ, ಅಲ್ಲಿ ನಡೆಯುತ್ತಿರುವ ಎಲ್ಲವನ್ನೂ ನಾನು ಆಲಿಸಿದೆ. ಮತ್ತು ಅದು ನನಗೆ ತುಂಬಾ ಆಸಕ್ತಿದಾಯಕವೆನಿಸಿತು. ಎಲ್ಲವೂ ತುಂಬಾ ಚೆನ್ನಾಗಿತ್ತು.

* ಕಿರ್ಗಿಸ್ತಾನ್‌ನ ಕಿಶ್ಬೋಬೇವ್ ಸಲಾಮತ್ ಬರೆಯುತ್ತಾರೆ, ಇಂದು, ಸೆಪ್ಟೆಂಬರ್ 4, ನಾವು ಹುಝೂರ್ ಅನ್ವರ್(ಅತಬಿಅ)ರನ್ನು ಭೇಟಿಯಾದೆವು. ಜಲ್ಸವು ತುಂಬಾ ಆಹ್ಲಾದಕರ ಮತ್ತು ಅತ್ಯುತ್ತಮವಾಗಿತ್ತು. ಹುಝೂರ್ ಅನ್ವರ್(ಅತಬಿಅ)ರು ಸಭಾಂಗಣವನ್ನು ಪ್ರವೇಶಿಸಿದ ತಕ್ಷಣ, ಅವರ ಮುಖದಲ್ಲಿನ ಬೆಳಕನ್ನು ನೋಡಿ ನಾನು ತುಂಬಾ ಭಾವುಕನಾದೆ. ಸಮಯದ ಕೊರತೆಯ ಹೊರತಾಗಿಯೂ, ಹುಝೂರ್ ಅನ್ವರ್(ಅತಬಿಅ)ರು ನಮ್ಮ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿದರು. ಅವರು ನನ್ನ ಇಬ್ಬರು ಕಿರಿಯ ಹೆಣ್ಣುಮಕ್ಕಳನ್ನು ಉಡುಗೊರೆಯಾಗಿ ನೀಡಿದರು. ಅಂತಹ ಅವಕಾಶಕ್ಕಾಗಿ ನಾವು ಸರ್ವಶಕ್ತ ದೇವರಿಗೆ ತುಂಬಾ ಕೃತಜ್ಞರಾಗಿರುತ್ತೇವೆ.

* ಕಿರ್ಗಿಸ್ತಾನ್‌ನ ಯೂಲಿಯಾ ಗುಬನೋವಾ ಬರೆಯುತ್ತಾರೆ: ಇಂದು, ಸೆಪ್ಟೆಂಬರ್ 4, 2023 ರಂದು, ಜಲ್ಸ ಸಾಲಾನದ ನಂತರ, ನಾನು ಹುಝೂರ್ ಅನ್ವರ್(ಅತಬಿಅ)ರೊಂದಿಗೆ ಬಹುನಿರೀಕ್ಷಿತ ಜಲ್ಸವನ್ನು ಹೊಂದಿದ್ದೆ, ಮತ್ತು ನನ್ನ ಹೃತ್ಪೂರ್ವಕ ಅನಿಸಿಕೆಗಳನ್ನು ಹಂಚಿಕೊಳ್ಳಲು ನಾನು ಬಯಸುತ್ತೇನೆ. ನಾನು ನಿಜವಾಗಿಯೂ ಈ ಜಲ್ಸಗಾಗಿ ಎದುರು ನೋಡುತ್ತಿದ್ದೆ ಮತ್ತು ಹುಚ್ಚುಚ್ಚಾಗಿ ಭಾವುಕನಾಗಿದ್ದೆ. ಏಕೆಂದರೆ ಇಮಾಮ್ ಅಹ್ಮದಿಯಾ ಮುಸ್ಲಿಂ ಜಮಾಅತ್‌ನ ಮುಖ್ಯಸ್ಥರು ಮಾತ್ರವಲ್ಲದೆ ಸರ್ವಶಕ್ತನಾದ ಅಲ್ಲಾಹನು ಆಯ್ಕೆ ಮಾಡಿದ ವ್ಯಕ್ತಿಯೂ ಆಗಿದ್ದಾರೆ. ಮತ್ತು ಜನರ ನಾಯಕತ್ವವನ್ನು ಅವರಿಗೆ ವಹಿಸಿದ್ದಾರೆ. ಮತ್ತು ಜಲ್ಸದ ಸಮಯದಲ್ಲಿ, ಇಮಾಮ್‌ರ ಮೂಲತತ್ವದಿಂದ ಬರುವ ಬಲ ಮತ್ತು ಶಕ್ತಿಯನ್ನು ನಾನು ಅನುಭವಿಸಿದೆ. ಅಂದರೆ, ಅದೇ ಸಮಯದಲ್ಲಿ ಶಾಂತಿ ಮತ್ತು ಭದ್ರತೆ. ಭಾವನೆಗಳ ಮಿಶ್ರಣ ಮತ್ತು ಅಳುವ ಬಲವಾದ ಬಯಕೆ. ನಿಸ್ಸಂದೇಹವಾಗಿ, ಅಂತಹ ಶುದ್ಧ ವ್ಯಕ್ತಿಯ ಸಹವಾಸದಲ್ಲಿರುವಾಗ, ನಿಮ್ಮ ಆತ್ಮವು ಅನಿವಾರ್ಯವಾಗಿ ಸ್ವಲ್ಪ ಮಟ್ಟಿಗೆ ಅವರಂತೆ ಆಗಲು ಪ್ರಯತ್ನಿಸುತ್ತದೆ. ಹೃದಯವು ಯಾವಾಗಲೂ ಬದುಕಲು ಬಯಸುವ ವಾತಾವರಣ ಇದು. ಮತ್ತು ಈ ಅದ್ಭುತ ಸಂತೋಷವನ್ನು ಒಬ್ಬ ನಾಯಕ ಮುನ್ನಡೆಸುತ್ತಿದ್ದಾನೆ, ಅವರಿಂದ ನೀವು ಯಾವುದೇ ಪ್ರಶ್ನೆಯನ್ನು ಕೇಳಬಹುದು ಮತ್ತು ಸ್ವರ್ಗ ಮತ್ತು ಭೂಮಿಯ ಸೃಷ್ಟಿಕರ್ತನ ಧರ್ಮದ ಆಧಾರದ ಮೇಲೆ ಸ್ಪಷ್ಟ ಉತ್ತರವನ್ನು ಪಡೆಯಬಹುದು. ನನ್ನ ಇಮಾಮ್ ಅವರನ್ನು ಭೇಟಿಯಾಗಿ, ಅವರ ಹಿಂದೆ ಪ್ರಾರ್ಥಿಸಿ ಮತ್ತು ಸಮಾನ ಮನಸ್ಸಿನ ಜನರ ಗುಂಪಿನಲ್ಲಿ ಸೇರಿಕೊಂಡಿದ್ದಕ್ಕಾಗಿ ನಾನು ಸರ್ವಶಕ್ತನಾದ ಅಲ್ಲಾಹನಿಗೆ ತುಂಬಾ ಕೃತಜ್ಞನಾಗಿದ್ದೇನೆ. ಸರ್ವಶಕ್ತನಾದ ಅಲ್ಲಾಹನು ನಮ್ಮ ಇಮಾಮ್ ಮೇಲೆ ಲಕ್ಷಾಂತರ ಅನುಗ್ರಹಗಳನ್ನು ವರ್ಷಿಸಲಿ. ಮತ್ತು ಅವನ ಲೆಕ್ಕವಿಲ್ಲದಷ್ಟು ಅನುಗ್ರಹಗಳಿಂದ ಅವರನ್ನು ಅನುಗ್ರಹಿಸಲಿ. ಜಲ್ಸದ ಅವಿಸ್ಮರಣೀಯವಾಗಿತ್ತು.

* ಕಿರ್ಗಿಸ್ತಾನ್‌ನ ಜಲಾಲುದ್ದೀನ್ ಸಾಹಿಬ್ ಬರೆಯುತ್ತಾರೆ: ಜಲ್ಸ ಸಾಲಾನದಲ್ಲಿ ಭಾಗವಹಿಸಲು ನನಗೆ ಅವಕಾಶ ಸಿಕ್ಕಿದ್ದು ಇದೇ ಮೊದಲು. ಅದೇ ರೀತಿ, ಹುಝೂರ್ ಅನ್ವರ್(ಅತಬಿಅ) ಅವರ ನೇತೃತ್ವದಲ್ಲಿ ನಮಾಝುಗಳನ್ನು ನಿರ್ವಹಿಸುವಾಗ, ನಾನು ಹಿಂದೆಂದೂ ಅನುಭವಿಸದ ಆಧ್ಯಾತ್ಮಿಕ ಆನಂದವನ್ನು ಅನುಭವಿಸಿದೆ. ಇಷ್ಟೊಂದು ಜನರು ಇರುತ್ತಾರೆ ಎಂದು ನನಗೆ ತಿಳಿದಿರಲಿಲ್ಲ. ಈ ಜಲ್ಸದಲ್ಲಿ ಭಾಗವಹಿಸಲು ನನಗೆ ಅವಕಾಶ ನೀಡಿದ್ದಕ್ಕಾಗಿ ನಾನು ಸರ್ವಶಕ್ತನಾದ ಅಲ್ಲಾಹನಿಗೆ ತುಂಬಾ ಕೃತಜ್ಞನಾಗಿದ್ದೇನೆ. ಅದೇ ರೀತಿ, ನನ್ನ ನಂಬಿಕೆ ಮತ್ತು ಧರ್ಮನಿಷ್ಠೆಯಲ್ಲಿ ನಾನು ಬಲಶಾಲಿಯಾಗಿದ್ದೇನೆ. ಅಲ್ಹಮ್ದುಲಿಲ್ಲಾಹ್.

* ಕಿರ್ಗಿಸ್ತಾನ್‌ನ ಇಲ್ಯಾಸ್ ವಹಿದೋವ್ ಸಾಹಿಬ್ ಬರೆಯುತ್ತಾರೆ: ವಿನೀತನು ಕಿರ್ಗಿಸ್ತಾನ್‌ನಿಂದ ಜರ್ಮನಿಯಲ್ಲಿ ಜಲ್ಸ ಸಾಲಾನದಲ್ಲಿ ಭಾಗವಹಿಸಿದ್ದೆ. ಜಲ್ಸ ಸಾಲಾನದಲ್ಲಿ ಭಾಗವಹಿಸಿದ ನಂತರ, ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಇಮಾಮ್ ಮಹದಿ ಅಲೈಹಿಸ್ಸಲಾಮ್ ರವರ ಜಮಾಅತ್ ಅನ್ನು ಬೆಂಬಲಿಸುತ್ತಿದ್ದಾನೆ ಎಂದು ನನಗೆ ಮತ್ತೊಮ್ಮೆ ಮನವರಿಕೆಯಾಗಿದೆ. ವಾರ್ಷಿಕ ಸಮ್ಮೇಳನದಲ್ಲಿ ನನ್ನ ಆತ್ಮವನ್ನು ಹೆಚ್ಚು ಪ್ರಭಾವಿಸಿದ ವಿಷಯವೆಂದರೆ ನಾನು ಹುಝೂರ್ ಅನ್ವರ್(ಅತಬಿಅ) ಅವರ ನೇತೃತ್ವದಲ್ಲಿ ಪ್ರಾರ್ಥಿಸಿದಾಗ, ಅಲ್ಲಾ ತಾಲಾ ನನ್ನನ್ನು ನೋಡುತ್ತಿರುವಂತೆ ಭಾಸವಾಯಿತು. (ಮುಂದುವರಿಯುವುದು)

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.